ಅಧ್ಯಕ್ಷರು.—ಮೊನ್ನೆಯ ದಿವಸ ಚರ್ಚೆ ಮುಕ್ತಾಯವಾಯಿತು ಎಂದು ಹೇಳಿದ್ದೇನೆ. ಚರ್ಚೆ ಮುಕ್ತಾಯವಾದ ತಕ್ಷಣ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಬೇರೆ ಮಂತ್ರಿಗಳಾಗಲೀ ಉತ್ತರ ಕೊಡಬೇಕು. ಆ ಉದ್ದೇಶದಿಂದಲೇ ನಾವು ಇವತ್ತು ಬೆಳಿಗ್ಗೆ ೧೦ ಗಂಟೆಗೆ ಸಭೆಯನ್ನು ಕರೆದಿರುವುದು. ಇಲ್ಲದಿದ್ದರೆ ಪ್ರತಿದಿವಸ ಕರೆದ ಹಾಗೆ ೧೧ ಗಂಟೆಗೆ ಕರೆಯಬಹುದಿತ್ತು. ಇವತ್ತು ೧೦ ಗಂಟೆಗೆ ಸಭೆಯನ್ನು ಕರೆದಿರುವ ಉದ್ದೇಶವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆನ್ನುವುದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಪ್ರಾರಂಭ ಮಾಡಲಿ. ಚರ್ಚೆ ಮುಕ್ತಾಯವಾಗಿರುವ ಬಗ್ಗೆ ಬೇಕಾದರೆ ತಾವು ಈ ಹಿಂದಿನ ರೆಫರೆನ್ಸ್ ನೋಡಬಹುದು. ನಿಯಮ ೩೭ರ ರಲ್ಲಿ

> "Unless the Speaker otherwise directs the first hour of every day of sitting shall be available for the asking and answering of questions."

ಎಂದು ಹೇಳಿದೆ ಆದ್ದರಿಂದ. I have give directions that reply by the Hon. Chief Minister should come. ನಾವು ಹಿಂದಿನಿಂದ ಕೂಡ ಅನೇಕ ಸತ್‌ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದೇವೆ. ಆ ಸಂಪ್ರದಾಯದ ಪ್ರಕಾರ ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಹಿಂದೆ ಸಹ ಇದೇ ರೀತಿ ಅನೇಕ ಸಾರಿ ನಡೆದಿರುವುದು ಇದೆ. ಬೆಳಿಗ್ಗೆ ೯–೦೦ ಗಂಟೆಗೆ ಸಭೆಯನ್ನು ಕರೆದು ಮೊದಲು ಮಂತ್ರಿಗಳ ಉತ್ತರ, ತದನಂತರ ಪ್ರಶ್ನೋತ್ತರವೇಳೆ ಹಾಗೂ ಇನ್ನಿತರೆ ಕಾರ್ಯಕಲಾಪಗಳನ್ನು ನಡೆಸಿರುವುದು ಇದೆ. ಆದ್ದರಿಂದ ನಿಯಮ ೩೭ರ ಪ್ರಕಾರ ನಾನು ಸೂಚನೆ ಕೊಟ್ಟಿದ್ದೇನೆ. ಆ ಪ್ರಕಾರ ಇವತ್ತಿನ ಕಾರ್ಯಕಲಾಪದ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈಗ ಉತ್ತರ ಕೊಡಬಹುದು. ಮಾನ್ಯ ಸದಸ್ಯರೆಲ್ಲರೂ ಸಾವಧಾನದಿಂದ ಕೇಳಿ.

ವಿತ್ತೀಯ ಕಾರ್ಯಕಲಾಪಗಳು

1986–87ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ

(ಮುಖ್ಯಮಂತ್ರಿಗಳಿಂದ ಉತ್ತರ)

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ೧೯೮೬–೮೭ನೇ ಸಾಲಿನ ಮುಂಗಡ ಪತ್ರದ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸೂಚನೆಗಳನ್ನು ಅನೇಕ ಸಲಹೆಗಳನ್ನು ಮತ್ತು ಟೀಕೆಗಳನ್ನು ಮಾಡಿದಂಥ ಮಾನ್ಯ ಸದಸ್ಯರಿಗೆ ಅದು ಆ ಕಡೆಯ ಸದಸ್ಯರಿರಬಹುದು ಅಥವಾ ಈ ಕಡೆಯ ಸದಸ್ಯರು ಇರಬಹುದು, ಅವರೆಲ್ಲರಿಗೂ ನಾನು ಮೊಟ್ಟ ಮೊದಲನೆಯದಾಗಿ ನನ್ನ ಕೃತಜ್ಞತೆಗಳನ್ನು ಹೇಳಬಯಸುತ್ತೇನೆ, ಸ್ವಾಭಾವಿಕವಾಗಿ ಈ ವರ್ಷದ ಮುಂಗಡ ಪತ್ರದ ಚರ್ಚೆಯಲ್ಲಿ ನಮ್ಮ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಮತ್ತು ಯೋಜನೆಗಳಿಗೆ ಈ ವರ್ಷ ಹೆಚ್ಚು ಆದ್ಯತೆಯನ್ನು ಕೊಟ್ಟಿರುವ ಕೆಲವು ಕಾರ್ಯ ಕ್ರಮಗಳಿಗೆ ಸಂಬಂಧಪಟ್ಟ ಹಾಗೆ ಚರ್ಚೆ ಪ್ರಧಾನವಾಗಿತ್ತು ಎಂದು ನಾನು ಭಾವಿಸುತ್ತೇನೆ. ಈ ಚರ್ಚೆಯ ಕಾಲದಲ್ಲಿ ಪ್ರಾರಂಭದಿಂದ ಕೊನೆಯವರವಿಗೂ ಈ ಸದನದಲ್ಲಿ ಕುಳಿತು ಕೇಳಲು ನನಗೆ ಅನಾರೋಗ್ಯದ ಕಾರಣದಿಂದ ಸಾಧ್ಯವಾಗಲಿಲ್ಲ, ಅದಕ್ಕೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಾನು ಸದನದಲ್ಲಿ ಹಾಜರಿರದಿದ್ದರೂ ಸಹ ನನ್ನ ಸಹೋದ್ಯೋಗಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಚರ್ಚೆಯ ಮುಖ್ಯ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡು ಬಂದು ನನಗೆ ವಿಷಯಗಳನ್ನು ತಿಳಿಸಿದ್ದಾರೆ. ಅದರ ಆಧಾರದ ಮೇಲೆ ಇವತ್ತು ನಾನು ಸಂಕ್ಷಿಪ್ತವಾದ ಉತ್ತರವನ್ನು ಕೊಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಇರತಕ್ಕಂಥ ವಿಷಯವೆಂದರೆ, ನಮ್ಮ ೭ನೇ ಪಂಚವಾರ್ಷಿಕ ಯೋಜನೆಯ ಮೇಲೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಹಾಗೂ ಹಿಂದಿನ ವಿರೋಧ ಪಕದ ನಾಯಕರಾದಂಥ ಶ್ರೀ ವೀರಪ್ಪಮೊಯ್ಲಿಯವರು ಈಗ ಸದನದಲ್ಲಿ ಇಲ್ಲ, ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು, ಅವರು ಮಾತನಾಡುತ್ತಾ ಯೋಜನೆಗಳಿಗೆ

ಇಟ್ಟಿರತಕ್ಕಂಥ ಮೊತ್ತ ಬಹಳ ಕಡಿಮೆ ಆಗಿದೆ, ಮತ್ತು ಅಭಿವೃದ್ಧಿ ಕೆಲಸಕಾರ್ಯಗಳಿಗೆ ಈ ವರ್ಷ ಇಟ್ಟಿರತಕ್ಕಂಥ ಮೊತ್ತ ಬಹಳ ಕಡಿಮೆಯಾಗಿದೆ ಎನ್ನತಕ್ಕಂಥ......

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ ಮೊತ್ತ ಅಲ್ಲ, ಪರ್ಸೆಂಟೇಜ್ ಕಡಿಮೆ ಆಗಿದೆ ಎಂದು......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ಸಮಾಧಾನವಾಗಿ ಅವರು ಕೇಳಿದ್ದಾರೆ ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ತಾವೆಲ್ಲರೂ ಸಮಾಧಾನವಾಗಿ ಕುಳಿತು ಕೊಂಡು ಕೇಳಿ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೋಳಿವಾಡ್‌ರವರು ಕಲ್ಲು ದೇವರು ಕುಳಿತು ಕೊಂಡು ಕೇಳುವ ಹಾಗೆ ಕೇಳಿದರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಆ ಎರಡೂ ವಿಷಯಗಳನ್ನು ನಾನು ಓದಿ ಹೇಳುತ್ತೇನೆ. ಆ ಟಿಪ್ಪಣಿಗಳಲ್ಲಿ ಏನಾದರೂ ವ್ಯತ್ಯಾಸವಿದ್ದರೆ ನಾನು ತಿದ್ದಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಮತ್ತು ಮಾನ್ಯ ಸದಸ್ಯರುಗಳ ಮಾಡಿದ ಭಾಷಣದ ಪ್ರತಿ ಕೂಡ ನನ್ನ ಬಳಿಯಲ್ಲಿ ಇದೆ. ಉದಾಹರಣೆಗೆ ಹೇಳುವುದಾದರೆ ಯೋಜನೆಯ ಮೇಲೆ ನಾವು ಔಟ್‌ಲೇ ಎಂದು ಏನು ಕರೆಯುತ್ತೇವೆಯೋ, ಅದು ೧೯೮೫-೮೬ನೇ ಸಾಲಿನಲ್ಲಿ ಕೇವಲ ೧೯ ಕೋಟಿ ರೂಪಾಯಿಗಳು ಮಾತ್ರ ಹೆಚ್ಚಾಗಿದೆ. ಅದೇ ೧೯೮೪-೮೫ನೇ ಸಾಲಿನದ್ದನ್ನು ತುಲನೆ ಮಾಡಿ ನೋಡಿದಾಗ ೧೯೮೬-೮೭ನೇ ಸಾಲಿಗೆ ಅದು ಕೇವಲ ೨೬ ಕೋಟಿ ರೂಪಾಯಿ ಮಾತ್ರ ಹೆಚ್ಚಾಗಿದೆ, ಮತ್ತು ಎರಡನೆಯ ವಿಷಯವನ್ನು ತೆಗೆದು ಕೊಳ್ಳುವುದಾದರೆ, ಡವಲಪ್‌ಮೆಂಟಲ್ ಎಕ್ಸ್‌ಪೆನ್ಸ್‌ಸ್ ಅಂದರೆ, ಯೋಜನೆಯ ಅಭಿವೃದ್ಧಿ ಮೇಲೆ ಮಾಡತಕ್ಕಂಥ ಖರ್ಚು ಹೆಚ್ಚಾಗಿಲ್ಲ. ಮತ್ತು ರಿಸೋರ್ಸ್ಸ್ ಅಂದರೆ ನಾನ್ ಡೆವಲಪ್‌ಮೆಂಟ್ ಪ್ಲಾನ್ ಬಗ್ಗೆ ಕೂಡ ಟೀಕೆ ಮಾಡಿದ್ದಾರೆ. ಆ ವಿಷಯವನ್ನೇ ನಾನು ಮೊಟ್ಟ ಮೊದಲನೆಯದಾಗಿ ಆರಿಸಿ ಕೊಂಡಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ ಕಳೆದ ೬ ವರ್ಷಗಳ ಅವಧಿಯಲ್ಲಿ ನಮ್ಮ ಮನಸ್ಸಿಗೆ ತೃಪ್ತಿ ಆಗುವಂತಹ ರೀತಿಯಲ್ಲಿ, ನಾವು ನಮ್ಮ ಯೋಜನೆಯ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡುವುದು ಸಾಧ್ಯವಾಗಿದೆ ಎಂದು ನಾನು ಹೇಳಲಾರೆ. ಅದಕ್ಕೆ ಅನೇಕ ಕಾರಣಗಳು ಇವೆ. ಆ ಕಾರಣಗಳ ಬಗ್ಗೆ ಎರಡು ನಿಮಿಷದ ನಂತರ ಬರುತ್ತೇನೆ. ಮಾನ್ಯ ಸದನದ ತಿಳುವಳಿಕೆಗಾಗಿ ಕೆಲವು ಅಂಕಿಸಂಖ್ಯೆಗಳನ್ನು ಕೊಡತಕ್ಕಂತಾದ್ದು ಅಗತ್ಯವೆಂದು ನನ್ನ ಭಾವನೆ. ಮೊದಲು ಆರನೇ ಪಂಚ ವಾರ್ಷಿಕ ಯೋಜನೆಯನ್ನು ತೆಗೆದುಕೊಳ್ಳೋಣ. ೬ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷ ಅಂದರೆ ೧೯೮೦-೮೧ಕ್ಕೆ ಇಡೀ ದೇಶದ ಪರ್ ಕ್ಯಾಪಿಟಾ ಪ್ಲಾನ್ ಔಟ್ ಲೇ ನೋಡಿದರೆ ೧೩೪ ರೂಪಾಯಿ ನಮ್ಮ ರಾಜ್ಯದ ಕಾವೇರಿ ಯೋಜನೆಗಳ ಮೇಲೆ ಏನು ಖರ್ಚು ಮಾಡಿದ್ದೇವೆ, ಅದನ್ನು ಗಣನೆಗೆ ತೆಗೆದು ಕೊಂಡರೆ, ಇದು ಅಭಿವೃದ್ಧಿ ಕೆಲಸವೆಂದು ನಾವು ತಿಳಿಯುತ್ತೇವೆ. ಕೇವಲ ತಾಂತ್ರಿಕ ಕಾರಣದಿಂದ ಇದನ್ನು ಯೋಜನೆ ಒಳಗಡೆ, ಯೋಜನಾಆಯೋಗದವರು ಸೇರಿಸುವುದಿಲ್ಲ ಏಕೆಂದರೆ, ಈ ಯೋಜನೆಯನ್ನು ಕೇಂದ್ರಸರ್ಕಾರ ಮತ್ತು ಜಲವಿದ್ಯುತ್ ಮಂಡಲಿ ಇನ್ನೂ ಅನುಮೋದನೆ ಮಾಡಿಲ್ಲ. ಈ ಖರ್ಚನ್ನು ತೆಗೆದುಕೊಂಡರೆ, ಕರ್ನಾಟಕದಲ್ಲಿ ಪರ್ ಕ್ಯಾಪಿಟಾ ವೆಚ್ಚ ೧೪೨ ರೂಪಾಯಿ. ೧೯೮೧-೮೨ರಲ್ಲಿ ಅಖಿಲಭಾರತ ಮಟ್ಟದ್ದು ೧೫೨ ರೂಪಾಯಿ ಇದ್ದರೆ, ಕರ್ನಾಟಕದ್ದು ೧೫೩ ರೂಪಾಯಿ. ೧೯೮೨-೮೩ರಲ್ಲಿ ಅಖಿಲ ಭಾರತ ಮಟ್ಟದ್ದು, ೧೭೧ ರೂಪಾಯಿ ಇದ್ದರೆ, ಕರ್ನಾಟಕದ್ದು ೧೬೬ ರೂಪಾಯಿ. ೧೯೮೩-೮೪ರಲ್ಲಿ ಅಖಿಲ ಭಾರತ ಮಟ್ಟದ್ದು ೧೯೯ ರೂಪಾಯಿ ಇದ್ದರೆ, ಕರ್ನಾಟಕದ್ದು ೨೧೧ ರೂಪಾಯಿ. ೧೯೮೪-೮೫ರಲ್ಲಿ ಅಖಿಲ ಭಾರತ ಮಟ್ಟದ್ದು ೨೧೯ ರೂಪಾಯಿ ಇದ್ದರೆ, ಕರ್ನಾಟಕದ್ದು ೨೪೪ ರೂಪಾಯಿ ಮತ್ತು ೧೯೮೫-೮೬ರಲ್ಲಿ ಅಖಿಲ ಭಾರತ ಮಟ್ಟದ್ದು ೨೩೪ ರೂಪಾಯಿ ಇದ್ದರೆ, ಕರ್ನಾಟಕದ್ದು ೨೪೪ ರೂಪಾಯಿ ಮಾತ್ರ. ಈ ಎರಡು ವರ್ಷಕ್ಕೂ ಒಂದೇ ಔಟ್ ಲೇ ಇಟ್ಟುಕೊಂಡಿದ್ದೇವೆ. ಇದಕ್ಕೆ ಕಾರಣ ಸ್ಪಷ್ಟ ಇದೆ. ಕಳೆದ ಮೂರು ವರ್ಷಗಳ ಕಾಲ ಅಂದರೆ ಇದೂ ಸೇರಿದಗೆ ನಾಲ್ಕು ವರ್ಷವಾಗುತ್ತದೆ. ಈ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ ಭೀಕರವಾದಂಥ ಅಭಾವ ಪರಿಸ್ಥಿತಿ ಉಂಟಾದುದರಿಂದ, ವ್ಯವಸಾಯ ಕ್ಷೇತ್ರದಲ್ಲಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ಕಡಿಮೆಯಾಗಿ ಸರ್ಕಾರಕ್ಕೆ ಬರತಕ್ಕಂಥ ಆದಾಯ ಬಹಳಷ್ಟು ಕಡಿಮೆಯಾಗಿದೆ ಆದುದರಿಂದ ಸರ್ಕಾರದ ರಾಜಸ್ವ ಏನು ಇದೆ, ಅದರಲ್ಲಿ ಕೊರತೆ ಆಗುತ್ತದೆ. ಇದರಿಂದ ವಿಶೇಷವಾದ ಹೆಚ್ಚಳವನ್ನು ಮಾಡತಕ್ಕಂತಾದ್ದು

ನಮಗೆ ಸಾಧ್ಯವಾಗಿಲ್ಲ. ಪರ್ ಕ್ಯಾಪಿಟಾ ಔಟ್‌ಲೇನಲ್ಲಿ ಅಖಿಲ ಭಾರತ ಮಟ್ಟಕ್ಕಿಂತಲೂ ನಮ್ಮ ಔಟ್‌ಲೇ ಇಷ್ಟು ಹೆಚ್ಚಾಗಿದೆ ಎಂದು ಹೇಳುವಂಥ ಹಿನ್ನೆಲೆಯಲ್ಲಿ ನೋಡಬೇಕು. ಆ ಹಿನ್ನೆಲೆಯಲ್ಲಿ ಮೊದಲನೆಯದು ಮಾರ್ಕೆಟ್ ಬಾರೋಯಿಂಗ್ಸ್. ಇದು ಕೇಂದ್ರ ಸರ್ಕಾರದವರ ಅನುಮತಿ ಇಲ್ಲದೇ, ನಾವು ಸಾರ್ವಜನಿಕ ಹಣಕಾಸಿನ ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಳ್ಳತಕ್ಕಂತಾದ್ದು ಸಾಧ್ಯವಿಲ್ಲ. ನಮಗೆ ಬೇಕಾಗಿರುವ ಪ್ರಮಾಣದಲ್ಲಿ ನಾವು ಸಾಲವನ್ನು ತೆಗೆದುಕೊಳ್ಳತಕ್ಕಂತಾದ್ದು ಸಾಧ್ಯವಿಲ್ಲ. ಎಷ್ಟರಮಟ್ಟಿಗೆ ಕೇಂದ್ರಸರ್ಕಾರದವರು ನಮಗೆ ಮಿತಿ ಹಾಕುತ್ತಾರೋ, ಆ ಮಿತಿಯೊಳಗೆ ನಾವು ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಎಂದರೆ ಎಲ್ಲಾ ಸ್ಟೇಟ್‌ಗಳನ್ನು ಸೇರಿಸಿ, ಯೋಜನಾ ವೆಚ್ಚ ಶೇಕಡ ೧೨.೩ರಷ್ಟು ಮಾರ್ಕೆಟ್ ಬಾರೋಯಿಂಗ್ಸ್ ಇದ್ದರೆ, ಕರ್ನಾಟಕದ್ದು ಕೇವಲ ೮.೪ರಷ್ಟು ಮಾತ್ರ ಇದೆ. ಎಂದರೆ, ಅಖಿಲ ಭಾರತದಲ್ಲಿ ಬೇರೆ ಬೇರೆ ಸ್ಟೇಟ್‌ಗಳಿಗೆ ಎಷ್ಟರಮಟ್ಟಿಗೆ ಅನುಕೂಲತೆ ಸಿಕ್ಕಿದೆಯೋ ಅಷ್ಟು ಅನುಕೂಲತೆ ನಮಗೆ ಸಿಕ್ಕಿಲ್ಲ, ಎಂದು ಇದರ ಅರ್ಥ. ಸೆಂಟ್ರಲ್ ಅಸಿಸ್ಟೆನ್ಸ್ ಇಡೀ ಭಾರತದ ದೃಷ್ಟಿಯಿಂದ ೬ನೇ ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ಹೇಳುವುದಾದರೆ, ಶೇಕಡ ೩೬.೮ ರಷ್ಟು ಕೇಂದ್ರದ ಸಹಾಯ ಸಿಕ್ಕಿದ್ದರೆ, ಕರ್ನಾಟಕಕ್ಕೆ ಕೇವಲ ೨೨.೯ ಮಾತ್ರ ಸಿಕ್ಕಿದೆ. ಎಂದರೆ, ಸೆಂಟ್ರಲ್ ಅಸಿಸ್ಟೆನ್ಸ್ ಕೊರತೆ ನಮ್ಮ ರಾಜ್ಯಕ್ಕೆ ಆಗಿದೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಪರ್ ಕ್ಯಾಪಿಟಾ ಇನ್‌ಕಂ ದೃಷ್ಟಿಯಿಂದ ನಾವು ಲೆಕ್ಕ ಹಾಕಿದರೆ, ಆಲ್ ಇಂಡಿಯಾದ್ದು ೨೯೭.೬೭ ರೂಪಾಯಿ ಆದರೆ ನಮ್ಮದು ಕೇವಲ ೧೯೨ ರೂಪಾಯಿ ಮಾತ್ರ. ಹೀಗೆ ಮಾರ್ಕೆಟ್ ಬಾರೋಯಿಂಗ್‌ನಲ್ಲಿ ನಮ್ಮ ಭಾಗ ಕಡಿಮೆ. ಕೇಂದ್ರಸರ್ಕಾರದ ಸಹಾಯದಲ್ಲಿ ಸಿಕ್ಕ ಭಾಗ ಕಡಿಮೆ ಮತ್ತು ನಮ್ಮ ಸ್ವಂತ ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಣ ಎಂದು ಕರೆಯುತ್ತೇವೆ. ಈ ದೃಷ್ಟಿಯಿಂದ ನೋಡಿದಾಗ, ಬೇರೆ ರಾಜ್ಯಗಳು ಒಟ್ಟು ಸೇರಿ, ಎಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿದರೋ ಅದಕ್ಕಿಂತ ಹೆಚ್ಚನ್ನು ನಾವು ಮಾಡಿದ್ದೇವೆ. ಎಲ್ಲಾ ರಾಜ್ಯಗಳೂ ಸೇರಿ ಶೇಕಡ ೨೭.೫ರಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿದ್ದರೆ ನಾವು ಶೇಕಡ ೩೫ರಷ್ಟು ಮಾಡಿದ್ದೇವೆ. ಹೀಗಾಗಿ ನಾವು ಎಷ್ಟು ಕಷ್ಟದಲ್ಲಿದ್ದರೂ ೩-೪ ವರ್ಷದ ಬರಗಾಲದ ಪರಿಸ್ಥಿತಿ ಇದ್ದರೂ, ಮಾರ್ಕೆಟ್ ಬಾರೋಯಿಂಗ್ಸ್ ನಮ್ಮ ಭಾಗ ಕಡಿಮೆ. ಕೇಂದ್ರಸರ್ಕಾರದ ಸಹಾಯ ನಮಗೆ ಕಡಿಮೆ. ಇಂತಹ ವಿಷಮ ಪರಿಸ್ಥಿತಿ ಇದ್ದರೂ ಕೂಡ ನಮ್ಮ ಯೋಜನಾ ವೆಚ್ಚ ಅಖಿಲ ಭಾರತ ಮಟ್ಟಕ್ಕಿಂತಲೂ, ಪರ್ ಕ್ಯಾಪಿಟಾ ಇನ್‌ಕಂ ದೃಷ್ಟಿಯಿಂದ ಹೆಚ್ಚಾಗಿದೆಯೆಂದು, ಇಲ್ಲಿ ಹೇಳಬೇಕಾಗುತ್ತದೆ. ಮತ್ತು ಅದಕ್ಕಾಗಿ ನಾವು ಸ್ವಲ್ಪಮಟ್ಟಿಗೆ ಅಭಿಮಾನಪಟ್ಟುಕೊಂಡರೆ, ಅದು ತಪ್ಪಾಗಲಾರದೆಂದು ನನ್ನ ಭಾವನೆ. ಇದಕ್ಕೆ ಮುಖ್ಯವಾದ ಕಾರಣ, ಕರ್ನಾಟಕದ ಜನತೆ. ಕಳೆದ ೪-೫ ತಿಂಗಳ ಹಿಂದೆ ಅನಿವಾರ್ಯವಾಗಿ ಕೆಲವೊಂದು ಕರವನ್ನು ಅಂದರೆ, ವಿದ್ಯುಚ್ಛಕ್ತಿ ದರ, ಬಸ್ ಪ್ರಯಾಣದ ದರವನ್ನು ಹೆಚ್ಚು ಮಾಡತಕ್ಕಂಥ ಪ್ರಸಂಗ ಬಂತು. ಅದರ ವಿರುದ್ಧ ಮಾನ್ಯ ವಿರೋಧ ಪಕ್ಷದ ಅನೇಕ ಸದಸ್ಯರು ಟೀಕೆ ಮಾಡಿದ್ದಷ್ಟೇ ಅಲ್ಲ, ಚಳುವಳಿಯನ್ನೂ ಮಾಡಿದರು. ಆಗಲೂ ಕೂಡ ಕರ್ನಾಟಕ ಬಂದ್‌ನ್ನು ಆಚರಿಸಲಾಯಿತು. ಈ ಮಾತನ್ನು ನಾನು ಕೃತಜ್ಞತೆಯಿಂದ ನಮ್ಮ ಕರ್ನಾಟಕ ನಾಡಿನ ಜನತೆಗೆ ಹೇಳುತ್ತಿದ್ದೇನೆ. ಸರ್ಕಾರ ಅನಾವಶ್ಯಕವಾಗಿ ಭಾರವನ್ನು ನಮ್ಮ ಮೇಲೆ ಹೇರುತ್ತಿರಲಿಲ್ಲ, ಇದಕ್ಕೆ ಏನೋ ಅನಿವಾರ್ಯವಾದಂಥ ಕಾರಣ ಇರಬಹುದು ಎಂದು ಕರ್ನಾಟಕ ಜನತೆ ತಿಳಿದು, ದೀರ್ಘದೃಷ್ಟಿ ಇಟ್ಟುಕೊಂಡು, ಜನರ ಹಿತದಿಂದಲೇ ಇದನ್ನು ಮಾಡಿರಬೇಕೆಂದು ಮನಸ್ಸಿಗೆ ಖಾತರಿ ಮಾಡಿ ಕೊಂಡರು. ಯಾರು ಎಷ್ಟೇ ಚಳುವಳಿ ಮಾಡಲಿ. ಅದಕ್ಕೆ ಜನತೆಯ ಬೆಂಬಲ ಸಿಕ್ಕಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಆ ದೃಷ್ಟಿಕೋನ ಸರಿಯಲ್ಲ.

ಅಧ್ಯಕ್ಷರು.— ತಾವು ನೋಟ್ ಮಾಡಿಕೊಳ್ಳಿರಿ, ಆ ಮೇಲೆ ಪ್ರಶ್ನೆ ಕೇಳಿರಿ.

ಶ್ರೀ ರಾಮಕೃಷ್ಣ ಹೆಗಡೆ.— ಬಸ್ ದರ ಹೆಚ್ಚಾದುದಕ್ಕೆ ಮುಖ್ಯವಾದ ಕಾರಣ ಡೀಸಲ್ ದರವನ್ನು ಹೆಚ್ಚು ಮಾಡಿದ್ದರಿಂದ ಆಗಿದೆಯೆಂದು ಆ ಹಿನ್ನೆಲೆಯಲ್ಲಿ ಹೇಳಿದ್ದೇನೆ. ಮತ್ತು ಭಾಸಿ ಬಿಡಿ ಭಾಗಗಳು, ಟೈರ್ ಇವುಗಳ ಮೇಲೆ ಎಕ್ಸೈಜ್ ಡ್ಯೂಟಿ ಹೆಚ್ಚು ಮಾಡಿದ್ದರಿಂದ ಈ ದರವನ್ನು ಹೆಚ್ಚು ಮಾಡಿದ್ದೇವೆಂದು ನಾನು ಆಗಲೇ ಹೇಳಿದ್ದೇನೆ. ಈಗ ಮತ್ತೆ ಡೀಸಲ್ ದರವನ್ನು ಹೆಚ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಹೆಚ್ಚು ಮಾಡಿರತಕ್ಕಂಥಾ ಈ ದರದ ಭಾರ ಕೆಎಸ್‌ಆರ್‌ಟಿಸಿ ಮೇಲೆ ಸುಮಾರು ೮ ರಿಂದ ೯ ಕೋಟಿ ರೂಪಾಯಿಗಳವರೆಗೆ ಬೀಳುತ್ತದೆ. ಮೊನ್ನೆ ದಿವಸ ಮತ್ತೆ ಈ ಡೀಸಲ್ ದರವನು

ಅವರು ಹೆಚ್ಚು ಮಾಡಿದ್ದರೂ ಕೂಡ ನಾವು ಪುನಃ ಅದಕ್ಕಾಗಿ ಬಸ್‌ದರವನ್ನು ಹೆಚ್ಚು ಮಾಡುವುದಿಲ್ಲ ಅನ್ನುವುದನ್ನು ಮಾತ್ರ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನೀವು ಈಗ ಅದರ ಬದಲು ಸೀಟು ದರ ಜಾಸ್ತಿ ಮಾಡಿದ್ದೀರಲ್ಲಾ. ಅದು ಜಾಸ್ತಿ ಆದ ಹಾಗೆ ಆಗಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.— ಸರ್ಕಾರೀ ಬಸ್‌ದರವನ್ನು ಜಾಸ್ತಿ ಮಾಡುವುದಿಲ್ಲ ಎಂದು ನಾನು ಹೇಳಿದ್ದು. ಈಗ ನಾನು ನೀತಿಯ ಬಗ್ಗೆ ಎರಡು ಮಾತನ್ನು ಹೇಳಿದರೆ ಅದು ಅಪ್ರಸ್ತುತವಾಗಲಿಕ್ಕಿಲ್ಲ. ಹಿಂದೆ ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಆ ಮಾತನ್ನು ಇನ್ನೂ ಒಂದು ಸಲ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಬಜೆಟ್‌ನ್ನು ಮುಗಿಚಿ ನೋಡಿದಾಗ ಎಕ್ಸೈಜ್ ಮತ್ತು ಅಡ್ಮಿನಿಸ್ಟರ್ಡ್ ಪ್ರೈಸಸ್ ಅನ್ನು ಹೆಚ್ಚು ಮಾಡತಕ್ಕಂಥಾ ಒಂದು ಪದ್ಧತಿ ಕೇವಲ ೪-೫ ವರ್ಷದಿಂದ ಮಾತ್ರ ಬೆಳೆದು ಬಂದಿದೆ. ನಾನು ಶ್ರೀಮಾನ್ ಪ್ರಣಬ್ ಮುಖರ್ಜಿ ಅವರ ತಿಳುವಳಿಕೆಗೆ ಇದನ್ನು ತಂದು ವಿರೋಧ ಮಾಡಿದೆ, ನಾನು ರಾಜ್ಯ ಸಭೆಯ ಸದಸ್ಯನಾಗಿದ್ದಾಗಲೇ ಇದನ್ನು ವಿರೋಧ ಮಾಡಿದ್ದೇನೆ. ಇದು ಮೊದಲನೇ ದೃಷ್ಟಿ. ಇನ್ನು ಎರಡನೇ ದೃಷ್ಟಿಯಿಂದ ನೋಡಿದರೆ ಈ ನೀತಿ ಅನೀತಿಯುತವಾದುದು ಮತ್ತು ಅನ್ಯಾಯವಾದುದು ಜನತಾ ಪ್ರತಿನಿಧಿಯಾಗಿರತಕ್ಕಂಥವರು ಇದ್ದರೂ ಸಹ ಪಾರ್ಲಿಮೆಂಟ್ ಅಧಿವೇಶನ ಪ್ರಾರಂಭವಾಗುವುದಕ್ಕಿಂತ ಮೊದಲು ಈ ವಿಚಾರವನ್ನು ಅವರ ಗಮನಕ್ಕೆ ತರದೇ ಈ ಒಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥಾದ್ದು ಪಾರ್ಲಿಮೆಂಟ್‌ಗೆ ಆಗತಕ್ಕಂಥಾ ಒಂದು ಅಪಚಾರ. ಕೇಂದ್ರ ಸರ್ಕಾರದ ಈ ಒಂದು ನಿರ್ಣಯದಿಂದ ಇದು ಮನಾಪಲಿ ಇರತಕ್ಕಂಥ ಕೈಗಾರಿಕೆ ಏನು ಇದೆ ಅದರಲ್ಲಿ ಉತ್ಪಾದನೆ ಆಗತಕ್ಕಂಥ ವಸ್ತುಗಳ ಮೇಲೆ ಬೆಲೆ ಹೆಚ್ಚು ಮಾಡಿದ್ದಾರೆ. ಅಡ್ಮಿನಿಸ್ಟರ್ಡ್ ಪ್ರೈಸಸ್‌ನಿಂದ ಜನತೆಗೆ ಭಾರ ಒಂದು ಕಡೆ ಆದರೆ ಮತ್ತೊಂದು ಕಡೆ ರಾಜ್ಯ ಸರ್ಕಾರಗಳಿಗೆ ನ್ಯಾಯ ಬದ್ಧವಾಗಿ, ಕಾನೂನು ಬದ್ಧವಾಗಿ, ಸಂವಿಧಾನ ಬದ್ಧವಾಗಿ ಅವರ ಪಾಲು ಎಷ್ಟು ಸಿಗಬೇಕೋ ಆ ಪಾಲನ್ನು ವಸೂಲ್ಮಾಡುವುದಕ್ಕೆ ಮತ್ತೊಂದು ಅಪರಾಧವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೇಂದ್ರ ಸರ್ಕಾರದ ಈ ಒಂದು ನಿರ್ಣಯದಿಂದ ಅವರ ಅಂದಾಜು ಮೇರೆಗೆ ಇದರಿಂದ ಸುಮಾರು ೮೫೦ ಕೋಟಿ ರೂಪಾಯಿನಿಂದ ೯೦೦ ಕೋಟಿ ರೂಪಾಯಿಂಗಳವರೆಗೆ ಹೆಚ್ಚು ಆದಾಯ ಅವರಿಗೆ ಸಿಗುತ್ತದೆ. ಅವರು ಅಬ್ಕಾರಿ ಸುಂಕವನ್ನು ಎಷ್ಟೇ ಹೆಚ್ಚಳ ಮಾಡಿದರೂ ಕೂಡ ನಮ್ಮ ಕರ್ನಾಟಕ ರಾಜ್ಯಕ್ಕೆ ಸುಮಾರು ೬೦ ಕೋಟಿರೂಪಾಯಿ ಸಿಗುತ್ತಿತ್ತು. ಈಗ ಆ ೬೦ ಕೋಟಿ ರೂಪಾಯಿ ನಮಗೆ ವಂಚನೆಯಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಈಗ ಯೋಜನೆಗೆ ಬೇಕಾಗಿರತಕ್ಕಂಥ ಹಣವನ್ನು ಸ್ವೀಕರಿಸುವುದರಲ್ಲಿ ಕೇಂದ್ರ ಸರ್ಕಾರದವರು ಇಲ್ಲಿಯವರೆವಿಗೂ ಸ್ವೀಕರಿಸಿಕೊಂಡು ಬಂದಿರತಕ್ಕಂಥಾ ನೀತಿ ಸರಿಯಲ್ಲ ಎನ್ನುವುದು ನನ್ನ ಭಾವನೆ. ಇಂದಿನ ಪದ್ಧತಿ ಏನು ಇದೆ ಎಂದರೆ ನಮ್ಮ ರಾಜ್ಯದ ಯೋಜನೇತರ ವೆಚ್ಚಗಳನ್ನು ೫ ವರ್ಷಕ್ಕೊಂದು ಸಲ ಪರಿಶೀಲಿಸಿ ಅದರಲ್ಲಿ ಏನು ಕೊರತೆ ಬೀಳುತ್ತದೋ ಆ ಕೊರತೆಯನ್ನು ತುಂಬಿಕೊಡಿ ಎನ್ನುವುದಕ್ಕೆ ಫೈನಾನ್ಸ್ ಕಮಿಷನ್ ಅಪಾಯಿಂಟ್ ಮಾಡತಕ್ಕಂಥಾ ಒಂದು ಪದ್ಧತಿ ಇದೆ. ಆ ಕೊರತೆಯನ್ನು ತುಂಬಿಕೊಡುವುದಕ್ಕೆ ಅವರು ಅನುಸರಿಸತಕ್ಕಂಥಾ ವಿಧಾನಕ್ಕೆ ನಾವು ಕ್ರೈಟೀರಿಯಾ ಎಂದು ಕರೆಯುತ್ತೇವೆ; ಅದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ದುರ್ದೈವ ನಮ್ಮದು. ಏಕೆಂದರೆ ಸತತವಾಗಿ ಮೂರು ಫೈನಾನ್ಸ್ ಕಮಿಷನ್‌ಗಳಿಗೆ ನಾವು ಈ ಬಗ್ಗೆ ಪ್ರಯತ್ನಿಸಿದರೂ ಕೂಡ ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಅದಕ್ಕೆ ಕಾರಣ ಇಷ್ಟೆ. ಅವರು ಈಗ ಯಾವ ಒಂದು ವಿಧಾನವನ್ನು ಅನುಸರಿಸುತ್ತಾರೋ ಅದು ಜನಸಂಖ್ಯೆಯ ಪ್ರಮಾಣವಾಗಿರಬಹುದು ಮತ್ತು ಹಿಂದುಳಿಕೆಯ ಪ್ರಮಾಣವಾಗಿರಬಹುದು, ಮತ್ತು ಇನ್ನು ಇತರ ಬೇರೆ ಕ್ರೈಟೇರಿಯಾ ಇರಬಹುದು, ಆ ಕ್ರೈಟೇರಿಯಾ ಕರ್ನಾಟಕಕ್ಕೆ ಲಾಭ ಮಾಡುವಂಥಾದ್ದೇನೂ ಅಲ್ಲ. ಅದಕ್ಕೆ ಒಂದು ಕಾರಣ, ಕರ್ನಾಟಕದ ಏಣಿ ಮೇಲೂ ಇಲ್ಲ, ಕೆಳಗೂ ಇಲ್ಲ ಮಧ್ಯದಲ್ಲಿ ಸ್ವಲ್ಪ ತುಸು ಹೆಚ್ಚು ಕಡಿಮೆ ಅಖಿಲಭಾರತದ ದೃಷ್ಟಿಯಲ್ಲಿ ಹೋಲಿಸಿ ನೋಡಿದಾಗ ಕರ್ನಾಟಕದ ಭಾಗ ಶೇಕಡಾ ೫ ರಿಂದ ೬, ೬ ೧/೨ ಅಷ್ಟು ಇದೆ. ಆದುದರಿಂದ ನಮಗೆ ಕೇಂದ್ರದಲ್ಲಿ ಯಾವ ಪಕ್ಷದ ಸರ್ಕಾರವೇ ಇರಲಿ, ನಮ್ಮ ಪಕ್ಷದ ಸರ್ಕಾರ ಇದ್ದಾಗಲೂ ಅಷ್ಟೆ, ವಿತ್ತ ಆಯೋಗದವರಿಂದ ನಾವು ನಿರೀಕ್ಷಿಸಿದಂಥಾ ಸಹಾಯ ಹೋಗಲಿ ನಮಗೆ ನಿಜವಾಗಿಯೂ, ನ್ಯಾಯ ಬದ್ಧವಾಗಿ ಬರಬೇಕಾದಂಥ ಸಹಾಯ ಸಿಗಲಿಲ್ಲ. ಇದಕ್ಕೆ ಉದಾಹರಣೆ ಕೊಟ್ಟು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಪಡೆಯತಕ್ಕಂಥ ಸಾಲ, ಆ ವರ್ಷದ ಸಾಲದ ಮೊತ್ತ ಏನು ಇದೆ

ಅದನ್ನು ನೋಡಿದರೆ ನಾವು ಹಿಂದೆ ಪಡೆದಿರತಕ್ಕಂತ ಸಾಲಕ್ಕೂ ಈ ವರ್ಷ ನಾವು ಏನು ಸಾಲವನ್ನು ತೀರಿಸಬೇಕಾಗಿತ್ತೋ ಆ ಮೊತ್ತಕ್ಕೂ ಅನುಗುಣವಾಗಿ ಬರುತ್ತದೆ. ಕಳೆದ ೪-೫ ವರ್ಷದಿಂದಲೂ ಕೂಡ ನಾವು ಲೆಕ್ಕ ಹಾಕಿ ನೋಡಿದರೆ ಶೇಕಡಾ ೭೪ ರಷ್ಟು ನಾವು ವಾಪಸ್ಸು ಕೊಡಬೇಕಾಗಿದೆ. ಈ ವರ್ಷ ನಮಗೆ ಕೇಂದ್ರ ಸರ್ಕಾರದಿಂದ ೧೦೦ ಕೋಟಿ ರೂಪಾಯಿ ಸಾಲ ಸಿಕ್ಕಿದರೆ ನಾವು ೭೪ ಕೋಟಿ ರೂಪಾಯಿಗಳಷ್ಟು ಈ ವರ್ಷವೇ ವಾಪಸು ಕೊಡಬೇಕಾಗಿ ಬರುತ್ತದೆ. ಇದಕ್ಕೆ ನಾನು ಎರಡು ಉಪಾಯವನ್ನು ಸೂಚನೆ ಮಾಡಿದ್ದೇನೆ ಮೊದಲನೇದು ನಮಗೆ ಹಳೇ ಸಾಲ ಏನು ಇದೆ ಅದನ್ನು ಸ್ಕೇಲ್‌ಡೌನ್ ಮಾಡಬೇಕು ಎಂದು. ಫೈನಾನ್ಸ್ ಕಮಿಷನ್ನಿನವರು ಈ ಸೂಚನೆಯನ್ನು ಒಪ್ಪಿದರೂ ಕೂಡ ನಮಗೆ ನ್ಯಾಯ ಸಿಗಲಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ೨೦೦-೩೦೦ ಕೋಟಿ ರೂಪಾಯಿನಷ್ಟು ಅನುಕೂಲವಾಗಿದೆ. ನಮ್ಮ ರಾಜ್ಯಕ್ಕೆ ಕೇವಲ ೪೩ ಕೋಟಿ ರೂಪಾಯಿ ಮಾತ್ರ ಇದರಲ್ಲಿ ನಮಗೆ ಅನುಕೂಲವಾಯಿತು. ಕೇಂದ್ರ ಸರ್ಕಾರದವರು ನಮ್ಮ ಯೋಜನೇತರ ವೆಚ್ಚಗಳಿಗಾಗಿ ಯಾವ ರೀತಿಯಾಗಿ ಫೈನಾನ್ಸ್ ಕಮೀಷನ್ ಮುಖಾಂತರ ವಿಮರ್ಶೆ ಮಾಡುತ್ತಾರೋ ಅದೇ ತರಹ ಮತ್ತೊಂದು ವಿಮರ್ಶೆಗಾಗಿ ಯೋಜನೆಗೆ ಸಂಬಂಧಪಟ್ಟ ಖರ್ಚು ವೆಚ್ಚಗಳನ್ನೂ ವಿಮರ್ಶೆ ಮಾಡಿ ರಾಜ್ಯ ಸರ್ಕಾರಗಳಿಗೆ ಇದರಿಂದ ಎಷ್ಟು ಮಟ್ಟಿಗೆ ನ್ಯಾಯವಾಗಿದೆ, ಅಥವಾ ಎಷ್ಟರಮಟ್ಟಿಗೆ ಅನ್ಯಾಯವಾಗಿದೆ ಅವುಗಳನ್ನು ನೋಡತಕ್ಕಂತ ಮತ್ತೊಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನನ್ನ ಬಲವಾದ ಸೂಚನೆ ಇಲ್ಲಿಯವರೆಗೂ ನಾವು ಪಡೆದ ಅನುಭವವನ್ನು ನೋಡಿದರೆ ಯಾವ ರಾಜ್ಯದ, ಯಾವ ಸರ್ಕಾರ, ಯೋಜನೇತರರ ವೆಚ್ಚವನ್ನು ಹೆಚ್ಚು ಮಾಡುತ್ತಾರೋ ಮತ್ತು ಹಣಕಾಸಿನ ವ್ಯವಸ್ಥೆಯಲ್ಲಿ ಶಿಸ್ತಿನ ಪಾಲನೆ ಮಾಡುವುದಿಲ್ಲವೋ ಅಂತಹ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಪ್ರಯೋಜನವಾಗತಕ್ಕಂಥ ಒಂದು ಪದ್ಧತಿ ಈವೊತ್ತು ಬಂದಿದೆ; ಇದು ನಮ್ಮ ಅನುಭವ.

ಈಗ ಉದಾಹರಣೆಗೆ ರೆವಿನ್ಯು ಸರ್ಪ್ಲಸ್ ಬ್ಯಾಲೆನ್ಸ್ ಫ್ರಂ ದಿ ಕರೆಂಟ್ ರೆವಿನ್ಯು ಇಡೀ ದೇಶದ ದೃಷ್ಟಿಯಿಂದ ನೋಡಿದರೆ ಕೇವಲ ೮.೩೮ ಪರ್ಸೆಂಟ್ ಮಾತ್ರ ಇದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ೪೧ ಪರ್ಸೆಂಟ್ ರಷ್ಟು ಇದೆ. ಇನ್ನು ಮುಂದೆ ಈ ಪದ್ಧತಿಯಲ್ಲಿ ಕೇಂದ್ರ ಸರ್ಕಾರದವರು ಬದಲಾವಣೆ ಮಾಡದೇ ಇದ್ದರೆ ನಾವು ಯೋಜನೇತರ ವೆಚ್ಚಗಳಿಗೆ ಕಡಿವಾಣವನ್ನು ಹಾಕಿ ಮೆಂಟನೆನ್ಸ್‌ನ್ನು ಆಫ್ ಅಸಿಸ್ಟೆನ್ಸ್‌ನ್ನು ಕೂಡ ನಿರ್ಲಕ್ಷ್ಯಮಾಡಿ ಯೋಜನೆಗಳಿಗೆ ಹೆಚ್ಚು ಹಣವನ್ನು ಕೊಡಬೇಕು, ಸಂಪನ್ಮೂಲಗಳನ್ನು ಅದಕ್ಕಾಗಿ ರಕ್ಷಿಸಬೇಕು, ಅದು ಇಲ್ಲದೇ ಹೋದರೆ ನಮ್ಮ ಯೋಜನೆಗಳಿಗೆ ಆಘಾತ ಆಗುತ್ತದೆ ಎಂದು ಹೇಳುವ ದೃಷ್ಟಿಯಿಂದ ಯಾವ ಒಂದು ಮಾರ್ಗವನ್ನು ಅನುಸರಿಸಿಕೊಂಡು ಬರುತ್ತಿದ್ದೇವೋ ಅದನ್ನು ಅನುಸರಿಸಿಕೊಂಡು ಹೋಗುವುದರಲ್ಲಿ ಬುದ್ಧಿವಂತಿಕೆ ಇದೆಯೋ ಎಂದು ಹೇಳತಕ್ಕಂಥ ಸಂದೇಹ ಬರುತ್ತದೆ ಆ ಒಂದು ಪರಿಸ್ಥಿತಿ ಯಾವ ರಾಜ್ಯಕ್ಕೂ ಬರಕೂಡದು. ಇನ್ನು ಮುಂದೆಯಾದರೂ ಕನಿಷ್ಟಪಕ್ಷ ಯೋಜನೇತರ ವೆಚ್ಚ ಮತ್ತು ಯೋಜನಾ ವೆಚ್ಚ ಇವೆರಡನ್ನೂ ಸಮಗ್ರವಾಗಿ ನೋಡಿ, ಇವೆರಡನ್ನೂ ನಾವು ನೂರಕ್ಕೆ ನೂರರಷ್ಟು ಪ್ರತ್ಯೇಕ ಮಾಡುವುದಕ್ಕೆ ಸಾಧ್ಯವಿಲ್ಲ, ಇವೆರಡನ್ನೂ ನೋಡಿ, ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯಗಳಿಗೆ ನೆರವನ್ನು ಕೊಡತಕ್ಕಂಥ ಒಂದು ಹೊಸ ಪದ್ಧತಿಯನ್ನು ಕೇಂದ್ರ ಸರ್ಕಾರದವರು ತರಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ನಮ್ಮ ಈ ೩ ವರ್ಷಗಳ ಆಡಳಿತದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧಿಸಿದಂಥ ಕಾರ್ಯಗಳ ಬಗ್ಗೆ ಸಂಕ್ಷಿಪ್ತವಾಗಿ, ನಮ್ಮ ಬಡ್ಜೆಟ್ ಭಾಷಣದ ಕೊನೆಗೆ ಅನೇಕ ಅನುಬಂಧಗಳನ್ನು ನಾವು ಕೊಟ್ಟಿದ್ದೇವೆ, ಅದರಲ್ಲಿ ಅನೇಕ ವಿವರಗಳನ್ನೂ ಈ ಸಲ ಕೊಟ್ಟಿದ್ದೇವೆ ಆ ಕಾರಣದಿಂದ ಇಲ್ಲಿ ಈ ಭಾಷಣದಲ್ಲಿ ವಿವರಗಳನ್ನು ಕೊಡತಕ್ಕಂಥ ಅಗತ್ಯವಿಲ್ಲ. ಆದರೂ ಅಭಿವೃದ್ಧಿ ಯೋಜನೆಗಳಿಗಾಗಿ ಖರ್ಚು ಕಡಿಮೆಯಾಗುತ್ತಿದೆ, ಹೆಚ್ಚಾಗುತ್ತಾ ಇಲ್ಲ ಎನ್ನುವ ಟೀಕೆಯನ್ನು ಮಾನ್ಯ ಮೊಯಿಲಿಯವರು ಮಾಡಿದರು. ಅವರಿಗೆ ನಾನು ತಿಳಿಸತಕ್ಕದ್ದು ಇಷ್ಟೆ, ಯೋಜನೆಯ ಬಾಬುಗಳಿಗಾಗಿ ೧೯೮೦-೮೧ ಸಲ್ಲಿ ೬೬೮ ಕೋಟಿ ರೂಪಾಯಿ, ೧೯೮೧-೮೨ರಲ್ಲಿ ೫೪೧ ಕೋಟಿ, ೧೯೮೨-೮೩ರಲ್ಲಿ ೬೫೩ ಕೋಟಿ, ೧೯೮೩-೮೪ ರಲ್ಲಿ ೭೭೧ ಕೋಟಿ, ೧೯೮೪-೮೫ರಲ್ಲಿ ೯೧೩ ಕೋಟಿ ೧೯೮೫-೮೬ರಲ್ಲಿ ನಾವು ಒದಗಿಸಿರತಕ್ಕಂಥಾದ್ದು ೧೧೦೫ ಕೋಟಿ ರೂಪಾಯಿಗಳು. ಮತ್ತೊಂದು ಟೀಕೆಯನ್ನು ಮಾನ್ಯ ಸದಸ್ಯರು ಕೆಲವರು ಮಾಡಿದರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರೂ ಆ ಟೀಕೆಯನ್ನು ಮಾಡಿದರು. ಅದೇನೆಂದರೆ, ನಮ್ಮ ಸರ್ಕಾರವು ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ ಎಂದು. ಅದಕ್ಕೆ ಸಂಬಂಧಪಟ್ಟಂತೆ ಅಂಕಿಸಂಖ್ಯೆ

ಗಳನ್ನು ಹಿಂದಿನಿಂದ ಅಂದರೆ ೧೯೭೨-೭೩ ರಿಂದಲೂ ಮಾನ್ಯ ಸದಸ್ಯರಿಗೆ ತಿಳಿಯಲಿ ಎಂದು ಕೊಟ್ಟಿದ್ದೇವೆ. ಕಾವೇರಿ ಜಲಾನಯನ ಪ್ರದೇಶಕ್ಕೆ ೧೯೭೨-೭೩ರಲ್ಲಿ ಕೇವಲ ೨೦ ಲಕ್ಷ ಮಾತ್ರ ಒದಗಿಸಿದ್ದರು. ಈ ವರ್ಷ ನಾವು ೭೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ನಮ್ಮ ಸರ್ಕಾರ ಬರುವವರೆಗೆ ಯಾವ ವರ್ಷವೂ ಕೂಡಾ ೨೫ ಕೋಟಿಗಿಂತ ಹೆಚ್ಚು ಹಣವನ್ನು ಒದಗಿಸಿದ್ದೇ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಆಗಿನ ಒಂದು ರೂಪಾಯಿ ಈಗ ೧೦೦ ರೂಪಾಯಿ ಆಗಿದೆ, ಇದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ್ದು ನೂರಕ್ಕೆ ನೂರರಷ್ಟು ಅಸತ್ಯ ಎಂದು ಹೇಳಲಾರೆ, ಅವರು ದಯವಿಟ್ಟು ವಿ. ಪಿ. ಸಿಂಗ್ ಅವರಿಗೆ ಪತ್ರ ಬರೆಯಬೇಕು. ರೂಪಾಯಿ ಕಿಮ್ಮತ್ತು ಏಕೆ ಕಡಿಮೆಯಾಗುತ್ತದೆ ಎನ್ನುವುದಕ್ಕೆ ನಾವು ಜವಾಬು ಕೊಡುವುದಿಲ್ಲ, ಅದಕ್ಕೆ ಕೇಂದ್ರದಲ್ಲಿರತಕ್ಕವರು ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆಗ ೧೯೭೭-೭೮ರಲ್ಲಿ ನೀವೂ ಅಧಿಕಾರದಲ್ಲಿ ಇದ್ದಿರಿ, ಆದ್ದರಿಂದ ನೀವೂ ಸಹ ಉತ್ತರ ಕೊಡಬೇಕು,

ಶ್ರೀ ರಾಮಕೃಷ್ಣ ಹೆಗಡೆ.—ಕಳೆದ ೨೦ ವರ್ಷಗಳ ಆರ್ಥಿಕ ಇತಿಹಾಸದಲ್ಲಿ ಅದೇ ಎರಡು ವರ್ಷ ಮಾತ್ರ ಬೆಲೆ ಏರಿಕೆ ನಿಂತು ಹೋಗಿತ್ತು, ಬೆಲೆಯನ್ನು ನಿಗ್ರಹಿಸಿದಂಥ ಒಂದೇ ಒಂದು ಸರ್ಕಾರ ಅಂದರೆ ಅದು ಜನತಾ ಸರ್ಕಾರ. ನಾನು ೧೦೦ ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿದ್ದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಹೌದು, ಹೇಳಿದ್ದೆ. ಈ ವರ್ಷ ೭೦ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇಡೀ ನೀರಾವರಿ ಯೋಜನೆಗೆ ೧೪೩ ಕೋಟಿ ಕೊಟ್ಟಿದ್ದೇವೆ. ಅದರಲ್ಲಿ ಸಣ್ಣದು, ದೊಡ್ಡದು ಎಲ್ಲಾ ಸೇರಿ ಇಷ್ಟು ಕೋಟಿ ಕೊಟ್ಟಿದ್ದೇವೆ. ಇದು ನಮ್ಮ ರಾಜ್ಯದ ಇತಿಹಾಸದಲ್ಲೇ ನೀರಾವರಿಗೆ ಇಷ್ಟೊಂದು ಹಣ ಒದಗಿಸಿದಂಥ ಮತ್ತೊಂದು ಉದಾಹರಣೆ ಇಲ್ಲ. ಕಾವೇರಿ ಯೋಜನೆಗೆ ೧೦೦ ಕೋಟಿ ಕೊಡುತ್ತೇವೆ ಎಂದು ಹೇಳಿದ್ದೇವೆ, ಈ ವರ್ಷ ೭೦ ಕೋಟಿ ಕೊಟ್ಟಿದ್ದೇವೆ, ಬರುವ ವರ್ಷ ಇನ್ನಷ್ಟು ಹೆಚ್ಚು ಕೊಡುತ್ತೇವೆ, ಸಾಧ್ಯವಾದರೆ ೧೦೦ ಕೋಟಿ ಕೊಡುತ್ತೇವೆ. ಆದರೆ ಬರ ಇದೆಯಲ್ಲಾ, ಇದು ನಮ್ಮ ಬೆನ್ನು ಬಿಡಬೇಕು. ಬರದ ಪರಿಸ್ಥಿತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಾವು ಯೋಜನೆಯ ಅಂತರ್ಗತವಾಗಿ ಏನು ಖರ್ಚುಮಾಡುತ್ತೇವೋ ಎನ್.ಆರ್.ಇ.ಪಿ., ಆರ್.ಎಲ್. ಇ.ಜಿ.ಪಿ. ಮುಖಾಂತರ ಬರಗಾಲ ಬಂದಂಥ ಪ್ರದೇಶಗಳಲ್ಲಿ ಏನು ಖರ್ಚು ಮಾಡುತ್ತೇವೋ ಅಂದರೆ ಜನರಿಗೆ ಕೆಲಸಗಳನ್ನು ಏನು ಕೊಡುತ್ತೇವೆ ಅದನ್ನೆಲ್ಲಾ ಸೇರಿಸಿ ಕಳೆದ ೩ ವರ್ಷಗಳಲ್ಲಿ ೧೯೦ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಇದೇ ಹಣವನ್ನು ನಮಗೆ ಅಲ್ಲಿ ಖರ್ಚು ಮಾಡತಕ್ಕಂಥ ಅಗತ್ಯ ಇಲ್ಲದೇ ಇದ್ದಿದ್ದರೆ ಈ ಹಣವನ್ನು ನಾವು ನೀರಾವರಿಗಾಗಿ ಉಪಯೋಗಿಸಬಹುದಾಗಿತ್ತು. ಅದರಲ್ಲಿ ಕೆಲವು ಭಾಗ ವಿದ್ಯುಚ್ಛಕ್ತಿಗೂ ಉಪಯೋಗಿಸಬಹುದಾಗಿತ್ತು. ನಾನು ಸದನಕ್ಕೆ ಒಂದು ಮಾತನ್ನು ಕೊಡುತ್ತೇನೆ. ಈ ವರ್ಷದ ಇಡೀ ಬಡ್ಜೆಟ್ ಭಾಷಣವನ್ನು ತಾವು ಓದಿದರೆ ಅದರಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ, ನೀರಾವರಿ ಬಂತು, ವಿದ್ಯುಚ್ಛಕ್ತಿ ಬಂತು, ಖುಷ್ಕಿ ಜಮೀನಿನ ಅಭಿವೃದ್ಧಿ ಬಂತು ಮತ್ತು ಗ್ರಾಮೀಣ ಕೈಗಾರಿಕೆ ಬಂತು, ಇವುಗಳಿಗಾಗಿ ನಾವು ಅತೀ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದೇವೆ, ಹೆಚ್ಚು ಹಣವನ್ನು ಒದಗಿಸಿದ್ದೇವೆ, ಅದು ನಮ್ಮ ಪ್ರಿಯಾರಿಟಿ. ಈ ಒಂದು ಹೊಸ ನೀತಿಯನ್ನು ನಾವು ಕಳೆದ ವರ್ಷದಿಂದಲೇ ಪ್ರಾರಂಭಿಸಿದ್ದೇವೆ, ಈ ವರ್ಷ ಸ್ಪಷ್ಟವಾಗಿ ಹೇಳುತ್ತಾ ಇದ್ದೇವೆ. ಇನ್ನು ೧೫ ವರ್ಷಗಳಲ್ಲಿ ಗ್ರಾಮೀಣ ಕ್ಷೇತ್ರದಲ್ಲಿ ಚಿತ್ರವನ್ನು ಬದಲಾಯಿಸತಕ್ಕದ್ದು ನಮ್ಮ ಧ್ಯೇಯ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇಷ್ಟಾದರೂ ಕೂಡ ನಾವು ಮಾಡಿದಂಥ ಕೈಗೊಂಡಂಥ ಅನೇಕ ಕಾರ್ಯಕ್ರಮಗಳ ಫಲವಾಗಿ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದ ಸ್ಥಾನ ಇಡೀ ದೇಶದಲ್ಲಿ ಹತ್ತನೆಯದು ಇದ್ದರೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದ ಸ್ಥಾನ ೯. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದ ಸ್ಥಾನ ಸ್ವಲ್ಪ ಮೇಲಕ್ಕೆ ಬಂದಿದೆ, ೮ನೇ ಸ್ಥಾನ ಪಡೆದಿದೆ.

೭ನೇ ಪಂಚವಾರ್ಷಿಕ ಯೋಜನೆಯ ಮೊತ್ತವನ್ನು ನಾವು ತಾತ್ಕಾಲಿಕವಾಗಿ ಒಪ್ಪಿಕೊಂಡಿದ್ದೇವೆ. ಅದರಿಂದ ನಮಗೆ ತೃಪ್ತಿಯಿಲ್ಲ. ನಾವು ಈ ವಿಚಾರವನ್ನು ಪ್ಲಾನಿಂಗ್ ಕಮಿಷನ್ ಉಪಾಧ್ಯಕ್ಷರಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಈ ವರ್ಷವೇ ಪ್ಲಾನಿಂಗ್ ಕಮಿಷನ್‌ರವರು ಚರ್ಚೆ ನಂತರ ಒಪ್ಪಿದಂತಹ ಮೊತ್ತ ೮೬-೮೭ನೇ ಸಾಲಿನ ಯೋಜನೆಗೆ ೭೫೧ ಕೋಟಿ ರೂಪಾಯಿ ಆಗಿತ್ತು. ಆದರೆ, ಅದರಿಂದ ನಮ್ಮ ಮನಸ್ಸಿಗೆ ಸಮಾಧಾನವಾಗದೇ, ನಾವು ಇನ್ನೂ ಹೆಚ್ಚು ಹಣವನ್ನು ಮುಖ್ಯವಾಗಿ ಕೃಷ್ಣಾ ವಲಯದ ಯೋಜನೆಗಳಿಗೆ ಕೊಡಬೇಕು ಎಂದುಕೊಂಡು ಅಪ್ಪರ್ ಕೃಷ್ಣಾ ಮತ್ತು ಕಾರಂಜಾ ಯೋಜನೆಗೆ ಇನ್ನೂ ೧೪ ಕೋಟಿ ರೂಪಾಯಿಗಳನ್ನು ಹೆಚ್ಚುಮಾಡಿದ್ದೇವೆ. ಅದಕ್ಕೆ ಯೋಜನಾ ಆಯೋಗದವರು ಒಪ್ಪಿದ್ದರೆ. ಸ್ಪಷ್ಟವಾಗಿ ಈ ಬಗ್ಗೆ ಪತ್ರವನ್ನು ಬರೆದಿದ್ದೇವೆ ೭೬೫ ಕೋಟಿ ರೂಪಾಯಿಗಳು, ಈ ಬರತಕ್ಕಂತಹ ವರ್ಷದಲ್ಲಿ ಯೋಜನೆಗೆ ಖರ್ಚು ಮಾಡುತ್ತೇವೆ ವರ್ಷದ ಕೊನೆಯೊಳಗೆ ದೇವರ ದಯೆಯಿಂದ ಬರುವ ವರ್ಷ ಬರಗಾಲ ಪರಿಸ್ಥಿತಿ ಆಗದಿದ್ದರೆ, ಈ ಮೊತ್ತವನ್ನು ನಾವು ಇನ್ನೂ ಹೆಚ್ಚು ಮಾಡುತ್ತೇವೆ ಎಂಬ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಅಷ್ಟೇ ಅಲ್ಲ, ಈ ವರ್ಷದ ಬಜೆಟ್‌ನಲ್ಲಿ ಅನೇಕ ಮಾನ್ಯ ಸದಸ್ಯರಿಗೆ ಮನಸ್ಸಿನಲ್ಲಿ ಏನೊಂದು ಅಸಮಾಧಾನವಿತ್ತು, ಅದನ್ನು ನಿವಾರಿಸತಕ್ಕಂತಹ ಕೆಲವು ಹೆಚ್ಚಿನ ವಿಷಯಗಳನ್ನೂ ಬಡ್ಜೆಟ್‌ನಲ್ಲಿ ಸೇರಿಸಿದ್ದೇವೆ, ಅದು ಚಿಕ್ಕ ನೀರಾವರಿ ಮತ್ತು ಕಮ್ಯೂನಿಕೇಷನ್, ರಸ್ತೆ ಮತ್ತು ಹಳ್ಳಿಗಳಲ್ಲಿ ಬ್ರಿಡ್ಜ್: ಇವುಗಳ ಬಗ್ಗೆ ನಾವು ಒದಗಿಸಿದಂತಹ ಹಣ ಕೇವಲ ೧೧ ಕೋಟಿ ರೂಪಾಯಿಗಳಾಗಿದ್ದರೆ, ಸುಮಾರು ೭೮-೭೯ ಕೋಟಿ ರೂಪಾಯಿಗಳ ಅಂದಾಜಿನ ಕೆಲಸಗಳನ್ನು ನಾವು ಇದರಲ್ಲಿ ಸೇರಿಸಿದ್ದೇವೆ. ಇದು ಕನ್ನಡಿಯೊಳಗಿನ ಗಂಟು ಎಂದು ಯಾರೂ ತಿಳಿಯಬಾರದು, ೩ ವರ್ಷಗಳ ಹಿಂದೆ ಇಂತಹ ಪರಿಸ್ಥಿತಿ ಇತ್ತು, ನಿಜ. ೩ ವರ್ಷಗಳ ಹಿಂದೆ ನಾವು ಕೇವಲ ಸಾಂಕೇತಿಕವಾಗಿ ಹಣವನ್ನು ಒದಗಿಸಿದ್ದೇವೆ. ಆದರೆ, ಆದನ್ನು ಜಾರಿಯಲ್ಲಿ ತರತಕ್ಕಂಥಾದ್ದು ಸಾಧ್ಯವಾಗಿರಲಿಲ್ಲ. ಮಾನ್ಯ ಮೊಯಿಲಿಯವರು ಈಗ ಇಲ್ಲಿ ಇದ್ದಿದ್ದರೆ, ಬಹಳ ಸಂತೋಷವಾಗುತ್ತಿತ್ತು. ಏಕೆಂದರೆ, ಅವರು ಹಿಂದೆ ಹಣಕಾಸು ಮಂತ್ರಿಗಳಾಗಿದ್ದವರು. ಆಗ ಅವರು ಪುನಃ ಪುನಃ ಇದನ್ನು ಮಂಡಿಸುತ್ತಿದ್ದರು. ಸರ್ಕಾರ ದಿವಾಳಿಯಾಗಿ ಹೋಯಿತ್ತಲ್ಲಾ ಟ್ರೆಜರಿಯಲ್ಲಿ ೪ ಕಾಸೂ ಹಣವಿಲ್ಲ. ಚೆಕ್‌ಗಳು ಬೌನ್ಸ್ ಆಗುತ್ತವೆ. ಟಿಎ ಡಿಎ ಕೊಟ್ಟಿಲ್ಲ. ಸಂಬಳ ಕೊಡಲೂ ದುಡ್ಡಿಲ್ಲ, ಎಂದು ಟೀಕಿಸುತ್ತಿದ್ದರು. ಈ ತರಹದ ಟೀಕೆಗಳನ್ನು ಈ ಸದನದಲ್ಲಿಯೂ ಮಾಡಿದ್ದಾರೆ ಮತ್ತು ಸಾರ್ವಜನಿಕ ವೇದಿಕೆಗಳಿಂದಲೂ ಮಾಡಿದ್ದಾರೆ. ಅದು ಅಷ್ಟೇ ಅಲ್ಲ, ಆರು, ಎಂಟು ತಿಂಗಳು ಅವರ ಭಾಷಣಕ್ಕೆ ಇದೇ ಮುಖ್ಯವಾದ ವಿಷಯವಾಗಿತ್ತು. ಹೋದವರ್ಷ ನಾವು ಬಜೆಟ್‌ನಲ್ಲಿ ತೋರಿಸಿದ್ದು ೮೧ ಕೋಟಿ ರೂಪಾಯಿಯಷ್ಟು ಕೊರತೆ. ನಮ್ಮ ಪರಿಷ್ಕೃತ ಅಂದಾಜಿನ ಪ್ರಕಾರ, ಅದು ಸುಮಾರು ೩೦-೩೫ ಕೋಟಿ ರೂಪಾಯಿಗಳಿಗೆ ಇಳಿಯಿತು. ಒಂದು ಮಾತನ್ನು ವಿರೋಧಪಕ್ಷದ ನಾಯಕರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಏನೆಂದರೆ ಸುಮಾರು ೨೪೦-೨೪೨ ಕೋಟಿ ರೂಪಾಯಿಗಳ ಓವರಡ್ರಾಫ್ಟ್ ಇತ್ತು. ಅದು ಕರ್ನಾಟಕದ ಬಗ್ಗೆ ಮಾತ್ರ ಒಂದು ಹೊಸ ನೀತಿ ಅಲ್ಲ. ಇಡೀ ದೇಶಕ್ಕೆ ಸಂಬಂಧಪಟ್ಟ ಒಂದು ನೀತಿ. ಕೇಂದ್ರ ಸರ್ಕಾರದವರು ಇನ್ನು ಮುಂದೆ ಯಾವ ಸರ್ಕಾರವೂ ಓವರಡ್ರಾಫ್ಟ್‌ನ್ನು ೭ ದಿವಸಕ್ಕಿಂತ ಹೆಚ್ಚು ಉಪಯೋಗಿಸಿಕೊಳ್ಳಬಾರದು ಎಂಬ ನಿಬಂಧನೆಯನ್ನು ಹಾಕಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ, ನಮಗೆ ಇದರಿಂದ ತೊಂದರೆಯಾಗಿದ್ದರೂ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ದೇಶದ ಹಿತದೃಷ್ಟಿಯಿಂದ. ಸಿಕ್ಕಾಪಟ್ಟೆ ಡೆಫಿಸಿಟ್ ಫೈನಾನ್ಸಿಂಗ್ ಬಿಟ್ಟು ಖರ್ಚಿನ ಮೇಲೆ ಹಿಡಿತವನ್ನು ಇಟ್ಟುಕೊಳ್ಳದಿದ್ದರೆ, ಅದರ ದುಷ್ಪರಿಣಾಮ ಇಡೀ ದೇಶದ ಜನತೆ ಅನುಭವಿಸಬೇಕಾಗುತ್ತದೆ. ರೂಪಾಯಿಯ ಬೆಲೆ ಕಡಿಮೆ ಆಗಿರುವುದೇ ಇದಕ್ಕೆ ಮುಖ್ಯ ಕಾರಣ. ಕೇಂದ್ರ ಸರ್ಕಾರದ ಹೊಸ ನೀತಿಯನ್ನು ಕಟ್ಟುನಿಟ್ಟಾಗಿ ನಾವು ಆಚರಣೆಗೆ ತಂದಿದ್ದೇವೆ. ಇವತ್ತಿನವರೆಗೂ, ಒಂದು ದಿವಸ ಕೂಡ ಓವರಡ್ರಾಫ್ಟ್‌ನ ಮೊತ್ತವನ್ನು ನಾವು ಮೀರಿಲ್ಲ. ಆದರೆ, ಒಂದು ಸೂಚನೆಯನ್ನು ನಾನು ಈ ಬಜೆಟ್ ಭಾಷಣದಲ್ಲಿ ಮಾಡಿದ್ದೇನೆ. ಏನೆಂದರೆ, ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಅದರ ಪರಿಮಿತಿ ೪೦ ಕೋಟಿ ರೂಪಾಯಿ ಇವತ್ತು ಇದೆ. ಇದನ್ನು ನಿರ್ಧರಿಸಿದ್ದು ೮೦-೮೧ರಲ್ಲಿ. ನಮ್ಮ ಆಗಿನ ಒಟ್ಟು ಬಡ್ಜೆಟ್ಟು ಎಷ್ಟು ಇತ್ತೋ. ಅದರ ಎರಡು ಪಟ್ಟು ಬಜೆಟ್ ಹೆಚ್ಚಾಗಿದೆ. ಈವತ್ತು ನಮ್ಮದು ಸುಮಾರು ೩ ಸಾವಿರ ಕೋಟಿ ರೂಪಾಯಿ ಬಜೆಟ್ ಇದೆ. ನನ್ನ ನೆನಪಿನಲ್ಲಿದ್ದ ಹಾಗೆ, ಆ ಕಾಲದಲ್ಲಿ ೧,೨೦೦ ಕೋಟಿ ರೂಪಾಯಿ ಇತ್ತು. ಅಥವಾ ಸ್ವಲ್ಪ ಕಮ್ಮಿ ಇರಬಹುದು. ಈ ಒಂದು ಕಾರಣದಿಂದ, ವೇಸ್

ಅಂಡ್ ಮಿಾನ್ಸ್ ೪೦ ಕೋಟಿ ರೂಪಾಯಿ ಎಂದು ಏನೊಂದು ಪರಿಮಿತಿಯನ್ನು ಹಾಕಿದ್ದಾರೆ, ಅದನ್ನು ವಿಸ್ತರಿಸಬೇಕೆಂಬ ಸೂಚನೆಯನ್ನು ಮಾಡಿದ್ದೇನೆ. ಇದನ್ನು ಕೇಂದ್ರ ಸರ್ಕಾರದವರು ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ. ಈಗ ಡೆಫಿಸಿಟ್ ಫೈನಾನ್ಸಿಂಗ್ ವಿಚಾರಕ್ಕೆ ನಾವು ಬಂದಾಗ, ಇದು ಕೇವಲ ರಾಜ್ಯ ಸರ್ಕಾರದವರು ಆಚರಣೆಯಲ್ಲಿ ತರತಕ್ಕಂತಹ ಶಿಸ್ತು ಮಾತ್ರ ಆಗಕೂಡದು. ಕೇವಲ ರಾಜ್ಯ ಸರ್ಕಾರದವರ ಮೇಲೆ ಶಿಸ್ತನ್ನು ಹಾಕಿದರೆ, ಅದರಿಂದ ನೀವು ನಿರೀಕ್ಷಿಸುವ ಫಲ ಸಿಕ್ಕುವುದಿಲ್ಲ. ಇದನ್ನು ಕೇಂದ್ರ ಸರ್ಕಾರದವರೂ ಕೂಡ ಆಚರಣೆಯಲ್ಲಿ ತರಬೇಕು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಯೋಜನಾ ಆಯೋಗವು ಅಂದಾಜು ಮಾಡಿರುವ ಪ್ರಕಾರ, ಮತ್ತು ಹಾಕಿರುವ ಮಿತಿಯ ಪ್ರಕಾರ ೧೪ ಸಾವಿರ ಕೋಟಿ ರೂಪಾಯಿ ಡೆಫಿಸಿಟ್ ಫೈನಾನ್ಸಿಂಗ್‌ಗೆ ಅವಕಾಶ ಇದೆ. ಆದರೆ, ಒಂದು ವರ್ಷದಲ್ಲಿ ಸುಮಾರು ೮ ಸಾವಿರ ಕೋಟಿ ರೂಪಾಯಿಗಳ ಡಿಫಿಸಿಟ್ ಫೈನಾನ್ಸಿಂಗ್ ಆಗಿದೆಯೆಂದು ಯೋಜನಾ ಆಯೋಗದವರು ನಮಗೆ ತಿಳಿಸಿದರು. ಅದುದರಿಂದ ಯಾವ ಒಂದು ಶಿಸ್ತನ್ನು ನಾವು ಪಾಲನೆ ಮಾಡುತ್ತಿದ್ದೇವೆಯೋ, ಅದೇರೀತಿಯಲ್ಲಿ ಶಿಸ್ತಿನ ಪಾಲನೆಯನ್ನು ಕೇಂದ್ರ ಸರ್ಕಾರದವರೂ ಮಾಡಲೆಬೇಕೆನ್ನುವ ಆಗ್ರಹ ನನ್ನದು. ಅದು ಇಲ್ಲದಿದ್ದರೆ, ಅವರು ನಿರೀಕ್ಷಿಸುವ, ಬಯಸುವ ಫಲ ಇದರಿಂದ ಸಿಕ್ಕಲಾರದು. ವಿರೋಧಪಕ್ಷದ ನಾಯಕರು ಈ ಬಜೆಟ್ಟನ್ನು ೨ ಕಾರಣಗಳಿಂದ ವಿರೋಧ ಮಾಡಿದ್ದಾರೆ. ಒಂದು, ಆದಷ್ಟೂ ಡೆಫಿಸಿಟ್ ಫೈನಾನ್ಸಿಂಗ್‌ನ್ನು ಕಡಿಮೆ ಮಾಡಬೇಕೆಂಬ ವಿಚಾರಧಾರೆ. ಇಲ್ಲಿ ಇದನ್ನು ನಾವು ಒಪ್ಪಿದರೂ, ಕೊರತೆ ಇರತಕ್ಕ ಆಯವ್ಯಯ ಪತ್ರದ ಮಂಡನೆ ಹಣದುಬ್ಬರಕ್ಕೆ ಹೆಚ್ಚಾಗಿ ಎಡೆಮಾಡಿಕೊಟ್ಟಿದೆ ಎಂಬ ಅಂಶವನ್ನು ನಾವು ಗಮನಿಸಬೇಕಾಗಿದೆ. ಈ ಒಂದು ಕಾರಣಕ್ಕೆ ಈ ಆಯವ್ಯಯ ಪತ್ರವನ್ನು ನಾನು ವಿರೋಧಿಸುತ್ತೇನೆ ಎಂದು ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ನಮ್ಮ ಈ ಮುಂಗಡ ಪತ್ರದಲ್ಲಿ ಬರುವ ವರ್ಷದ ಕೊನೆಗೆ ಕೇವಲ ೩೮ ಕೋಟಿ ರೂಪಾಯಿಯಷ್ಟು ಮಾತ್ರ ಕೊರತೆಯಾಗಬಹುದೆಂದು ಹೇಳಿ ಅಂದಾಜು ಮಾಡಿದ್ದೇವೆ. ಆದರೆ ಈ ಕೊರತೆಯೂ ಬಹುಶಃ ಇರಲಿಕ್ಕಿಲ್ಲವೆಂದು ಹೇಳತಕ್ಕ ಆಶಾ ಭಾವನೆ ನನ್ನ ಮನಸ್ಸಿನಲ್ಲಿದೆ. ಅದುದರಿಂದ ಡೆಫಿಸಿಟ್ ಫೈನಾನ್ಸಿಂಗ್ ಅನ್ನು ನಾವು ಮಾಡಿಲ್ಲ. ಮತ್ತು ಮೂವತ್ತೆಂಟು ಕೋಟಿ ರೂಪಾಯಿಯೇನೂ ದೊಡ್ಡ ಡೆಫಿಸಿಟ್ ಅಲ್ಲ. ನಾಳೆ ಬೇರೆ ಬೇರೆ ರಾಜ್ಯಗಳ ಬಜೆಟ್ಟನ್ನು ನಾವು ನೋಡಿದರೆ ಯಾವ ಯಾವ ರಾಜ್ಯಗಳ ಬಜೆಟ್ಟಿನಲ್ಲಿ ಎಷ್ಟೆಷ್ಟು ಕೊರತೆಯಿದೆಯೆಂದು ಗೊತ್ತಾಗುತ್ತದೆ. ಆಂಧ್ರದಲ್ಲಿ ಈಗಾಗಲೇ ೧೨೮ ಕೋಟಿ ರೂಪಾಯಿಗಳಷ್ಟು ಕೊರತೆ ಇದೆ. ಇನ್ನೂ ಬೇರೆ ಬೇರೆ ರಾಜ್ಯಗಳ ಬಜೆಟ್ ಇನ್ನೂ ಬಂದಿಲ್ಲ. ಆದ್ದರಿಂದ ನಮ್ಮ ಬಜೆಟ್ ನಿಜವಾಗಿಯೂ ಖೋತಾ ಬಜೆಟ್ ಅಲ್ಲವೇ ಅಲ್ಲವೆಂದು ಹೇಳಿದರೂ ಕೂಡ ತಪ್ಪಾಗಲಿಕ್ಕಿಲ್ಲ. ಎರಡನೇ ಕಾರಣದಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ಟನ್ನು ವಿರೋಧ ಮಾಡಿದ್ದು, ರಾಜ್ಯ ಸರ್ಕಾರದವರು ಯೋಜನಾ ಆಯೋಗದ ಮುಂದೆ ಅಥವಾ ಎನ್.ಡಿ.ಸಿ. ಮುಂದೆ ನಮ್ಮ ಕೇಸನ್ನು ಇಡತಕ್ಕಂತಹ ಸಂದರ್ಭದಲ್ಲಿ ವಿಫಲರಾಗಿದ್ದಾರೆ ಎಂದು ಈ ವಿಷಯವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಬಜೆಟ್ಟನ್ನು ವಿರೋಧ ಮಾಡುತ್ತೇನೆಂದು ಹೇಳಿದ್ದಾರೆ. ಅದು ಹೇಗೆ ವಿಫಲರಾಗಿದ್ದೇವೆಂದು ನನಗೆ ಗೊತ್ತಾಗಲಿಲ್ಲ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ನಮ್ಮ ಪ್ರಯತ್ನದಲ್ಲಿ ನಾವು ವಿಫಲರಾಗಿಲ್ಲ. ಆದರೆ ಕೇಂದ್ರ ಸರ್ಕಾರದ ನೀತಿ ಆ ರೀತಿ ಇದ್ದುದರಿಂದ ನಮಗೆ ಬೇಕಾದಷ್ಟು ಹಣ ಸಿಗಲಿಲ್ಲ. ನಾನು ಈ ಒಂದು ಮಾತನ್ನು ಇಲ್ಲಿ ಹೇಳಿದರೆ ಯಾರೂ ತಪ್ಪು ತಿಳುವಳಿಕೆ ಮಾಡಿಕೊಳ್ಳಬಾರದು. ಇಂದು ಯೋಜನಾ ಆಯೋಗದಲ್ಲಿ ಕರ್ನಾಟಕಕ್ಕೆ ಇರತಕ್ಕಂತಹ ಗೌರವ ಬೇರೆ ರಾಜ್ಯಗಳಿಗೆ ಇಲ್ಲ. ಇದು ಕೇವಲ ಅಲ್ಲಿನ ಉಪಾಧ್ಯಕ್ಷರು ಮತ್ತು ಸದಸ್ಯರ ಜೊತೆಗೆ ನನಗೆ ಇರತಕ್ಕಂತಹ ವೈಯುಕ್ತಿಕ ಸ್ನೇಹ ಅಲ್ಲ, ಇಡೀ ಯೋಜನಾ ಆಯೋಗದಲ್ಲಿ ಇವತ್ತು ಕಳೆದ ಮೂರು ವರ್ಷದೊಳಗೆ ನಮ್ಮ ಹಣಕಾಸಿನ ವ್ಯವಹಾರವನ್ನು ನೋಡಿ, ಯೋಜನೆಯನ್ನು ಕಾರ್ಯಗತ ಮಾಡಿರತಕ್ಕಂಥಾದ್ದನ್ನು ನೋಡಿ ಕರ್ನಾಟಕದ ಬಗ್ಗೆ ಹೆಚ್ಚು ಗೌರವ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ಟನ್ನು ವಿರೋಧ ಮಾಡಲಿಕ್ಕೆ ಕಾರಣ, ಬರಗಾಲ ಜಾಸ್ತಿಯಿದ್ದಾಗ ಸಂಪನ್ಮೂಲಗಳನ್ನು ಹೆಚ್ಚು ಹಿಡಿಯುವುದಕ್ಕೆ ತೊಂದರೆಯಾಗಬಹುದು ಹಾಗೂ ಇರತಕ್ಕ ಪ್ಲಾನ್ ಏನಿದೆಯೊ ಅದರ ಪ್ರಕಾರವೇ ಗುರಿ ಮುಟ್ಟತಕ್ಕ ವಿಚಾರದಲ್ಲಿ ವಿಫಲರಾಗುತ್ತಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತು ಸಂಪನ್ಮೂಲಗಳನ್ನು ಹಿಡಿಯುವುದಕ್ಕೆ ಶಕ್ತಿ ಹಾಗೂ ಸಾಮರ್ಥ್ಯವನ್ನು ನಾವು ಉಳಿಸಿಕೊಂಡಿಲ್ಲ

ವಾದ್ದರಿಂದ ವಿರೋಧ ಮಾಡುತ್ತೇನೆಂದು ಹೇಳಿದರು. ಇದರಲ್ಲಿ ಎರಡು ವಿಚಾರ ಇದೆ. ಒಂದು ಸಂಪನ್ಮೂಲಗಳನ್ನು ನಾವು ಹುಡುಕುವುದರಲ್ಲಿ ಗುರಿ ಮುಟ್ಟಿಲ್ಲ ಎಂದು. ಇದು ಸತ್ಯಕ್ಕೆ ದೂರವಾದಂತಹ ಮಾತು. ಆರನೇ ಯೋಜನೆಯಲ್ಲಿ ನಿಗದಿ ಮಾಡಿದ ಸಂಪನ್ಮೂಲಕ್ಕಿಂತಲೂ ಸುಮಾರು ೪೦೦ ಕೋಟಿ ರೂಪಾಯಿಯಷ್ಟು ಹೆಚ್ಚು ಸಂಗ್ರಹಿಸಿದ್ದೇವೆ. ಅದು ಬಹಳಷ್ಟು ಭಾಗ ಕೊನೆ ಎರಡು ವರ್ಷ ಅಂದರೆ, ೧೯೮೩-೮೪, ೧೯೮೪-೮೫ರಲ್ಲಿ ಅದೇ ರೀತಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೂಡ ನಾವು ಮಾಡಿದಂತಹ ಕೆಲಸದ ಬಗ್ಗೆ ಯೋಜನಾ ಆಯೋಗದವರು ತೃಪ್ತಿಯನ್ನು ಪಟ್ಟಿದ್ದಾರೆ. ಮಾನ್ಯ ಸದನಕ್ಕೆ ನಾನು ಪುನಃ ನೆನಪು ಮಾಡಿಕೊಡಬೇಕು ಅದೇನೆಂದರೆ ಇಡೀ ಹಿಂದೂಸ್ಥಾನದಲ್ಲಿ ಅತಿ ಹೆಚ್ಚು ಕರದ ಹೊರಗೆ ಒಳಗಾಗತಕ್ಕಂತಹ ರಾಜ್ಯಗಳಲ್ಲಿ ಕರ್ನಾಟಕ ಒಂದು ಎಂಬುದಕ್ಕಿಂತ, ಹೆಚ್ಚು ಕರ ಭಾರವನ್ನು ಹೊತ್ತಿರತಕ್ಕಂತಹ ರಾಜ್ಯಗಳು ಕೇವಲ ಎರಡು ಇವೆ. ಅದು ತಮಿಳು ನಾಡು ಮತ್ತೊಂದು ನನಗೆ ನೆನಪಿದ್ದ ಹಾಗೆ ಗುಜರಾತ್ ಮೂರನೆಯದು ನಮ್ಮದು ಬರುತ್ತದೆ. ಶೇಕಡಾ ಹದಿನೇಳೂವರೆ ರೂಪಾಯಿ ಪರ್ ಕ್ಯಾಪಿಟಲ್‌ನಷ್ಟು ಕರಭಾರ ನಮ್ಮ ಕರ್ನಾಟಕದ ನಾಗರೀಕರ ಮೇಲೆ ಬಿದ್ದಿದೆ. ಇದಕ್ಕೆ ಮುಖ್ಯವಾದಂತಹ ಕಾರಣ ಕೇಂದ್ರ ಸರ್ಕಾರದ ಅಸಿಸ್ಟೆಂಟ್ಸ್ ಮತ್ತು ಅವರು ಅನುಸರಿಸಿದಂತಹ ಕ್ರೈಟೀರಿಯಾ ಏನಿದೆ ಅದು ನಮಗೆ ಅನುಕೂಲವಾಗದಂತೆ ಇರತಕ್ಕಂಥಾದ್ದು ಮುಖ್ಯವಾದ ಕಾರಣವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ತಮಿಳು ನಾಡಿನಲ್ಲಿ ೧೭.೧, ಆಂಧ್ರದಲ್ಲಿ ೧೫ ನಮ್ಮ ಕರ್ನಾಟಕದ್ದು ೧೪.೮ ಇದೆ. ಅಂದರೆ ೧೫ ಆಗುತ್ತದೆ. ಮೂರನೆಯದು ನಮ್ಮಲ್ಲಿ ಬರಗಾಲ ಜಾಸ್ತಿಯಿದ್ದಾಗ ಸಂಪನ್ಮೂಲಗಳನ್ನು ಹೆಚ್ಚು ಹುಡುಕುವುದಕ್ಕೆ ತೊಂದರೆಯಾಗಿದೆಯೆಂದು ಏನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಅದಿಲ್ಲದಿದ್ದರೆ ನಮ್ಮಲ್ಲೂ ಹೆಚ್ಚು ಸಂಪನ್ಮೂಲಗಳ ಸಂಗ್ರಹಣೆ ಆಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ. ವಿದ್ಯುಚ್ಛಕ್ತಿಯಿಂದ ಬರತಕ್ಕಂತಹ ವರಮಾನವೇದು ಇಟ್ಟು ಕೊಳ್ಳೋಣ ಮಳೆ ಅಭಾವದಿಂದ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆಯಾಗಿದೆ. ನಾವು ವಿದ್ಯುಚ್ಛಕ್ತಿ ದರವನ್ನು ಹೆಚ್ಚು ಮಾಡಿದರೂ ಕೂಡ ಈ ಮೂರು ವರ್ಷದಲ್ಲಿ ನಮಗೆ ಕೇವಲ ಈ ಒಂದೇ ಬಾಬಿನಲ್ಲಿ ಆದಂತಹ ಕೊರತೆ ೭೦ ಕೋಟಿ ರೂಪಾಯಿಗಳು. ಆದ್ದರಿಂದ ಆ ಮಾತಿನಲ್ಲಿ ಸತ್ಯವಿಲ್ಲವೆಂದು ನಾನು ಹೇಳುವುದಿಲ್ಲ. ಅವರು ಏನು ಒಂದು ನಿರ್ಣಯಕ್ಕೆ ಬಂದಿದ್ದಾರೆ ಸಂಪನ್ಮೂಲಗಳನ್ನು ಹುಡುಕುವುದಕ್ಕೆ ಶಕ್ತಿ ಸಾಮರ್ಥ್ಯ ಉಳಿಸಿಕೊಂಡಿಲ್ಲ ಎಂದು, ಅದು ನಿಜವಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾತೆತ್ತಿದರೆ ಬರಗಾಲ ಪರಿಸ್ಥಿತಿ ಎಂದು ಹೇಳುವುದನ್ನು ನೋಡಿದರೆ. ಇದೇ ನಿಮ್ಮ ಜೀವನದ ರಕ್ಷೆಯಾಗಿದೆ ಎಂಬ ಈ ಮಾತನ್ನು ಏಕೆ ಹೇಳಿದರೋ ನನಗೆ ಗೊತ್ತಿಲ್ಲ. ತೋಳ ಬಂತು, ತೋಳ ಬಂತು ಎಂದು ಇವರು ಹೇಳುತ್ತಿದ್ದರೆ. ಶ್ರೀ ಗುಂಡೂರಾವ್ ಇದ್ದಿದ್ದರೆ ಪಾವಗಡಕ್ಕೆ ಹೆಲಿಕ್ಯಾಪ್ಟರ್ ನಲ್ಲಿ ಹೋಗಿ ಓಡಿಸುತ್ತಿದ್ದರು. ಶ್ರೀಮಾನ್ ಮೊಯಿಲಿಯವರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು ಏನೆಂದರೆ ಕೆ. ಇ. ಬಿ. ಕರ್ನಾಟಕ ಪವರ್ ಕಾರ್ಪೊರೇಷನ್ ಹಾಗೂ ಕೆ. ಎಸ್. ಆರ್. ಟಿ. ಸಿ. ಯಿಂದ ಕಾಂಟ್ರಿಬ್ಯೂಷನ್ ಕಡಿಮೆಯಾಗುತ್ತಿದೆ ಎಂದು. ಇದು ನಿಜ. ಈ ವರ್ಷದ್ದು ಹೇಳುತ್ತಿದ್ದೇನೆ. ಈಗ ಒಟ್ಟು ಮೂರು ಸಂಸ್ಥೆಗಳಿಂದ ೧೯೮೬-೮೭ನೇ ಇಸವಿಗೆ ೧೨೪ ಕೋಟಿ ರೂಪಾಯಿಗಳಷ್ಟು ವಿಶೇಷವಾದಂತಹ ಆದಾಯ ಬರುತ್ತಿದೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ವಿಚಾರದಲ್ಲಿ ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು ಕನಿಷ್ಠ ಪಕ್ಷ ಈ ವಿಚಾರದಲ್ಲಿ ಯಾದರೂ ಸರ್ಕಾರದ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ವಿದ್ಯುಚ್ಛಕ್ತಿ ಅಭಾವ ಇದೆ ಹಣಕಾಸಿನ ತೊಂದರೆ ಇದೆ. ಹೀಗಿದ್ದರೂ ಕೂಡ ಕಳೆದ ಮೂರು ವರ್ಷಗಳಲ್ಲಿ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡತಕ್ಕಂತಹ ಕಾರ್ಯಕ್ರಮದಲ್ಲಿ, ಹರಿಜನ ಬಸದಿಗಳಿಗೆ, ತಾಂಡಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕಂತಹ ಕಾರ್ಯಕ್ರಮದಲ್ಲಿ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕಂತಹ ಕಾರ್ಯಕ್ರಮದಲ್ಲಿ ಅಭೂತ ಪೂರ್ವವಾದಂತಹ ಪ್ರಗತಿಯನ್ನು ನಾವು ಸಾಧಿಸಿದ್ದೇವೆ. ಹಿಂದೆ ಯಾವ ಕಾಲದಲ್ಲೂ ಕೂಡ ವರ್ಷಕ್ಕೆ ೧೮ ಸಾವಿರಕ್ಕಿಂತಲೂ ಹೆಚ್ಚು ಪಂಪ್ ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದಿಲ್ಲ. ಕಳೆದ ವರ್ಷ ೩೮ ಸಾವಿರ ಪಂಪ್ ಸೆಟ್‌ಗಳಿಗೆ ಒದಗಿಸಿದ್ದೇವೆ. ಈ ವರ್ಷ ಕೂಡ ಸುಮಾರು ೪೨ ಸಾವಿರ ಪಂಪ್ ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ೪೫ ಸಾವಿರಕ್ಕೆ ಹೋದರೂ ಹೋಗಬಹುದು. ಇಷ್ಟೊಂದು ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೂ ಇದು ಎಂಥ ಪರಿಸ್ಥಿತಿ ಎಂದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಭದ್ರಾವತಿ ಉಕ್ಕಿನ ಕಾರ್ಖಾನೆಗೆ ವಿದ್ಯುಚ್ಛಕ್ತಿ ಪೂರೈಕೆ ಕಡಿಮೆಯಾದ

ಕಾರಣ ಕಳೆದ ಕೆಲವು ವರ್ಷಗಳಿಂದ ಅಪಾರ ನಷ್ಟವನ್ನು ಅದು ಅನುಭವಿಸುತ್ತಿದೆ. ಈ ಕಾರ್ಖಾನೆ ವಿದ್ಯುಚ್ಛಕ್ತಿ ಮಂಡಲಿಗೆ ಸುಮಾರು ೫೦ ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಕೊಡಬೇಕು. ಅದನ್ನು ಅವರು ಕೊಡಲಿಕ್ಕೆ ಆಗುತ್ತಿಲ್ಲ. ವಿದ್ಯುಚ್ಛಕ್ತಿ ಮಂಡಲಿಗೆ ಈ ತರಹದ ಬಾಕಿ ಹಣ ಬರಬೇಕಾಗಿರುವುದರಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕಷ್ಟ ಇರುವುದರಿಂದ ಕರ್ನಾಟಕ ಪವರ್ ಕಾರ್ಪೊರೇಷನ್‌ನವರಿಗೆ ಏನು ಹಣ ಕೊಡಬೇಕು ಅದನ್ನು ಕೊಡಲಿಕ್ಕೆ ಆಗಿಲ್ಲ. ಹೀಗೆ ಒಂದು ವಿಷ ಚಕ್ರವಾಗಿದೆ. ನಿಮ್ಮ ವಿದ್ಯುಚ್ಛಕ್ತಿ ಕಾರ್ಯಕ್ರಮಗಳಿಗೆ ಸ್ವಲ್ಪ ಮಟ್ಟಿಗೆ ಬಾಧಕವಾಗಿದೆ. ಆದರೂ ಇಂದು ನಮಗೆ ಪ್ರತಿ ದಿವಸ ತುಸು ಹೆಚ್ಚೂ ಕಡಿಮೆ ೪೦ ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿ ಅವಶ್ಯಕತೆ ಇದೆ. ಇವತ್ತು ವಿದ್ಯುತ್ತಿನ ಬೇಡಿಕೆ ಹೆಚ್ಚು ಇರುವುದರಿಂದ ನಾವು ಹೆಚ್ಚು ನೀರನ್ನು ಉಪಯೋಗಿಸುತ್ತಿದ್ದೇವೆ. ಒಂದು ವೇಳೆ ಆ ಭಾಗದಲ್ಲಿ ಮಳೆ ಆಗದೇ ಇದ್ದರೆ ವಿದ್ಯುಚ್ಛಕ್ತಿ ಕಡಿತ ಹೆಚ್ಚು ಮಾಡತಕ್ಕ ಪ್ರಸಂಗ ಬಂದರೂ ಬರಬಹುದು, ಈ ಮುನ್ಸೂಚನೆ ಯನ್ನು ನಾನು ಈಗಲೇ ಕೊಡುವುದಕ್ಕೆ ಬಯಸುತ್ತೇನೆ. ನಾವು ಉತ್ಪಾದನೆ ಮಾಡುತ್ತಿರುವುದು ೨೩ ಯೂನಿಟ್ ಮಿಲಿಯನ್ ಜೂನ್ ೧೫ನೇ ತಾರೀಖಿನವರೆಗೆ ನೀರಿನ ಪ್ರಮಾಣ ಸರಿಯಾಗಿದ್ದರೆ ಮಾಡಬಹುದು. ಈಗ ಪ್ರತಿ ದಿವಸ ೭ ಮಿಲಿಯನ್ ಯೂನಿಟ್ ಬೇರೆ ಬೇರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಆದುದರಿಂದ ನಮಗೆ ಎಷ್ಟು ವಿದ್ಯುಚ್ಛಕ್ತಿ ಬೇಕೋ ಅಷ್ಟು ನಮ್ಮ ಹತ್ತಿರವಿಲ್ಲ. ವಿದ್ಯುಚ್ಛಕ್ತಿಯ ಅಭಾವದಿಂದ ಕೈಗಾರಿಕಾ ಉತ್ಪಾದನೆ ಕಡಿಮೆಯಾಗಿ, ಅದರಿಂದ ಬರತಕ್ಕ ಸೇಲ್ಸ್ ಟ್ಯಾಕ್ಸ್ ಹಾಗೂ ಇನ್ನಿತರ ಆದಾಯ ಏನು ನಮಗೆ ಬರಬೇಕು, ಅದರಲ್ಲಿ ಸಹ ಕಡಿತವಾಗಿದೆ. ಬಡ್ಜೆಟ್ ಭಾಷಣದಲ್ಲಿ ಹೇಳಿದಂತೆ ಅನೇಕ ಮಧ್ಯಮ ತರಗತಿಯ ಹಾಗೂ ದೊಡ್ಡ ವಿದ್ಯುತ್‌ಚ್ಛಕ್ತಿ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿ ಅದು ಒಂದು ಮಿನಿಸ್ಟ್ರೀಯಿಂದ ಮತ್ತೊಂದು ಮಿನಿಸ್ಟ್ರಿಗೆ ಓಡಾಡುತ್ತಿದೆ. ಪೆಟ್ರೋಲಿಯಂ ಮಿನಿಸ್ಟ್ರಿಗೆ ಇನ್ನೂ ಕೆಲವು ಸಣ್ಣ ಪುಟ್ಟ ಯೂನಿಟ್‌ಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಡಬೇಕೆಂದು ಕಳುಹಿಸಿ ಕೊಟ್ಟಿದ್ದೇವೆ. ಬಾಕಿ ಎಲ್ಲಾ ಸಿದ್ಧತೆಯಾಗಿದ್ದರೂ ಅವರಿಂದ ಇನ್ನೂ ಕ್ಲಿಯರೆನ್ಸ್ ಬರದೇಯಿರುವುದರಿಂದ ಇನ್ನೂ ಅಲ್ಲೇ ಉಳಿದಿದೆ.

ಶ್ರೀ ಎಸ್. ಬಂಗಾರಪ್ಪ.—ಕೆಲವು ವಿವರಗಳನ್ನು ಅವರು ಬರೆದು ಕೇಳಿದ್ದರು, ಅದಕ್ಕೆ ಉತ್ತರ ಕಳುಹಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಟೆಲೆಕ್ಸ್ ಅನೂ ಕೂಡ ಶ್ರೀ ಸೇಠಿಯವರಿಗೆ ಕಳುಹಿಸಿಕೊಟ್ಟಿದ್ದೇವೆ. ಇನ್ನು ಕೈಗಾ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇದರ ಬಗ್ಗೆ ಕೆಲವು ವ್ಯಕ್ತಿಗಳಿಂದ ವಿರೋಧ ಬರುತ್ತಿದೆ. ನಮ್ಮ ಮುಂದಿರತಕ್ಕಂಥಾದ್ದು ಎರಡು ಮಾರ್ಗ ಒಂದು ಯಾವುದೇ ರೀತಿಯ ಅನಾಹುತವಾಗಬಹುದೆಂದು ಇಟ್ಟುಕೊಂಡರೂ ಅದನ್ನು ಲೆಕ್ಕಿಸದೇ ನಾವು ಜಲ ವಿದ್ಯುತ್ ಯೋಜನೆಯನ್ನು ಎತ್ತಿಕೊಳ್ಳಬೇಕು. ಅದಿಲ್ಲದಿದ್ದರೆ ಬೇರೆ ಬೇರೆ ರಾಷ್ಟ್ರಗಳು ಮಾಡಿರತಕ್ಕ ರೀತಿಯಲ್ಲಿ ಅಣು ವಿದ್ಯುತ್ ಉತ್ಪಾದನೆ ಮಾಡಲು ಪ್ರಯತ್ನ ಮಾಡಬೇಕು. ಕರ್ನಾಟಕದಲ್ಲಿ ಇದು ಎಷ್ಟು ವರ್ಷದ ನಂತರ ಬರುತ್ತಿದೆ. ನಮ್ಮ ದೇಶದಲ್ಲಿ ಇದು ಮೊದಲನೇ ಯೂನಿಟ್ ಅಲ್ಲ, ಇಂದು ಆ ಕ್ಷೇತ್ರದಲ್ಲಿ ಯಾವುದೇ ರೀತಿಯ ಅನಾಹುತವಾಗಬಾರದೆಂದು, ಅನಾಹುತಕ್ಕೆ ಎಡೆ ಇರಕೂಡದೆಂದು ಅತ್ಯಂತ ಜಾಗರೂಕತೆಯನ್ನು ವಹಿಸುತ್ತಿದ್ದಾರೆ. ಅಂತಹ ಹೊಸ ಹೊಸ ಮಾರ್ಗಗಳನ್ನು ಅವರು ಶೋಧನೆ ಮಾಡಿದ್ದಾರೆ, ಆದರೆ ದುರ್ದೈವ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಜನರು ಅದನ್ನು ವಿರೋಧ ಮಾಡುತ್ತಿದ್ದಾರೆ.

ಶ್ರೀ ಸಿ. ಎನ್. ರಾಣೆ.—ಜನತಾ ಪಕ್ಷದ ಜನರೇ ಈ ರೀತಿ ವಿರೋಧ ಮಾಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಕಾಂಗ್ರೆಸ್–ಐ ಪಕ್ಷದವರು ವಿರೋಧ ಮಾಡುತ್ತಾರೆಂದು ಹೇಳಿದನೇ ? ಆದರೂ ಶ್ರೀ ರಾಣೆಯವರು ಸಮರ್ಥನೆ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅಷ್ಟೇ ಅಲ್ಲ ನಾವು ಅಣು ವಿದ್ಯುತ್ ಉತ್ಪಾದನೆ ಎಲ್ಲಿ ಆಗುತ್ತಿದೆ ಅಲ್ಲಿಗೆ ನಾವು ನಾಲ್ಕೈದು ಬೇರೆ ಬೇರೆ ಟೀಮುಗಳನ್ನು ಕಳಿಸುತ್ತಿದ್ದೇವೆ, ಇದನ್ನು ಯಾರು ವಿರೋಧ ಮಾಡುತ್ತಿದ್ದಾರೆ ಅವರು ಹೋಗಿ ನೋಡಿಕೊಂಡು ಬರಲಿ ಎಂದು ನಮ್ಮ ದೇಶದ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಂತಹ ಅಣು ವಿಜ್ಞಾನಿಗಳಾದ ಶ್ರೀ ರಾಜಾ ರಾಮಣ್ಣನವರು ಬಂದಿದ್ದರು, ಅವರ ಎದುರಿನಲ್ಲಿ ಚರ್ಚೆಯಾದಾಗ ಶ್ರೀ ರಾಣೆಯವರೂ ಇದ್ದರು. ನಮ್ಮ ಶಾಸಕರ ನೇತೃತ್ವದಲ್ಲಿ

ನಾಲ್ಕು ಬೇರೆ ಬೇರೆ ತಂಡಗಳನ್ನು ಕಳುಹಿಸುತ್ತಿದ್ದೇವೆ. ಅವರು ಆ ಕೇಂದ್ರಗಳಿಗೆ ಹೋಗಿ ಬರಲಿ. ಅವರ ಮನಸ್ಸಿಗೆ ಯಾವುದೇ ತರಹದ ಅನಾಹುತವಾಗುವುದಿಲ್ಲವೆಂದು ಖಾತ್ರಿಯಾಗಲಿ. ಜಲ ವಿದ್ಯುತ್ ಯೋಜನೆಗಳಾದ ಅಗನಾಶಿನಿ ಮತ್ತು ಬೇಡ್ತಿ ಇದರ ಬಗ್ಗೆ ಏತಕ್ಕೆ ವಿರೋಧ ಬಂದಿದೆಯೆಂದು ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತಿದೆ. ಒಂದು ಕಡೆ ಕಾಳಿ, ಶರಾವತಿ ಹತ್ತಿರದಲ್ಲೇ ಚಕ್ರಾ, ಮತ್ತು ವರಾಹಿ ಇದೆ. ಅಂದರೆ ಸುಮಾರು ೫೦ ಕಿಗೆ ಹಾರುವ ರೀತಿಯಲ್ಲಿ ಇದೆ. ಅಂದರೆ, ೫೦–೫೫ ಮೈಲಿ ದೂರದ ಅಂತರದಲ್ಲಿ ದೊಡ್ಡ ದೊಡ್ಡ ಜಲಾಶಯಗಳು ೪–೫ ಬಂದಿರುವುದರಿಂದ ಭೂಮಿಯಲ್ಲಿ ಯಾವ ತರಹದ ಪರಿಣಾಮವಾಗುತ್ತದೆ ಎಂಬುದರ ಬಗ್ಗೆ ಸಹ ಚರ್ಚೆಯಾಗಿದೆ ನಮ್ಮ ಹತ್ತಿರ ಕಲ್ಲಿದ್ದಲು ಇಲ್ಲ, ಎಣ್ಣೆ ಇಲ್ಲ. ನಾವು ವಿದ್ಯುಚ್ಛಕ್ತಿಯಿಲ್ಲದೆ ಯಾವುದೇ ಕ್ಷೇತ್ರದಲ್ಲಿ ಪ್ರಗತಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಎಷ್ಟು ದಿವಸದವರೆಗೆ ಬೇರೆ ರಾಜ್ಯಗಳ ಮೇಲೆ ಅವಲಂಬಿಸಿರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಾವು ಕೈಗೊಂಡಿರತಕ್ಕಂತಹ ಅನೇಕ ಹೊಸ ಹೊಸ ಯೋಜನೆಗಳೇನಿವೆ, ಅವುಗಳಿಗೆ ಕೇಂದ್ರ ಸರ್ಕಾರದ ಮನ್ನಣೆ ಸಿಗುತ್ತದೆಂದು ಭಾವಿಸಿದ್ದೇವೆ. ಮತ್ತೆ ಕಾವೇರಿ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಆದಷ್ಟು ಬೇಗ ಬಂದರೆ ಮೇಕೆದಾಟು ಜಲ ವಿದ್ಯುತ್ ಯೋಜನೆಯನ್ನು ಕೂಡ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ಬೇಡ್ತಿ ತೆಗೆದುಕೊಳ್ಳಬೇಕೋ ಹೇಗೆ ಎಂಬ ಬಗ್ಗೆ ಬಹಳ ಚೊಕ್ಕವಾಗಿ ತಾವು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ —ಅದಕ್ಕೆ ಒಂದು ಕಮಿಟಿಯನ್ನು ಮಾಡಿದ್ದಾರೆ. ಅವರು ವರದಿ ಕೊಟ್ಟ ಮೇಲೆ ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಕರ್ನಾಟಕದ ೨೦ ಅಂಶಗಳ ಕಾರ್ಯಕ್ರಮಗಳ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು, ಶ್ರೀ ಕೆ. ಹೆಚ್. ಪಾಟೀಲ್‌ರವರು, ಶ್ರೀ ವೀರಪ್ಪಮೊಯಿಲಿಯವರು ಟೀಕೆ ಮಾಡಿದ್ದಾರೆ. ಅದರಲ್ಲಿ ಮೊದಲು ಕರ್ನಾಟಕದ ೧೫ನೇ ಸ್ಥಾನದಲ್ಲಿದ್ದುದು ೧೭ಕ್ಕೆ ಇಳಿದಿದೆಯೆಂದು ಹೇಳಿದ್ದಾರೆ. ಈ ವರ್ಷದಲ್ಲಿ ಇನ್ನೂ ಕೆಳಗೆ ಇದ್ದಾರೆಂದು ಹೇಳಿದ್ದಾರೆ. ಈ ವರ್ಷ ಮುಗಿಯಲಿಕ್ಕೆ ಇನ್ನೂ ಎರಡು ತಿಂಗಳು ಇದೆ. ಅಷ್ಟರಲ್ಲಿ ಬರತಕ್ಕಂತಹ ವರದಿ ಏನಿದೆ, ಅದನ್ನು ನೋಡಿದರೆ ನಾವು ಹೋದ ವರ್ಷಕ್ಕಿಂತ ಉತ್ತಮವಾಗಿ ಕೆಲಸ ಮಾಡಿದ್ದೇವೆಂದು ಗೊತ್ತಾಗಬಹುದು. ಇದರಲ್ಲಿ ಒಂದು ಮಾತನ್ನು ಮಾನ್ಯ ಸದವಕ್ಕೆ ತಿಳಿಸಬೇಕಾಗಿದೆ. ಅದೇನೆಂದರೆ, ನಮ್ಮ ಗುರಿ ಬೇರೆ ರಾಜ್ಯಕ್ಕಿಂತ ಎತ್ತರದ ಗುರಿ. ಉದಾಹರಣೆಗೆ ಹೇಳುವುದಾದರೆ ನಿವೇಶನಗಳನ್ನು ಹಂಚತಕ್ಕದ್ದು. ನಿವೇಶನಗಳನ್ನು ಹಂಚುವುದರಲ್ಲಿ ಉತ್ತರ ಪ್ರದೇಶದಲ್ಲಿ ೧೫ ಕೋಟಿ ಜನಸಂಖ್ಯೆ ಇದ್ದರೆ, ಅವರು ಹಾಕಿಕೊಂಡಿರತಕ್ಕದ್ದು ೭೧ ಸಾವಿರ. ನಮ್ಮದು ಮೂರು ಮುಕ್ಕಾಲು ಕೋಟಿ ಜನಸಂಖ್ಯೆಯಿದ್ದರೆ, ನಾವು ಹಾಕಿಕೊಂಡಿರತಕ್ಕದ್ದು ಒಂದು ಲಕ್ಷ. ಇದರಲ್ಲಿ ೭೦ ಸಾವಿರದಷ್ಟು ಸಾಧಿಸಿದರೂ ನಮಗೆ ಸಿಕ್ಕತಕ್ಕದ್ದು (ಬಿ). ಅವರು ೭೦ ಸಾವಿರದಲ್ಲಿ ೬೯ ಸಾವಿರ ಸಾಧಿಸಿದರೂ ಅವರಿಗೆ ಸಿಕ್ಕತಕ್ಕದ್ದು (ಎ). ಆದ್ದರಿಂದ ಗುರಿಯನ್ನು ಕಡಿಮೆ ಹಾಕಿಕೊಂಡರೆ ನಾವು ಕಾಗದ ಪತ್ರದ ಮೇಲೆ ಉತ್ತಮವಾದಂತಹ ಒಂದು ಪ್ರಗತಿಯನ್ನು ನಾವು ತೋರಿಸಬಹುದು.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಗುರಿ ಮುಟ್ಟಿದೆ. ಆದರೆ ಅದು ಸರಿಯಾಗಿ ಯಾರಿಗೆ ಸಿಗಬೇಕೋ ಅವರಿಗೆ ಸಿಕ್ಕಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ —ಅದರ ಬಗ್ಗೆ ಡಿಮ್ಯಾಂಡ್ ಬಂದಾಗ ಆ ವಿಚಾರ ಪ್ರಸ್ತಾಪ ಮಾಡಿ.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮೊಯ್ಲಿಯವರು ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರೂ ತೆಲುಗುಗಂಗಾ ಯೋಜನೆ ಬಗ್ಗೆ ಪ್ರಸ್ತಾಪ ಮಾಡುತ್ತಾ ಎನ್.ಟಿ.ಆರ್. ಅವರೊಂದಿಗೆ ನಿಮ್ಮದು ಗಾಢ ಸ್ನೇಹ ಇದೆ, ಅದಕ್ಕಾಗಿ ಸರಿಯಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯದಾಗುವುದಿಲ್ಲವೆಂದು ಹೇಳಿದ್ದಾರೆ. ವೈಯಕ್ತಿಕ ಸ್ನೇಹ ರಾಜ್ಯದ ಹಿತಕ್ಕೆ ಧಕ್ಕೆ ಬರುವಂಥ ವಿಷಯದಲ್ಲಿ ಅಡ್ಡ ಬರುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ನೀರಾವರಿ ಮಂತ್ರಿಯವರು ಅವರ ಬೇಡಿಕೆ ಬಂದಾಗ ಉತ್ತರ ಕೊಡುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಮಗೆ ಈ ಬಗ್ಗೆ ಇರುವ ಆತಂಕ ಏನೆಂದರೆ, ನೀರಾವರಿ ಸಚಿವರು ತೆಗೆದುಕೊಂಡಂಥ ನಿಲುವಿಗೂ, ತಾವು ತೆಗೆದುಕೊಂಡಂತಹ ನಿಲುವಿಗೂ ಸಣ್ಣ ವ್ಯತ್ಯಾಸ ಇದೆ. ರಾಜ್ಯದ ಹಿತದೃಷ್ಟಿಯಿಂದ ಇದರಲ್ಲಿ ಬಹಳ ಮಹತ್ವದ ವ್ಯತ್ಯಾಸ ಇದೆ. ಯಾವುದೇ ಕಾರಣದಿಂದ

ತೆಲಗುಗಂಗಾ ಯೋಜನೆ ಆದರೆ, ೨೦೦೦ ಇಸವಿಯ ನಂತರದಲ್ಲಿ ಬಚಾವತ್ ಐತೀರ್ಪು ಪ್ರಕಾರ ಯಾವ ಪ್ರಮಾಣದ ನೀರನ್ನು ಉಪಯೋಗ ಮಾಡಬೇಕೋ, ಅದಲ್ಲದೆ ನಂತರ ಹೆಚ್ಚುವರಿ ನೀರನ್ನು ಕೂಡ ಆವತ್ತಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ತೊಂದರೆಯಾಗುತ್ತದೆ ಎನ್ನುವ ವಿಚಾರ ಮತ್ತು ಪ್ರಿಸ್‌ಕ್ರಿಪ್ಟಿವ್ ರೈಟ್ಸ್ ಅವರಿಗೆ ಪ್ರಾಪ್ತಿ ಆಗುತ್ತದೆಂಬುದನ್ನು ನಾವು ಕಣ್ಣು ಮುಚ್ಚಿಕೊಂಡು ನೋಡುವುದಕ್ಕಾಗುವುದಿಲ್ಲ ಎನ್ನುವಂತಹ ವಿಚಾರವನ್ನು ಒಂದು ಹಂತದಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ, ಲೀಗಾಲಿಸ್ಟಿಕ್ ವ್ಯೂ ಪ್ರಕಾರ, ಕಾನೂನು ಪ್ರಕಾರ, ಏನಿದ್ದರೂ ಮಾಡಿಕೊಳ್ಳುತ್ತಾರೆ. ಇಲ್ಲ ಎನ್ನುವ ಹಾಗಿಲ್ಲ. ಪೊಟೆನ್‌ಷಿಯಲ್ ಅವರು ಕ್ರಿಯೇಟ್ ಮಾಡಿಕೊಂಡು ಬಿಟ್ಟರೆ ಅದರಲ್ಲೂ ನಾವು ೭೪೦ ಟಿಎಂಸಿ ನೀರನ್ನು ಉಪಯೋಗಿಸುವುದಕ್ಕೆ ಆಗುತ್ತದೋ ಇಲ್ಲವೋ ಎನ್ನುವ ಅನಿಶ್ಚಿತತೆ ಇರುವುದರಿಂದ, ಅವರು ಹೆಚ್ಚು ನೀರನ್ನು ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಮತ್ತು ನಾವು ಇದರ ಬಗ್ಗೆ ಕಣ್ಣು ಮುಚ್ಚಿಕೊಂಡು ನೋಡಿದರೆ, ನಮ್ಮ ಹಿತಾಸಕ್ತಿಗೆ ಧಕ್ಕೆಯಾಗುತ್ತದೆಂದೂ ತಾವು ಎಂದೂ ಸ್ಪಷ್ಟವಾಗಿ ಹೇಳಿಲ್ಲ. ಅವರು ಮಾಡಿಕೊಂಡರೆ, at his risk ಎಂದು ಹೇಳಿದ್ದೀರಿ. That is not a correct stand.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ದೇವೇಗೌಡರ ಹೇಳಿಕೆಗೂ, ನನ್ನ ಹೇಳಿಕೆಗೂ ಯಾವುದೇ ರೀತಿಯ ವ್ಯತ್ಯಾಸ ಇಲ್ಲ. ಮಾನ್ಯ ಸದಸ್ಯರಾದ ಮೊಯ್ಲಿಯವರು ಭಾಷಣ ಮಾಡುತ್ತಾ, ನೀವು ಹೋಗಿ ಸತ್ಯಾಗ್ರಹ ಮಾಡಿ ನಿಲ್ಲಿಸಬೇಕೆಂದು ಹೇಳಿದರು. ಇಲ್ಲಿರತಕ್ಕ ೨೨೪ ಜನರು ಹೋಗಿ ಸತ್ಯಾಗ್ರಹ ಮಾಡಿದರೂ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಸ್ಪಷ್ಟವಾಗಿ ಹೇಳಿಲ್ಲ. ಬಚಾವತ್ ಅವಾರ್ಡನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಮಾತ್ರ ನೀವು ಹೇಳಿದ್ದರಲ್ಲಿ ಸೇಫ್‌ಗಾರ್ಡ್ ಆಗುತ್ತದೆ. ಆದರೆ, ೨೦೦೦ ಇಸವಿಯಲ್ಲಿ ಹೆಚ್ಚುವರಿ ನೀರು ಏನು ಪ್ರಾಪ್ತಿಯಾಗಬಹುದೋ ಅದಕ್ಕೆ ನೀವು ಹೇಳುವುದು ಉತ್ತರವಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಉತ್ತರ ಆಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ರಾಮರಾಯರಿಗೆ ಕಟ್ಟುನಿಟ್ಟಾಗಿ ತಾವು ಹೇಳುವುದಕ್ಕೆ ತಯಾರಿಲ್ಲ. ನಮಗೆ ಏನು ಅಪನಂಬಿಕೆ ಬಂದಿದೆ. ಅದನ್ನು ತಾವು ಬಲಪಡಿಸುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಇಲ್ಲ, ಅದಕ್ಕೆ ಉತ್ತರ ಆಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪ್ರಿಸ್‌ಕ್ರಿಪ್ಟೀವ್ ರೈಟ್‌ಗೆ ಇದು ಉತ್ತರವಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಪ್ರಿಸ್‌ಕ್ರಿಪ್ಟೀವ್ ರೈಟ್‌ಗು ಕೂಡ ಕಾಯಿದೆ ಪ್ರಕಾರ ಅಧಿಕಾರ ಇಲ್ಲ. ಎರಡನೆಯದಾಗಿ ಅದು ಉದ್ಭವವಾಗುವಂತಾದ್ದು ಯಾವಾಗ ಅಂದರೆ, ನಮಗೆ ಕೊಟ್ಟಿರುವ ನೀರನ್ನು ಉಪಯೋಗಿಸಿಕೊಳ್ಳದೇ ಹೆಚ್ಚುವರಿ ನೀರನ್ನು ಹೇಗೆ ಉಪಯೋಗಿಸಿಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಬಂದಾಗ, ಇದಕ್ಕೆ ಒಂದೇ ಒಂದು ಉಪಾಯ ಅಂದರೆ ೨೦೦೦ ಇಸವಿಯ ಒಳಗೆ ನಮ್ಮ ಎಲ್ಲಾ ಪ್ರಾಜೆಕ್ಟ್‌ಗಳನ್ನು ಪೂರೈಸಿ ಪ್ರತಿಯೊಂದು ತೊಟ್ಟು ನೀರನ್ನು ಬಳಸಿಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ಅದನ್ನು ಮಾಡುತ್ತೇವೆ. ಅದೊಂದು ಉಪಾಯವೇ ಹೊರತು, ಬೇರೆ ಉಪಾಯ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ರಾಜ್ಯದ ಹಿತದೃಷ್ಟಿಯಿಂದ ೨೦೦೦ ಇಸವಿಯೊಳಗೆ ಎಲ್ಲ ವ್ಯವಸ್ಥೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅವರು ಇದ್ದುದನ್ನು ಕಟ್ಟಿಕೊಂಡು ಬಿಡುತ್ತಾರೆ. ಆಮೇಲೆ, ಕೇಂದ್ರದಲ್ಲಿ ಮತ್ತೊಮ್ಮೆ ನೀರಿನ ವಿಷಯ ಬಂದಾಗ, ಪ್ರಾಜೆಕ್ಟ್ ತಯಾರಿದೆಯೆಂದು ಅವರು ಹೇಳುತ್ತಾರೆ. ನಮ್ಮ ಆರ್ಥಿಕ ಪರಿಸ್ಥಿತಿಯೊಳಗೆ ಮಾಡುವುದಕ್ಕಾಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ ನಮ್ಮ ಪ್ರಾಜೆಕ್ಟ್‌ಗಳ ಬಗ್ಗೆ ನ್ಯಾಯವಾದಂಥ ಹಕ್ಕು ಸಿಕ್ಕಿಲ್ಲ. ರಾವ್‌ನಂಥವರು ಬಂದರೆ, ಕೊಡುವುದಕ್ಕೆ ಸಾಧ್ಯವಿದೆ. ರಾಜ್ಯದ ಹಿತದೃಷ್ಟಿಯಿಂದ ನಾವು ನೀವು ಕೂಡ ಇದನ್ನು ಮಾಡಿಸುವುದಕ್ಕೆ, ಮತ್ತು ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದಲ್ಲಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿಲ್ಲ. ಮೊನ್ನೆ ಪತ್ರಿಕೆಯಲ್ಲಿ ಎನ್.ಟಿ.ಆರ್ ಹೇಳಿರುವುದನ್ನು ನೋಡಿದ್ದೇನೆ. ನೀರಾವರಿ ಮಂತ್ರಿಗಳನ್ನು ಬದಲಾವಣೆ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ಶ್ರೀನಿವಾಸ್‌ರವರು ಭಾಷಣ ಪ್ರವೀಣರು ಎಂದು ಒಪ್ಪಿಕೊಂಡಿದ್ದೇನೆ. ೭೩೪ ಟಿಎಂಸಿ ಹೊರತಾಗಿ ಪ್ರಿಸ್ಕ್ರಿಪ್ಟೀವ್ ರೈಟ್ ಬರುತ್ತೆ ಎಂದು ಹೇಳಿದ್ದಾರೆ. ಹಾಗೆ ಆಗುವುದಿಲ್ಲ. ಕಾರಣ ಇಷ್ಟೆ. ೭೩೪ ಟಿಎಂಸಿ ನೀರು ಕರ್ನಾಟಕಕ್ಕೆ, ೮೦೦ ಟಿಎಂಸಿ ನೀರು ಆಂಧ್ರಕ್ಕೆ ಎಂದು ಬಚಾವತ್ ಐತೀರ್ಪಿನಲ್ಲಿ ಏನಿದೆಯೋ ಅದಕ್ಕೆ ಹೊರತಾಗಿ ಯಾವುದೇ ಸರ್‌ಪ್ಲಸ್ ವಾಟರನ್ನು ಉಪಯೋಗ ಮಾಡಲಿಕ್ಕೆ ಪ್ರಯತ್ನ ಮಾಡಿದರೂ ಅದರ ಮೇಲೆ ಹಕ್ಕು ಸಾಬೀತಾಗುವುದಿಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ೮೦೦ ಟಿಎಂಸಿ ನೀರನ್ನು ಬಚಾವತ್ ಅವಾರ್ಡ್ ಪ್ರಕಾರ ಬಳಸಿಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಇದೆ. ಓವರ್ ಅಂಡ್ ಅಬವ್ ದಟ್ ಅದರ ಹೊರತಾಗಿ ಅದಕ್ಕಿಂತ ಹೆಚ್ಚಾಗಿ ಅವರು ನೀರನ್ನು ಉಪಯೋಗ ಮಾಡುವುದಕ್ಕೆ ಅವರಿಗೆ ಹಕ್ಕು ಇಲ್ಲವೆಂದು ಮತ್ತೊಮ್ಮೆ ಸ್ಪಷ್ಟೀಕರಣ ಮಾಡುತ್ತೇನೆ. ೨೦೦೦ನೇ ಇಸವಿ ಆದಮೇಲೆ, ನಮಗೆ ಕೊಟ್ಟಿರತಕ್ಕ ೭೩೪ ಟಿಎಂಸಿ ನೀರನ್ನು ಉಪಯೋಗಿಸಿಕೊಂಡ ನಂತರ ಹೆಚ್ಚುವರಿ ನೀರಿನ ಬಗ್ಗೆ ಒಂದು ತೀರ್ಮಾನಕ್ಕೆ ಬರದ ಹೊರತು, ಕೇಂದ್ರ ಸರ್ಕಾರ ಅವರಿಗೆ ಯಾವುದೇ ರೀತಿಯಲ್ಲಿಯೂ ಕ್ಲಿಯರೆನ್ಸ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತೆಲಗು ಗಂಗಾ ಯೋಜನೆಯ ಟೋಟಲ್ ಕ್ಯಾಪಾಸಿಟಿ ಪ್ರಕಾರ ೮೦೦ ಟಿಎಂಸಿ ಗಿಂತ ಹೆಚ್ಚು ನೀರನ್ನು ಅವರು ಉಪಯೋಗ ಮಾಡತಕ್ಕಂಥ ಶಕ್ತಿ ಇದೆ, ಎನ್ನುವುದೇ ನಮಗೆ ಇರತಕ್ಕ ಅನುಮಾನ. ತೆಲುಗು ಗಂಗಾ ಯೋಜನೆಯನ್ನು ಕಟ್ಟಿ ಮುಗಿಸಿದರೆ, ಹೆಚ್ಚುವರಿ ನೀರನ್ನು ಉಪಯೋಗ ಮಾಡುತ್ತಾರೆನ್ನುವ ಶಂಕೆ ಇದೆ.

ನಿಮ್ಮೆದುರಿಗೆ ಈ ಸದನದಲ್ಲಿರತಕ್ಕವರು ಯಾವ ಒಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆಂದರೆ, ತೆಲುಗು ಗಂಗಾ ಯೋಜನೆಯ ಕ್ಯಾಪಾಸಿಟಿ ೮೦೦ ಟಿಎಂಸಿ ಎಫ್‌ಟಿ ಗಡಿ ಮುಗಿದ ಮೇಲೆ ಸರ್‌ಪ್ಲಸ್ ವಾಟರ್ ನಮಗೆ ಶತಮಾನದ ಅಂತ್ಯದ ವೇಳೆಗೆ ಸಿಗುತ್ತದೆ. ಆ ನೀರನ್ನು ಉಪಯೋಗ ಮಾಡಿಕೊಳ್ಳ ಲಿಕ್ಕೆ ಅವರು ಪ್ರಯತ್ನ ಮಾಡಿದರೆ, ಆಮೇಲೆ ರೆಸ್ಟ್ರಿಕ್ಟ್ ೭೩೪ಕ್ಕೆ ನಿಲ್ಲುತ್ತದೆ. ಆಗ ಸರ್‌ಪ್ಲಸ್ ವಾಟರ್ ಉಪಯೋಗ ಮಾಡತಕ್ಕದ್ದನ್ನು ನಾವು ಕಳೆದುಕೊಳ್ಳುತ್ತೇವೆ. ಆದ್ದರಿಂದ ಇಷ್ಟು ವಿಷಯದ ಮೇಲೆ ಚರ್ಚೆ ಮಾಡಲಿಕ್ಕೆ ಕಾರಣವಾಗಿದೆ. ಈಗ ತಾವೂ ಅದನ್ನೇ ಹೇಳಿದ್ದೀರಿ, ಸರ್‌ಪ್ಲಸ್ ವಾಟ ರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಬಿಡುವುದಿಲ್ಲ ಅಂದರೆ ಅವರನ್ನು ಉಪಯೋಗ ಮಾಡಿಕೊಳ್ಳಿ ಎಂದು ಹೇಳಲಿಲ್ಲವೆಂದರೆ ಸಂತೋಷಪಡುತ್ತೇವೆ. ೭೩೪ ಟಿಎಂಸಿ ಎಫ್‌ಟಿ ಏನಿದೆ, ಅದನ್ನು ಉಪ ಯೋಗ ಮಾಡಿಕೊಳ್ಳುವುದರ ಜೊತೆಗೆ ಸರ್‌ಪ್ಲಸ್ ವಾಟರ್‌ನಲ್ಲಿ ನಮಗೆ ಎಷ್ಟು ಸಿಗಬೇಕು ಅದನ್ನು ಉಪಯೋಗ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಹಣವನ್ನು ಜಾಸ್ತಿ ತೊಡಗಿಸಬೇಕು. ೭೩೪ ಟಿಎಂಸಿ ಎಫ್‌ಟಿ ವಾಟರ್ ಅನ್ನು ಉಪಯೋಗ ಮಾಡಿಕೊಳ್ಳುವುದರ ಜೊತೆಗೆ ಸರ್‌ಪ್ಲಸ್ ವಾಟರ್ ಅನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಗಮನವನ್ನು ಕೊಡಬೇಕು. ಮಾನ್ಯ ದೇವೇಗೌಡರು ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಸರ್‌ಪ್ಲಸ್ ವಾಟರ್‌ನ್ನು ಉಪಯೋಗಿಸಿಕೊಂಡು ತೆಲುಗು ಗಂಗಾ ಯೋಜನೆ ಜಾರಿ ಮಾಡುವುದಕ್ಕೆ ಬಿಡುವುದಿಲ್ಲವೆಂದು ನೇರವಾಗಿ ಹೇಳಿಕೆ ಕೊಟ್ಟಿದ್ದಾರೆ ನೀವು ಅಂತಹ ಹೇಳಿಕೆಯನ್ನು ಕೊಡಲಿಲ್ಲ, ಅದೇ ನಮ್ಮ ಅನುಮಾನ. ನೀರಾವರಿ ಮಂತ್ರಿಗಳು ಹೇಳಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ಇನ್ನೂ ಹೇಳಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ನೀಡಿರತಕ್ಕ ಹೇಳಿಕೆಯನ್ನು ನೋಡಿದರೆ ಒಂದು ರೀತಿಯ ಅರ್ಥ ಬರುತ್ತದೆ. ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳಾದ ಎನ್.ಟಿ. ರಾಮರಾವ್ ರವರು ಪತ್ರಿಕೆಗಳಿಗೆ ಹೇಳಿರುವ ಹೇಳಿಕೆಗಳಲ್ಲಿ ನಾವು ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಅದನ್ನು ಯಾರೂ ತಡೆಗಟ್ಟುವುದಕ್ಕೆ ಆಗುವುದಿಲ್ಲ: ನಮ್ಮ ಪ್ರಾಜೆಕ್ಟ್ ಕೆಲಸವನ್ನು ನಾವು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೆ ಅವರು ಹೇಳಬೇಕಾದರೆ ನನಗನಿಸುತ್ತದೆ ಅವರು ಈಗಾಗಲೇ ಕೆಲಸ ಮಾಡುತ್ತಿದ್ದಾರೆ ಎಂದು: ನಾವು ಕೆಲಸವನ್ನು ಮುಂದುವರಿಸುತ್ತೇವೆ ನಿಲ್ಲಿಸುವುದಿಲ್ಲವೆಂದು ಹೇಳು ತ್ತಿದ್ದಾರೆ. ಅವರು ಯಾವ ಆಧಾರದ ಮೇಲೆ ಇದನ್ನು ಹೇಳಿದ್ದಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಗೊತ್ತಾಯಿತು. ಅವರು ಹೇಳಲಿಕ್ಕೆ ಸಾಕಷ್ಟು ಆಧಾರ ಇದೆ. ಇಲ್ಲವೆಂದು ನಾನು ಹೇಳಿಕೊಳ್ಳುವುದಕ್ಕೆ ಬರುವುದಿಲ್ಲ. ಬಚಾವತ್ ಆಯೋಗದವರು ೨೦೦೦ ಇಸವಿಯ ಹೊತ್ತಿಗೆ ಕೃಷ್ಣಾನದಿ ನೀರಿನಲ್ಲಿ ಏನಾದರೂ ಹೆಚ್ಚುವರಿ ನೀರು ಹರಿದು ಸಮುದ್ರಕ್ಕೆ ಹೋಗುವುದು ಇದ್ದರೆ ಅದನ್ನು ಉಪಯೋಗಿಸಿಕೊಳ್ಳುವುದು ಬಹಳ ಒಳ್ಳೆಯದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದರಲ್ಲಿ ನಾವು ಏನು ಮಾಡುವುದಕ್ಕೆ ಬರುತ್ತದೆ? ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದ್ದೇವೆ. ನಮ್ಮ ಲೋಕಸಭಾ ಸದಸ್ಯರಾದ ಕಾಂಗ್ರೆಸ್ ಮಿತ್ರರಿಗೆ ಬ್ರೀಫ್ ಮಾಡಿದ್ದೇವೆ. ಅವರು ಯಾವ ತರಹ ನಿಲುವು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಕಾಯಿದೆ ಪ್ರಕಾರಹೇಳಬೆಕಾದರೆ ಇದರ ಬಗ್ಗೆ ಬಚಾವತ ಆಯೋಗದ ತೀರ್ಪು ಇದೆ. ಆ ತೀರ್ಪಿನಲ್ಲಿ ಸರ್‌ಪ್ಲಸ್ ವಾಟರ್ ಹರಿದು ಸಮುದ್ರಕ್ಕೆ ಹೋಗುವುದು ಇದ್ದರೆ ಅದನ್ನು ಉಪಯೋಗಿಕೊಳ್ಳಬಹುದೆಂದು ಹೇಳಿರುವುದರಿಂದ ಅದನ್ನು ಅವರು ಮಾಡಿಕೊಳ್ಳುತ್ತಾರೆ. ಇದರ ಮೇಲೆ ಯಾವ ಕೋರ್ಟ್ ಸಹ ಸ್ಟೇ ಆರ್ಡರ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಎಲ್ಲ ಸಾಧ್ಯ ಸಾಧ್ಯತೆಯಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಶತಮಾನದ ಅಂತ್ಯದ ವೇಳೆಗೆ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ನಮ್ಮ ಪಾಲಿನ ನೀರನ್ನು ಆದಷ್ಟು ಬೇಗ ಉಪಯೋಗಿಸಿಕೊಳ್ಳತಕ್ಕ ವ್ಯವಸ್ಥೆಯನ್ನು ನಾವು ಮಾಡಬೇಕು.

೨೦೦೦ ಇಸವಿಯ ನಂತರ ಯಾವ ರೀತಿಯ ಒಪ್ಪಂದ ಮಾಡಿಕೊಳ್ಳಬೇಕು ಎನ್ನುವುದನ್ನು ನಾವು ಈಗಲೇ ವಿಚಾರ ಮಾಡೋಣ. ಅವರು ಏನಾದರೂ ಒಪ್ಪಿಕೊಂಡರೆ ಮುಂದಿನ ತಿಂಗಳಲ್ಲಿ ಏನು ಸರ್‌ಪ್ಲಸ್ ನೀರು ಇರುತ್ತದೆ, ಅದರ ಬಗ್ಗೆ ಈಗಾಗಲೇ ಪರಸ್ಪರ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಅವರು ಹಣವನ್ನು ಖರ್ಚು ಮಾಡುತ್ತಿದ್ದಾರೆ ಈ ಸಲ ೮೯–೯೦ ಕೋಟಿ ರೂಪಾಯಿ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅವರು ಖರ್ಚು ಮಾಡುವುದನ್ನು ಹೇಳಿಕೊಳ್ಳುವುದಕ್ಕೆ ಬರುತ್ತದೆ, ಬಚಾವತ್ ಆಯೋಗದ ಏತೀರ್ಪು ಏನಿದೆ ಅದನ್ನು ಒಳಗೊಂಡು ಕೆಲಸ ಮಾಡಿದರೆ ಅದನ್ನು ನಾವು ನಿಲ್ಲಿಸುವುದಕ್ಕೆ ಬರುವುದಿಲ್ಲವೆಂದು ಮಾತ್ರ ಹೇಳುತ್ತೇನೆ. ಈಗಿರತಕ್ಕ ನೀರು ಮುಂದೆ ನಮಗೆ ಸಿಗತಕ್ಕ ಸರ್‌ಪ್ಲಸ್ ವಾಟರ್‌ನ್ನು ಯಾರು ಸಹ ವಂಚನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅದು ನಮ್ಮ ಸರ್ಕಾರದ ನೀತಿ.

ಇನ್ನು ಏತ ನೀರಾವರಿ ಯೋಜನೆಗೆ ಎರಡು ಕಾರ್ಪೊರೇಷನ್‌ಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದೇವೆ. ಈಗಾಗಲೇ ೫೦೦ ಏತ ನೀರಾವರಿ ಯೋಜನೆಗಳಿವೆ, ಅವುಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗಲಿಕ್ಕೆ ಇನ್ನು ಹೆಚ್ಚಿನ ಪ್ರಮಾಣದ ಯೋಜನೆಗಳನ್ನು ತೆಗೆದುಕೊಳ್ಳಲಿಕ್ಕೆ ಏತ ನೀರವಾರಿ ಕಾರ್ಪೊರೇಷನ್‌ಗಳನ್ನು ಮಾಡುತ್ತಿದ್ದೇವೆ. ಅವುಗಳಿಗೆ ಇನ್‌ಸ್ಟಿಟ್ಯೂಷನಲ್ ಫೈನಾನ್ಸ್ ಮಾಡಿ ನಮಗೆ ಸೇರತಕ್ಕ ನೀರನ್ನು ಆದಷ್ಟು ಬೇಗ ಬಳಸಿಕೊಳ್ಳುತ್ತೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಚಾರವನ್ನು ಹೇಳಬೇಕಾದರೆ, ಈ ಇನ್‌ಸ್ಟಿಟ್ಯೂಷನಲ್ ಫೈನಾನ್ಸ್‌ನಿಂದ ಕಡಿಮೆ ಖರ್ಚಿನಲ್ಲಿ ಕೆಲಸ ಮಾಡುವ ದೃಷ್ಟಿಯಿಂದ ಇದನ್ನು ಮಾಡಲಾಗಿದೆ. ಮಳೆಗಾಲದಲ್ಲಿ ನದಿಗಳಲ್ಲಿ ಹೆಚ್ಚು ನೀರು ಸಿಗುತ್ತದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ಸಂಸ್ಥೆಗಳಿಗೆ ಬಂದಂತಹದರಲ್ಲಿ ಕಡಿಮೆಯಾಗಿದೆ ನಿಜ, ಅದನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಎರಡು ಕಮಿಟಿಗಳ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಟೀಕೆ ಮಾಡಿದ್ದಾರೆ, ಡಾ. ಸರೋಜಿನಿ ಮಹಿಷಿ ಕಮಿಟಿ ಮತ್ತು ಗೂಡವಾಲ ಕಮಿಟಿಗಳ ಬಗ್ಗೆ ಟೀಕೆ ಮಾಡಿದ್ದಾರೆ. ಗೂಡವಾಲ ಕಮಿಟಿ ಇರುವುದು ಅಲ್ಪಸಂಖ್ಯಾತರಿಗೆ ಕಾನೂನು ಬದ್ಧವಾಗಿ ಮತ್ತು ಸಂವಿಧಾನಬದ್ಧವಾಗಿ ಏನು ರಕ್ಷಣೆ ಆಗಬೇಕೋ ಅದು ಸರಿಯಾಗಿ ಪಾಲನೆಯಾಗುತ್ತಿದೆಯೋ ಎಂದು ನೋಡಲಿಕ್ಕೆ ಇದೆ. ಏನಾದರೂ ಅನ್ಯಾಯವಾಗಿದ್ದರೆ ಸರ್ಕಾರಕ್ಕೆ ತಿಳಿಸಲಿಕ್ಕೆ ಮೈನಾರಿಟಿ ಕಮಿಟಿ ಇದೆ. ಡಾ ಸರೋಜಿನಿ ಮಹಿಷಿಯವರ ಕಮಿಟಿ ಇರತಕ್ಕದ್ದು, ಕೇಂದ್ರ ಸರ್ಕಾರದ ಪಬ್ಲಿಕ್ ಸೆಕ್ಟರ್ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಸರಿಯಾದ ಪ್ರಮಾಣದಲ್ಲಿ ನೇಮಕಾತಿ ಸಿಗುತ್ತಿದೆಯೋ ಎಂಬುದನ್ನು ನೋಡಿಕೊಳ್ಳಲಿಕ್ಕೆ ಆ ಕಮಿಟಿಯನ್ನು ಮಾಡಲಾಗಿದೆಯೆಂದು ತಿಳಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆ ಕಮಿಟಿಗಳನ್ನು ಕಂಟಿನ್ಯುಯಸ್ ಆಗಿ ಹಾಗೆಯೇ ಇಡುತ್ತೀರಾ? ಈ ಕಮಿಟಿಗಳನ್ನು ನೇಮಕ ಮಾಡಿ ಎಷ್ಟು ವರ್ಷಗಳಾಯಿತು?

ಶ್ರೀ ರಾಮಕೃಷ್ಣ ಹೆಗಡೆ.—ಆ ಕಮಿಟಿಗಳನ್ನು ನೇಮಕ ಮಾಡಿ ಒಂದೂವರೆ ವರ್ಷಗಳಾಗಿರಬಹುದು ಒಂದು ಕಮಿಟಿಯ ತಾತ್ಕಾಲಿಕ ವರದಿ ಬಂದಿದೆ. ಮತ್ತೊಂದು ಕಮಿಟಿಯ ವರದಿ ಸಧ್ಯದಲ್ಲಿಯೇ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಡಾ. ಸರೋಜಿನಿ ಮಹಿಷಿಯವರ ಕಮಿಟಿ ನೇಮಕ ಮಾಡಿ ಒಂದೂವರೆ ವರ್ಷ ಆಗಿದೆ ಎಂದು ಇಟ್ಟುಕೊಂಡರೆ ಆ ಸಮಿತಿಗೆ ಎಷ್ಟು ಹಣ ಖರ್ಚಾಗಿದೆ ಎಂಬುದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಹಾಕೋಣ ಅದು ಬೇರೆ, ಈಗ ತಾವು ವಿವರಗಳನ್ನು ಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.—ಹೇಳುತ್ತೇನೆ. ಗೂಡವಾಲ್ ಕಮಿಟಿಗೆ ಒಂದು ವರ್ಷಕ್ಕೆ ರೂ. ೫ ಲಕ್ಷ ಖರ್ಚಾಗಿದೆ. ಡಾ. ಸರೋಜಿನಿ ಮಹಿಷಿಯವರ ಕಮಿಟಿಗೆ ಒಂದು ವರ್ಷಕ್ಕೆ ೪ ಲಕ್ಷದ ೨೬ ಸಾವಿರದ ೬೦೦ ರೂಪಾಯಿ ಖರ್ಚಾಗಿದೆ. ದಿನಾಂಕ ೧-೨-೧೯೮೪ರಿಂದ ೩೧-೧-೮೬ರವರೆಗೆ ಅಂದರೆ ತುಸು ಹೆಚ್ಚು ಕಡಿಮೆ ಎರಡು ವರ್ಷಕ್ಕೆ ಖರ್ಚಾದದ್ದು ೪ ಲಕ್ಷದ ೨೬ ಸಾವಿರದ ೬೦೦ ರೂಪಾಯಿ ಇನ್ನು ಕೆಲವು ನೋಟೀಫಿಕೇಶನ್ ಇಶ್ಯೂ ಮಾಡಿದ್ದೇವೆಂದು ವಿರೋಧ ಪಕ್ಷದ ನಾಯಕರು ಹೇಳೀದ್ದಾರೆ. ಸೇಲ್ಸ್ ಟ್ಯಾಕ್ಸನು ಕಡಿಮೆ ಮಾಡಿ ತೆಗೆದುಹಾಕಿದ್ದೇವೆಂದು ಟೀಕೆ ಮಾಡಿದ್ದಾರೆ. ಇದರಲ್ಲಿ ಯಾವುದೇ ತರಹ ಫೇವರಿಟಿಸಂ ಆಗಿಲ್ಲ ಅಥವಾ ಅವ್ಯವಹಾರ ಆಗಿಲ್ಲ. ಈ ವಿಚಾರದಲ್ಲಿ ಇರತಕ್ಕ ನೋಟೀಫಿಕೇಷನ್ ಓದಿದರೆ ಆಗ ತಮಗೆ ಗೊತ್ತಾಗುತ್ತದೆ.

ಜೀವ ರಕ್ಷಕ ಔಷಧಿಗಳು ಲೈವ್‌ಸ್ಟಾಕ್, ಕೆರೋಸಿನ್ ಸ್ಟವ್ ಮುಂತಕ್ಕೆ ಬಯೋಗ್ಯಾಸ್ ಪ್ಲಾಂಟ್ ಸ್ಮೋಕ್‌ಲೆಸ್ ಚಾರ್‌ಕೋಲ್ ಮತ್ತು ಇನ್ನಿತರೆ ವಸ್ತುಗಳ ವಿಚಾರದಲ್ಲಿ ಸೇಲ್ಸ್‌ಟ್ಯಾಕ್ಸ್‌ನ್ನು ಕಡಿಮೆ ಮಾಡಿದ್ದೇವೆ. ಮತ್ತೆ ಕೆಲವಕ್ಕೆ ಪೂರ್ಣವಾಗಿ ಬಿಟ್ಟಿದ್ದೇವೆ. ಆಮೇಲೆ ಶ್ರೀಮಾನ್ ವೆಂಕಟರಾಮಯ್ಯನವರು ಇಂಪೋರ್‌ಟೆಡ್ ಲಿಕ್ಕರ್ ಮೇಲೆ ೮೪ ಪರ್ಸೆಂಟ್ ಇದ್ದದ್ದನ್ನು ೫೦ ಪರ್ಸೆಂಟ್‌ಗೆ ಇಳಿಸಿದ್ದೀರಿ ಎಂಬುದಾಗಿ ಹೇಳಿದ್ದಾರೆ. ಅದಕ್ಕೆ ಮತ್ತು ಇನ್ನೂ ಅನೇಕ ವಸ್ತುಗಳ ಮೇಲೆ ನಾವು ಸೇಲ್ಸ್ ಟ್ಯಾಕ್ಸ್‌ನ್ನು ಇರತಕ್ಕಂತಹದ್ದನ್ನು ಕಡಿಮೆ ಮಾಡುವುದಕ್ಕೆ ಕಾರಣವೇನೆಂದರೆ, ಸೇಲ್ಸ್ ಟ್ಯಾಕ್ಸ್‌ನ್ನು ಅವಾಯ್ಡ್ ಮಾಡುವುದನ್ನು ತಪ್ಪಿಸುವುದಕ್ಕಾಗಿ ಈ ರೀತಿ ಮಾಡಿದ್ದೇವೆ. ಇದರಿಂದೇನೂ ಆದಾಯ ಕಡಿಮೆಯಾಗಿಲ್ಲವೆಂದು ಹೇಳುತ್ತಿದ್ದೇನೆ. ಇಂಪೋರ್‌ಟೆಡ್ ಲಿಕ್ಕರ್‌ನ್ನು ಬಹಳಷ್ಟು ಜನ ಉಪಯೋಗಿಸುತ್ತಾರೆ. ಅನೇಕ ಜನ ತಂದು ಅದನ್ನು ಲೆಕ್ಕಕ್ಕೆ ಕೊಡದೆ ಹಾಗೇ ಮಾರಾಟ ಮಾಡಿರತಕ್ಕಂತಹದ್ದು ನಮ್ಮ ಗಮನಕ್ಕೆ ಬಂದಿದೆ. ಮತ್ತು ಈಗಿರತಕ್ಕಂತಹ ೮೫ ಪರ್ಸೆಂಟ್ ಬಹಳ ಹೆಚ್ಚು ಎಂಬುದು ನನಗನ್ನಿಸುತ್ತದೆ.

ಶ್ರೀ ಎಂ. ರಾಮಪ್ಪ.—ಐ. ಎಂ. ಎಫ್. ಎಲ್. ಕೂಡ ಹಾಗೆ ಮಾಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ನೋಡಿಯೇ ಈ ತರದಲ್ಲಿ ಸೇಲ್ಸ್ ಟ್ಯಾಕ್ಸ್ ಅನ್ನು ಪುನಃ ಪುನರ್ ವಿಮರ್ಶೆ ಮಾಡಿದ್ದೇವೆ. ಮತ್ತೆ ದ್ವಿಚಕ್ರ ವಾಹನಗಳ ಮೇಲೆ ಹಾಕುವಂತಹ ತೆರಿಗೆಯಲ್ಲಿ ಬದಲಾವಣೆಯನ್ನು ಮಾಡಿದ್ದೇವೆ. ಇದನ್ನು ನಾವು ಕೂಲಂಕಷವಾಗಿ ಯೋಚನೆ ಮಾಡಿಯೇ ಮಾಡಿದ್ದೇವೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಸಾಮಾನ್ಯ ಜನರಿಗೆ ತೆರಿಗೆ ಭಾರವನ್ನು ಕಡಿಮೆ ಮಾಡಬೇಕು, ಇನ್ನೂ ಕಡಿಮೆ ಮಾಡುವಂತೆ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ಮಾಡಿದ್ದೇವೆ. ಸಾರ್ವಜನಿಕರು ಇದನ್ನು ಸ್ವಾಗತ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ನಾವು ಏನು ಮಾಡಿದ್ದೇವೆಂದರೆ, ಮೊಪೆಡ್ ಇನ್ನಿತರ ದ್ವಿಚಕ್ರ ವಾಹನಗಳ ಮೇಲೆ ಒಂದು ಹೊಸ ವಿಧಾನದಿಂದ ಕರವನ್ನು ಹಾಕತಕ್ಕಂತಹ ನೀತಿಯನ್ನು ಮಾಡಿದ್ದೇವೆ. ಅಂದರೆ ಅವರು ವೆಹಿಕಲ್ಲನ್ನು ಖರೀದಿ ಮಾಡಿದಾಗ ಒಂದೇ ಸಲ ಕರವನ್ನು ಕೊಟ್ಟರೆ ಸಾಕು ಪುನಃ ಪುನಃ ಪ್ರತಿಯೊಂದು ಕ್ವಾರ್ಟರ್‌ಗೆ, ಪ್ರತಿ ವರ್ಷ ಕೊಡತಕ್ಕಂತಹ ತೊಂದರೆ ಅವರಿಗೆ ಇರಕೂಡದು ಎಂಬುದಾಗಿ ವಿಚಾರ ಮಾಡಿ, ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಸರ್ವೇ ಮಾಡಿಸಿದ್ದೇವೆ. ಶೇಕಡಾ ೮೦ ರಷ್ಟು ಜನರು ನಮಗೆ ಒಂದೇ ಸಾರಿ ಕರವನ್ನು ಹಾಕಿ ಎಂಬುದಾಗಿ ಹೇಳಿದ್ದಾರೆ. ಪ್ರತಿ ಕ್ವಾರ್ಟರ್‌ಗೆ ಕರವನ್ನು ಕೊಡದೇ ತಪ್ಪಿಸಿಕೊಳ್ಳುವವರೂ ಇದ್ದಾರೆ. ಮತ್ತು ಯಾರು ಸರಿಯಾಗಿ ಕರವನ್ನು ಕೊಡುತ್ತಿದ್ದಾರೆ, ಅವರು ಪ್ರತಿ ಮೂರು ತಿಂಗಳಿಗೊಮ್ಮೆ ಆರ್. ಟಿ. ಓ. ಆಫೀಸಿಗೆಹೋಗಬೇಕು, ಇದರಿಂದ ಸಿಬ್ಬಂದಿ ವೆಚ್ಚ ಕೂಡ ಹೆಚ್ಚು. ಇಡೀ ಭಾರತದಲ್ಲಿ ಈ ಪದ್ಧತಿ ಬೇರೆ ಎಲ್ಲೂ ಇಲ್ಲ. ಮೊದಲನೆಯ ಸಲ ಈ ಒಂದು ಹೊಸ ಪದ್ಧತಿಯನ್ನು

ಜಾರಿಗೆ ತರುತ್ತಿದ್ದೇವೆ. ನಾವು ಹಾಕಿರುವಂತಹ ರೇಟು ಏನಿದೆ, ಅದರ ಬಗ್ಗೆ ಬಂದಂತಹ ಪ್ರತಿಕ್ರಿಯೆಯನ್ನು ನಾವು ನೋಡಿದ್ದೇನೆ, ಪತ್ರಿಕೆಯಲ್ಲಿ ಬಂದಿದ್ದನ್ನೂ ನಾನು ನೋಡಿದ್ದೇನೆ. ನನಗೆ ನೇರವಾಗಿ ಬಂದಂತಹ ಪತ್ರಗಳನ್ನೂ ಕೂಡ ನಾನು ನೋಡಿದ್ದೇನೆ. ಆ ಒಂದು ದೃಷ್ಟಿಯಿಂದ ಇದರಲ್ಲಿ ಸ್ವಲ್ಪ ಮಾರ್ಪಾಡು ಮಾಡಬೇಕೆಂದು ನಾನು ಬಯಸುತ್ತೇನೆ. ೫೦ ಸಿ. ಸಿ. ಮತ್ತು ಅದಕ್ಕಿಂತ ಕಡಿಮೆ ಇರುವಂತಹ ದ್ವಿಚಕ್ರ ವಾಹನಗಳ ಮೇಲೆ ನಾವು ಈಗ ಸೂಚನೆ ಮಾಡಿರುವಂತಹ ೭೫೦ ರೂಪಾಯಿಗಳಿಂದ ೫೦೦ ರೂಪಾಯಿಗಳಿಗೆ ಕರವನ್ನು ಇಳಿಸಿದ್ದೇನೆಂದು ನಾನು ತಮ್ಮ ಮುಂದೆ ಸೂಚನೆ ಮಾಡುತ್ತೇನೆ. ಮತ್ತೆ ೫೦ ಸಿಸಿಗೆ ಮೇಲ್ಪಟ್ಟ ೩೦೦ ಸಿಸಿವರೆಗೆ ಇರತಕ್ಕಂತಹ ದ್ವಿಚಕ್ರ ವಾಹನಗಳ ಮೇಲೆ ಈಗ ಸೂಚನೆ ಮಾಡಿರುವಂತಹ ೯೫೦ ರೂಪಾಯಿಗಳಿಂದ ೭೫೦ ರೂಪಾಯಿಗಳಿಗೆ ಇಳಿಸಿದ್ದೇನೆಂದು ಸೂಚನೆ ಮಾಡುತ್ತಿದ್ದೇನೆ. ನಂತರ ೩೦೦ ಸಿಸಿಗೆ ಮೇಲ್ಪಟ್ಟು ಇರತಕ್ಕಂತಹ ದ್ವಿಚಕ್ರ ವಾಹನಗಳ ಮೇಲೆ ಈಗ ಸೂಚನೆ ಮಾಡಿರುವಂತಹ ೧೨೦೦ ರೂಪಾಯಿಗಳಿಂದ ೧೦೦೦ ರೂಪಾಯಿಗಳಿಗೆ ಇಳಿಸಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಈಗಾಗಲೇ ತಿಳಿದುಕೊಂಡಿರುವಂತೆ ಸೇಲ್ಸ್ ಟ್ಯಾಕ್ಸ್ ಮೊದಲು ಈ ದ್ವಿಚಕ್ರ ವಾಹನಗಳ ಮೇಲೆ ಶೇಕಡ ೧೫ ರಷ್ಟು ಇದ್ದುದನ್ನು ನಾವು ೧೩ ಪರ್ಸೆಂಟ್‌ಗೆ ಇಳಿಸಿದ್ದೇವೆ. ಇದರಿಂದ ಈ ಒಂದು ವಾಹನದಲ್ಲಿ ಓಡಾಡತಕ್ಕಂತಹವರಿಗೆ ಅನುಕೂಲವಾಗುತ್ತದೆ. ಮತ್ತೆ ಯಾರು ಈ ರೀತಿಯ ದ್ವಿಚಕ್ರ ವಾಹನಗಳನ್ನು ಬಳಸತಕ್ಕ ಜನರು ಇದ್ದಾರೆ, ಅವರು ಇದನ್ನು ಸ್ವಾಗತ ಮಾಡುತ್ತಾರೆಂದು ನಾನು ನಂಬಿದ್ದೇನೆ. ಮತ್ತೊಂದು ವಿಚಾರವನ್ನು ಈ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹೇಳಿದರು. ನೀವು ಒಂದೇ ಸಾರಿ ದುಡ್ಡನ್ನು ತೆಗೆದುಕೊಂಡರೆ, ಮೊದಲನೆ ವರ್ಷ ದುಡ್ಡು ಬರುತ್ತದೆ. ಅದು ಆದ ಮೇಲೆ ಸರಾಗವಾಗಿ ಬರತಕ್ಕಂತಹ ದುಡ್ಡು ನಿಂತು ಹೋಗುತ್ತದೆ ಎನ್ನುವ ಮಾತನ್ನು ಹೇಳಿದರು. ಅದು ಅಷ್ಟೊಂದು ಸರಿಯಲ್ಲ ಎಂಬುದು ನನ್ನ ಭಾವನೆ, ಇವತ್ತು ದ್ವಿಚಕ್ರ ವಾಹನದ ಬಳಕೆ ನಾವು ಅಂದಾಜು ಮಾಡಿದ ಮೇರೆಗೆ ಪ್ರತಿ ವರ್ಷ ಒಂದು ಲಕ್ಷ ವಾಹನಗಳಂತೆ ಹೆಚ್ಚು ಆಗುತ್ತಿವೆ. ಆದರಿಂದ ಪ್ರತಿ ವರ್ಷ ಅಷ್ಟೇ ಕರವನ್ನು ಅದರ ಮೇಲೆ ಕೊಡುತ್ತಾ ಹೋಗುತ್ತಾರೆ. ಇದರಿಂದ ಪ್ರತಿ ವರ್ಷ ಸರ್ಕಾರಕ್ಕೆ ಅಷ್ಟೇ ಕರ ಬರುತ್ತಾ ಹೋಗುತ್ತದೆ. ಇದರಿಂದ ಸರ್ಕಾರಕ್ಕೆ ಬರತಕ್ಕಂತಹ ಆದಾಯಕ್ಕೆ ಯಾವ ತೊಂದರೆಯಾಗುವುದಿಲ್ಲ. ಆಮೇಲೆ ಮತ್ತೊಂದು ವಿಚಾರ "ಆರ್ಡಿನರಿ ಕ್ಲೇ'' ಅಂದರೆ ಹಳ್ಳಿಗಳಲ್ಲಿ ಹೆಂಚು ಮಾಡುವಂತಹ ಹಾಗೂ ಪಾಟ್ ಮಾಡುವುದಕ್ಕೆ ಉಪಯೋಗಿಸುವಂತಹ ಪದಾರ್ಥಗಳ ಮೇಲೆ ಹಾಕಿರುವಂತಹ ತೆರಿಗೆ ಸ್ವಲ್ಪ ಹೆಚ್ಚಿಗೆ ಆಯಿತು ಎಂದು ಮಾನ್ಯ ಸದಸ್ಯರು ಇಲ್ಲಿ ಹೇಳಿದರು. ಅದರ ಮೇಲೆ ಇರತಕ್ಕಂತಹ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದು ಹಾಕುವುದಕ್ಕೆ ನಾನು ಬಯಸುತ್ತೇನೆ ಮತ್ತೆ ಲಾಟರಿ ಟಿಕೆಟ್‌ನ ವಿಚಾರವಾಗಿ ಶ್ರೀಮಾನ್ ಇದಿನಬ್ಬರವರು ಪ್ರಸ್ತಾಪ ಮಾಡುತ್ತಾ, ಲಾಟರಿ ಟಿಕೇಟ್ ಮೇಲೆ ಟ್ಯಾಕ್ಸನ್ನು ಹಾಕಿದ್ದರಿಂದ ಆದರಿಂದ ಬರತಕ್ಕಂತಹ ಆದಾಯ ಕಡಿಮೆಯಾಗುತ್ತದೆ ಎನ್ನತಕ್ಕಂತಹ ವಿಚಾರವನ್ನು ಅವರು ಹೇಳಿದರು. ಅದು ನಿಜ ಅಲ್ಲ. ಈಗ ಕೆಲವು ರಾಜ್ಯಗಳಲ್ಲಿ ಲಾಟರಿ ಟಿಕೆಟ್ ಮೇಲೆ ಶೇಕಡ ೧೦ ರಷ್ಟು ಮಾರಾಟ ತೆರಿಗೆ ಇದೆ, ಮಾರಾಟ ತೆರಿಗೆ ಇರುವುದರಿಂದ ನಮ್ಮ ರಾಜ್ಯದ ಲಾಟರಿ ಟಿಕೆಟ್ ಮೇಲೆ ಆದರಿಂದ ಪರಿಣಾಮ ಆಗುತ್ತದೆ. ಆದ್ದರಿಂದ ನಾವು ಒಂದು ನಿರ್ಧಿಷ್ಟ ಕಾಲದ ನಂತರ ಎಲ್ಲಾ ಲಾಟರಿ ಟಿಕೆಟ್ ಮೇಲೆ ಶೇಕಡ ೧೦ ರಷ್ಟು ಮಾರಾಟ ತೆರಿಗೆಯನ್ನು ಹಾಕತಕ್ಕಂತಹ ಒಂದು ನಿರ್ಣಯವನ್ನು ಮಾಡಿದ್ದೇವೆ ಆದರಿಂದ ಸರ್ಕಾರಕ್ಕೆ ಯಾವುದೇ ತರಹದ ಹಾನಿಯಾಗುವುದಿಲ್ಲ. ಕೊನೆಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ಈಗಾಗಲೇ ಸುಮಾರು ಸಮಯ ಕಳೆದಿದೆ. ಮಾನ್ಯ ವಿರೋಧಪಕ್ಷದ ನಾಯಕರು ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಸ್ಮಾರಕ ನಿಧಿಗೆ ನಾವು ೨೫ ಲಕ್ಷರೂಪಾಯಿಗಳನ್ನು ಕೊಟ್ಟಿದ್ದಾಗಿ ಬಹಳಷ್ಟು ಸಲ ಟೀಕೆ ಮಾಡಿದ್ದಾರೆ. ಮೂಲತ. ಅವರು ಸಮಾಜವಾದಿ ಪಕ್ಷದವರು ಎಂಬುದು ನಮಗೆಲ್ಲರಿಗೂ ಗೊತ್ತುಂಟು ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರು ಸಮಾಜವಾದಿ ಪಕ್ಷದ ಸ್ಥಾಪಕರಲ್ಲಿ ಒಬ್ಬರು.

ಶ್ರೀ ಎಸ್. ಬಂಗಾರಪ್ಪ.—ಬರಗಾಲ ಇರುವುದರಿಂದ ಆ ರೀತಿ ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಒಂದೇ ವರ್ಷ ಕೊಡುವುದಿಲ್ಲ. ಈ ವರ್ಷ ೫ ಲಕ್ಷ ೧೯೮೬-೮೭ ಸಾಲಿನಲ್ಲಿ ೧೦ ಲಕ್ಷ ರೂಪಾಯಿಗಳು. ಅದರ ಮುಂದಿನ ಸಾಲಿನಲ್ಲಿ ೧೦ ಲಕ್ಷ ಈ ರೀತಿ ಒಟ್ಟು ೨೫ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಶ್ರೀಮಾನ್ ಜಯಪ್ರಕಾಶ್

ನಾರಾಯಣ್ ರವರು ಪ್ರಧಾನ ಮಂತ್ರಿಯಾಗಿರಲಿಲ್ಲ, ಅವರು ಯಾವುದೇ ಅಧಿಕಾರದಲ್ಲಿ ಇರಲಿಲ್ಲ. ಲೋಕಸಭಾ ಸದಸ್ಯರೂ ಕೂಡ ಆಗಿರಲಿಲ್ಲ ಮತ್ತೆ ಶಾಸಕರೂ ಕೂಡ ಆಗಿರಲಿಲ್ಲ. ಆದರೂ ಅವರು ನಮ್ಮ ದೇಶದ ಬಗ್ಗೆ ಏನು ತ್ಯಾಗ ಮಾಡಿದ್ದಾರೆ ಆ ತ್ಯಾಗವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಆ ಸ್ಮಾರಕಕ್ಕೆ ನಾವು ಎಷ್ಟು ಹಣವನ್ನು ಖರ್ಚು ಮಾಡಿದರೂ ಕಡಿಮೆ ಎಂದು ನನ್ನ ಭಾವನೆ. ಒಂದು ಮಾತನ್ನು ನಾನು ಹೇಳಿದರೆ ಯಾರೂ ಬೇಸರ ಮಾಡಿಕೊಳ್ಳಬಾರದು. ಏನೆಂದರೆ ಶ್ರೀಮತಿ ಇಂದಿರಾಗಾಂಧಿಯವರ ಸಂಸ್ಕಾರಕ್ಕೆ......

(ಗೊಂದಲ)

ಆದ್ದರಿಂದ ನಾನು ಈ ವರ್ಷದ ಬಡ್ಜೆಟ್ಟನಲ್ಲಿ ಅನೇಕ ಹೊಸ ಯೋಜನೆಗಳನ್ನು ನಾವು ಜಾರಿಗೆ ತಂದಿದ್ದೇವೆ. ಅನೇಕ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಗ್ರಾಮೀಣ ಕ್ಷೇತ್ರದಲ್ಲಿ ಒಂದು ಹಸಿರು ಕ್ರಾಂತಿಯನ್ನು ತರಬೇಕೆಂದಿದ್ದೇವೆ. ಅದಕ್ಕೆ ಮಾನ್ಯ ಸದಸ್ಯರೆಲ್ಲರ ಸಹಕಾರವನ್ನು ಕೋರುತ್ತೇನೆ. ಎಲ್ಲ ಸದಸ್ಯರ ಸಹಕಾರವನ್ನು ನಾನು ಕೋರುತ್ತೇನೆ, ಈ ಒಂದು ಆಯವ್ಯಯವನ್ನು ತಾವುಗಳೆಲ್ಲರೂ ತುಂಬಿದ ಮನಸ್ಸಿನಿಂದ ಸಮರ್ಥನೆ ಮಾಡುತ್ತೀರೆಂದು ನಾನು ಆಸೆ ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲೆ ನಡೆದಂಥ ಸಾಮಾನ್ಯ ಚರ್ಚೆಗೆ ಸರ್ಕಾರದಿಂದ ಇಷ್ಟೊಂದು ನೀರಸವಾದ ಉತ್ತರ ಬರುತ್ತದೆಂದು ಭಾವಿಸಿರಲಿಲ್ಲ. ಎಷ್ಟೊಂದು ವಿವರಗಳನ್ನು ಕೊಡಬೇಕಾಗಿತ್ತೋ ಆ ವಿವರಗಳನ್ನು ಕೊಡುವುದಕ್ಕೆ ಸರ್ಕಾರ ಸಮರ್ಥವಾಗಿಲ್ಲವೆಂಬುದು ಇದರಿಂದ ವೇದ್ಯವಾಗುತ್ತದೆ. ಅದು ಏನೇ ಇರಲಿ. ಉತ್ತರ ಕಡಿಮೆ ಕೊಟ್ಟು ಪ್ರಶ್ನೆ ಬೇರೆ ಇದೆ. ಈಗ ನಾನು ಎರಡು ವಿಚಾರಗಳನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ, ಕಾವೇರಿ ಯೋಜನೆ ವಿಚಾರದಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರೂ ಇಲ್ಲಿ ೭೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಮುಂದಿನ ವರ್ಷ ೧೦೦ ಕೋಟಿಗೆ ಏರಿಸುತ್ತೇವೆಂದು ಹೇಳಿದ್ದಾರೆ. ಆ ಬಗ್ಗೆ ನಾನು ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೆ. ತಮ್ಮ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ. ತಾವು ಹಣಕಾಸಿನ ಸಚಿವರಾಗಿ ಇದೇ ವರ್ಷದಲ್ಲಿ ಅಂದರೆ ೮೬–೮೭ರಲ್ಲಿ ೧೦೦ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈಗ ೩೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದಕ್ಕೆ ಏನು ಕಾರಣ ? ಮುಂದಿನ ವರ್ಷಕ್ಕೆ ಮುಂದಕ್ಕೆ ಹಾಕಲು ಏನು ಕಾರಣ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನಾನು ಉತ್ತರ ಹೇಳಿದ್ದೇನೆ.

ಶ್ರೀ ಬಂಗಾರಪ್ಪ.—ಹೇಳಿದ್ದೀರಿ, ಆದರೆ ೧೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಪತ್ರಿಕೆಯಲ್ಲಿ ಬಂದಿರುವುದನ್ನು ಉದಾಹರಿಸಿದೆ. ತಮ್ಮ ಉತ್ತರದಲ್ಲಿ ೮೬–೮೭ಕ್ಕೆ ೧೦೦ ಕೋಟಿ ರೂಪಾಯಿ ಮಾಡುತ್ತೇವೆಂದು ಹೇಳಿದಿರಿ. ತಮ್ಮ ಹೇಳಿಕೆಗೆ ವಿರುದ್ಧವಾಗಿ ೩೦ ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ. ಎರಡನೆಯದಾಗಿ, ಶ್ರೀ ಜಯಪ್ರಕಾಶ್ ನಾರಾಯಣ್ ಅವರ ವಿಚಾರದಲ್ಲಿ ನಾನು ಏನು ಹೇಳಿದೆನೆಂಬುದು ನನ್ನ ಭಾಷಣವನ್ನು ಓದಿದರೆ ಗೊತ್ತಾಗುತ್ತದೆ ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ ಎಂದು ಹೇಳಿದ್ದೇನೆ. ರಾಜ್ಯದ ಹಣಕಾಸಿನ ವಿಚಾರದಲ್ಲಿ ಪ್ರತಿಯೊಂದು ಬಿಡುಗಾಸಿಗೂ ಹೆಚ್ಚಿನ ಗಮನ ಕೊಡುತ್ತೇನೆ, ಆದ್ಯತೆಗನುಗುಣವಾಗಿ ಖರ್ಚು ಮಾಡುವ ವಿಚಾರಧಾರೆಯನ್ನು ಇಟ್ಟುಕೊಂಡಿದ್ದೇನೆಂದು ತಾವು ಹೇಳಿದ್ದೀರಿ. ಬರಗಾಲವನ್ನು ಬೃಹದಾಕಾರವಾಗಿ ಕೇಂದ್ರದ ಮುಂದಿಟ್ಟು ಹೆಚ್ಚಿನ ಹಣದ ನೆರವು ಪಡೆಯತಕ್ಕ ಕೆಲಸ ಮಾಡಿದ್ದೀರಿ. ಹೆಚ್ಚು ಹಣ ಪಡೆಯುವುದಕ್ಕೆ ನಾವು ಕೂಡ ಬೆಂಬಲ ಕೊಟ್ಟಿದ್ದೇವೆ. ನೀವು ಬರಗಾಲಕ್ಕಾಗಿ ಜಾಸ್ತಿ ಹಣವನ್ನು ಕೇಳಬೇಕಾದರೆ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ವಿಚಾರ ಬಂದಾಗ ಬರಗಾಲವನ್ನು ಮರೆತಂತೆ ಕಾಣುತ್ತದೆ. ಆ ಯೋಜನೆಗೆ ಒಂದೇ ಸಾರಿ ೨೫ ಲಕ್ಷ ರೂಪಾಯಿ ಕೊಡುವುದಕ್ಕೆ ಬದಲು ಈ ವರ್ಷ ೫ ಲಕ್ಷ. ಮುಂದಿನ ವರ್ಷ ೫ ಲಕ್ಷ ಕೊಡಬಹುದು. ಬಿಡಿಗಾಸಿಗೂ ಗಮನ ಕೊಟ್ಟಿರುವ ನೀವು ಅದಕ್ಕೆ ಇಷ್ಟೊಂದು ಹಣ ಕೊಡುವುದು ನ್ಯಾಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅವರ ಎರಡು ಪ್ರಶ್ನೆಗಳಿಗೂ ಮೊದಲೇ ಉತ್ತರ ಹೇಳಿದ್ದೇನೆ. ಈಗ ವಿಶೇಷವಾಗಿ ಹೇಳತಕ್ಕದ್ದು ಏನೂ ಇಲ್ಲ, ೩೦ ಕೋಟಿ ರೂಪಾಯಿ ಕಡಿಮೆ ಏತಕ್ಕೆ ಎಂದರು. ನಾನು ಹೇಳಿದರು ಏನೆಂದರೆ ಈ ಬಗ್ಗೆ ನಮ್ಮ ಸರ್ಕಾರದ ಇಚ್ಛೆ, ನಮ್ಮ ಸರ್ಕಾರದ ಉದ್ದೇಶ ಇರುವುದು ಈ ವರ್ಷವೇ ಸಾಧ್ಯವಾದರೆ ೧೦೦ ಕೋಟಿ ರೂಪಾಯಿ ಕೊಡಬೇಕೆಂದು.

ಶ್ರೀ ಎಸ್. ಬಂಗಾರಪ್ಪ.—ಸಾಧ್ಯವಾದರೆ ಎಂದು ಹೇಳಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಹೊರಗಡೆ ಹೇಳಿದ್ದು ಭಾಷಣ ಇದು ಬಡ್ಜೆಟ್ ಭಾಷಣ. ಹೊರಗಡೆ ಹೇಳುವುದು ಸರ್ಕಾರದ ತೀರ್ಮಾನ ಅಲ್ಲ. ಅನೇಕ ಸಂದರ್ಭಗಳಲ್ಲಿ ಆ ರೀತಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಸದನದ ಹೊರಗಡೆ ಕೊಟ್ಟಿರತಕ್ಕ ಹೇಳಿಕೆಗಳು ಸರ್ಕಾರದ ತೀರ್ಮಾನ ಅಲ್ಲವೆ ? ಸದನದ ಒಳಗಡೆ ಹೇಳಿರತಕ್ಕದ್ದು ಸರಿ ಎನ್ನುವುದಾದರೆ ಜನ ಯಾವ ರೀತಿ ಭಾವಿಸಬೇಕು ?

ಶ್ರೀ ಆರ್. ವೆಂಕಟರಾಮಯ್ಯ.—ಈಗ ೧೦೦ ಕೋಟಿ ರೂಪಾಯಿ ಜಾಸ್ತಿ ಎಂದರು. ಮುಖ್ಯ ಮಂತ್ರಿಗಳ ಇನ್‌ಪ್ಲೇಷನ್ ರೇಟ್ ಹನ್ನೆರಡೂವರೆ ಪರ್ಸೆಂಟ್ ಇದೆ. ಪಾಪ್ಯುಲೇಷನ್ ರೇಟ್ ಎರಡೂವರೆ ಪರ್ಸೆಂಟ್ ಇದೆ. ಇದನ್ನು ಗಮನಿಸಿದಾಗ ನೂರು ಕೋಟಿ ಕಡಿಮೆ ಅಲ್ಲವೆ ? ಕೇಂದ್ರದವರು ಕೊಡತಕ್ಕ ಗ್ರಾಂಟ್‌ನಿಂದ ನಮಗೆ ಅನ್ಯಾಯವಾಗಿ ಎಂದು ಸ್ಪಷ್ಟವಾಗಿ ಹೇಳಿದರು. ಡೈರೆಕ್ಟ್ ಟ್ಯಾಕ್ಸ್ ಮತ್ತು ಅವರ ಟ್ಯಾಕ್ಸ್ ಎಂದು ನಮಗೆ ೬೮ ಕೋಟಿ ರೂಪಾಯಿ ಬರುತ್ತಿತ್ತು. ಅದು ಈಗ ನಮಗೆ ಮೋಸವಾಗಿದೆ ಎಂದು ಹೇಳಿದರು. ಮಾನ್ಯ ಮಂತ್ರಿಗಳ ಮಾತು ಒಪ್ಪಿಕೊಳ್ಳತಕ್ಕದ್ದು. ವಿಜಯವಾಡ ಮತ್ತು ಕಲ್ಕತ್ತ ಫಂಕ್ಷನ್‌ಗಳಲ್ಲಿ ನಾನ್-ಕಾಂಗ್ರೆಸ್ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಮೊದಲಿನಿಂದ ಅನ್ಯಾಯ ಮಾಡುತ್ತಿದ್ದಾರೆ, ಇದರ ಬಗ್ಗೆ ಪ್ರತಿಭಟಿಸುತ್ತೇನೆಂದು ಹೇಳಿದರು. ಅವರ ನೀತಿಯಿಂದ ಕರ್ನಾಟಕಕ್ಕೆ ಮತ್ತು ಕೆಲವು ಬೇರೆ ರಾಜ್ಯಗಳಿಗೂ ಅನ್ಯಾಯವಾಗಿದೆ ಎಂದು ಪ್ರತಿಭಟನೆ ಮಾಡಿದರು. ಆದರೆ ಈಗ ಇವರು ಆ ನಿಲುವನ್ನು ಏತಕ್ಕೆ ಬದಲಾವಣೆ ಮಾಡಿದ್ದಾರೆಂದು ಗೊತ್ತಿಲ್ಲ. ಬಹಳ ಸ್ಮೂತ್ ಆಗಿ ಹೋಗುತ್ತಿದ್ದಾರೆ. ಒಂದು ಕಡೆ ೫೦ ಪರ್ಸೆಂಟ್ ಟ್ಯಾಕ್ಸ್ ಕಡಿಮೆ ಮಾಡಿದ್ದೇವೆಂದರೆ ಮತ್ತೊಂದು ಕಡೆ ಜಾಸ್ತಿ ಮಾಡಿರುತ್ತಾರೆ. ಕರ್ನಾಟಕದಲ್ಲಿ ತೆರಿಗೆ ಕಟ್ಟಿದ ನೌಕರ ಆಂಧ್ರಕ್ಕೋ ಮದ್ರಾಸಿಗೋ ಹೋದಾಗ ಅಲ್ಲಿ ಅವರ ಗತಿ ಏನು ? ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೆ ? ಗ್ರಾಮೀಣ ಅಭಿವೃದ್ಧಿಗೆ ಜಾಸ್ತಿ ಕೊಟ್ಟಿದ್ದೇವೆಂದು ಹೇಳಿದರು. ವಾಸ್ತವವಾಗಿ ಕೊಟ್ಟಿಲ್ಲ. ೧೫ ವರ್ಷಗಳಲ್ಲಿ ನಾವು ಕೊಡುವ ಹಣದಿಂದ ಅವರು ಅಭಿವೃದ್ಧಿ ಹೊಂದುತ್ತಾರೆಂಬ ತತ್ವವನ್ನು ಪ್ರತಿಪಾದಿಸಿದ್ದಾರೆ. ಅದು ನ್ಯಾಯವೂ ಅಲ್ಲ. ಸಮಂಜಸವೂ ಅಲ್ಲ. ಕೃಷಿ ಕಾರ್ಮಿಕರ ಬಗ್ಗೆ ಇವರು ಹೆಚ್ಚು ಕಾಳಜಿ ವಹಿಸಿಲ್ಲ. ಅವರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು,

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆಗೆ ಹೇಳುವುದಾದರೆ, ಕೇಂದ್ರ ಸರ್ಕಾರದ ಜೊತೆ ಸದಾ ಜಗಳ ಮಾಡಬೇಕೆಂದು ಹೇಳುವ ಉದ್ದೇಶ ನಮಗೆ ಇಲ್ಲ. ನಮ್ಮ ಉದ್ದೇಶ ಏನೆಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜನತೆಯ ಕಲ್ಯಾಣದ ಬಗ್ಗೆ ಕೈಗೊಳ್ಳತಕ್ಕ ಯೋಜನೆಗಳಲ್ಲಿ ಪರಸ್ಪರ ಪೂರಕವಾಗಿ ಪಾತ್ರವಹಿಸಬೇಕು, ಸಹಕಾರ ಇರಬೇಕು, ಆದರೆ ಯಾವ ಸಂದರ್ಭದಲ್ಲಿ ನಮಗೆ ಅನ್ಯಾಯವಾಗುತ್ತದೋ ಮತ್ತು ನಮ್ಮ ರಾಜ್ಯದ ಹಿತಕ್ಕೆ ವಿರುದ್ಧವಾದಂಥ ತೀರ್ಮಾನ ತೆಗೆದುಕೊಳ್ಳುತ್ತಾರೋ ಅಂಥ ಸಂದರ್ಭದಲ್ಲಿ ಅದನ್ನು ನಾವು ವಿರೋಧ ಮಾಡಿದ್ದೇವೆ, ಮಾಡುತ್ತೇವೆ. ಉದಾಹರಣೆಗೆ ಹತ್ತಿ ಮತ್ತು ರೇಷ್ಮೆ ವಿಚಾರ. ಈ ಬಗ್ಗೆ ಕಳೆದ ಎರಡು ವರ್ಷಗಳಿಂದಲೂ ನಾವು ಕೇಂದ್ರ ಸರ್ಕಾರಕ್ಕೆ ಬರೆಯುತ್ತಾ ಬಂದಿದ್ದೇವೆ. ದಯವಿಟ್ಟು ಚೈನದಿಂದ ರೇಷ್ಮೆಯನ್ನು ಆಮದು ಮಾಡಬೇಡಿ, ಆದರಿಂದ ನಮ್ಮ ಕರ್ನಾಟಕದ ರೇಷ್ಮೆ ಬೆಳೆಗಾರರಿಗೆ ದೊಡ್ಡ ಹೊಡೆತ ಬೀಳುತ್ತದೆಂದು ಹೇಳುತ್ತಿದ್ದೇವೆ. ಭಾರತದ ಒಟ್ಟು ರೇಷ್ಮೆ ಉತ್ಪಾದನೆಯಲ್ಲಿ ಶೇಕಡ ೭೦ಕ್ಕಿಂತ ಹೆಚ್ಚು ರೇಷ್ಮೆಯನ್ನು ನಾವು ಉತ್ಪಾದನೆ ಮಾಡುತ್ತಿದ್ದೇವೆ. ಅದಕ್ಕೆ ಅವರು ಏನು ಉತ್ತರಿಸಿದರು ಎಂದರೆ, ರೇಷ್ಮೆ ಬಟ್ಟೆ ಬೆಲೆ ಹೆಚ್ಚಾಗುತ್ತದೆ ಎಂದು. ರೇಷ್ಮೆ ಬಟ್ಟೆಯನ್ನು ಉಡುವವರು ಯಾವಾಗಲೂ ಉಡುತ್ತಾರೆ, ಅದು ಸಾಮಾನ್ಯ ಜನರು ಉಡುವುದು ಅಲ್ಲ. ಅವರು ಇನ್ನೂ ಆ ಒಂದು ನೀತಿಯನ್ನು ಬಿಟ್ಟಿಲ್ಲ. ಅದನ್ನು ನಾವು ಇನ್ನೂ ಕೂಡ ವಿರೋಧ ಮಾಡುತ್ತಿದ್ದೇವೆ. ಹತ್ತಿಯ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಕರ್ನಾಟಕದಲ್ಲಿ ಲಾಂಗ್ ಸ್ಟೇಪಲ್ ಕಾಟನ್ ಎಂದು ಉತ್ತಮವಾದ ಹತ್ತಿಯನ್ನು ಬೆಳೆಯುತ್ತೇವೆ. ಇಡೀ ಭಾರತದಲ್ಲಿ ಎಷ್ಟು ಬೆಳೆಯುತ್ತಾರೆ ಅದರಲ್ಲಿ ಶೇಕಡ ೬೦ರಷ್ಟನ್ನು ನಾವು ಬೆಳೆಯುತ್ತೇವೆ. ಆದರೆ ಲಾಂಗ್ ಸ್ಟೇಪಲ್ ಕಾಟನ್ ಅನ್ನು ಎಕ್ಸ್‌ಪೋರ್ಟ್ ಮಾಡುವುದನ್ನು ನಿಲ್ಲಿಸಿದರು. ಅದರ ವಿರುದ್ಧವಾಗಿ ಕೂಡ ನಾವು ಇದನ್ನು ನಿಲ್ಲಿಸಿದ್ದು ತಪ್ಪು, ಇದರಿಂದ ಹತ್ತಿ ದರ ಬಿದ್ದುಹೋಗುತ್ತಿದೆ ಎಂದು

ಬರೆದಿದ್ದೇವೆ. ಅಷ್ಟೇ ಅಲ್ಲದೆ ಕೃತಕ ನೂಲು ಏನಿದೆ ಅದನ್ನು ಸಿಕ್ಕಾ ಬಟ್ಟೆ ಆಮದು ಮಾಡುತ್ತಾರೆ. ಈ ರೀತಿ ಆಮದು ಮಾಡುವುದರಿಂದ......

ಶ್ರೀ ಕೆ. ಹೆಚ್. ಪಾಟೀಲ್.—ಯಾರು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಉದಾಹರಣೆ ಕೊಡುತ್ತೇನೆ. ಆ ಲಾಬಿ ಪ್ರಭಾವ ಹೆಚ್ಚು ಇದ್ದರೆ ಹತ್ತಿ ಬೆಳೆಯುವ ಲಾಬಿ ಹೆಚ್ಚು ಇಲ್ಲ. ಹತ್ತಿ ಬೆಳೆಯುವವರ ಲಾಬಿ ಎಲ್ಲಿದೆ ? ಕೃತಕ ನೂಲನ್ನು ಆಮದು ಮಾಡತಕ್ಕ ಜನರ ಲಾಬಿ ಬಹಳ ಪ್ರಭಾವಯುತವಾಗಿದೆ. ಆದ್ದರಿಂದ ನಾವು ಪ್ರತಿಯೊಂದು ಸಾರಿಯೂ ಕೇಂದ್ರದ ಜೊತೆ ಜಗಳ ಮಾಡುವುದಕ್ಕಾಗುವುದಿಲ್ಲ. ಇದು ಆಯಾಯ ಇಶ್ಯೂ ಮೇಲೆ ಹೋಗುತ್ತದೆ.

ಶ್ರೀ ಆರ್.ವೆಂಕಟರಾಮಯ್ಯ.—ನಮಗೆ ಬರುವ ಗ್ರ್ಯಾಂಟ್ಸ್ ಕಡಿಮೆ ಆಗುತ್ತದೆ. ೬೮ ಕೋಟಿ ರೂಪಾಯಿ ನಷ್ಟವಾಯಿತು ಎಂದರೆ......

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ನಾವು ಪತ್ರ ಬರೆದಿದ್ದೇವೆ.

ಇನ್ನು ಈ ದ್ವಿಚಕ್ರ ವಾಹನಗಳ ಬಗ್ಗೆ ಹೇಳುವುದಾದರೆ ದ್ವಿಚಕ್ರ ವಾಹನವನ್ನು ಇಲ್ಲಿ ಒಬ್ಬ ಸರ್ಕಾರಿ ನೌಕರ ಖರೀದಿ ಮಾಡುತ್ತಾನೆ. ದ್ವಿಚಕ್ರ ವಾಹನವನ್ನು ಇಲ್ಲಿ ಖರೀದಿ ಮಾಡಿದರೆ ನಾಳೆ ದಿವಸ ಆ ಸರ್ಕಾರಿ ನೌಕರನನ್ನು ಇಲ್ಲಿಂದ ಆಂಧ್ರಕ್ಕೋ, ಮದ್ರಾಸಿಗೋ ವರ್ಗ ಮಾಡುತ್ತಾರೆ. ಅವನು ವರ್ಗ ಆಗಿ ಹೋಗುವಾಗ ಅವರಿಗೆ ದಾಮಾಷ ಪ್ರಕಾರ ರೀಫಂಡ್ ಕೊಡುತ್ತೇವೆ. ಇಲ್ಲಿ ದುಡ್ಡು ಕಟ್ಟಿ ಎರಡನೇ ವರ್ಷದಲ್ಲಿ ಬೇರೆ ಕಡೆಗೆ ಹೋದರೆ, ಅನಾವಶ್ಯಕವಾಗಿ ದುಡ್ಡು ಹೋಗುತ್ತದೆಂದು ಹೇಳುವಂಥದ್ದು ಬರುವುದಿಲ್ಲ. ಆ ತೊಂದರೆ ಅವರಿಗೆ ಆಗುವುದಿಲ್ಲ. ನಾನು ಬಾಯಿ ತಪ್ಪಿ ಆ ಆರ್ಡಿನರಿ ಕ್ಲೇ ಮೇಲೆ ಟ್ಯಾಕ್ಸ್ ಇದೆ ಎಂದು ಹೇಳಿದ್ದೆ. ಈಗ ರಾಯಲ್ಟಿ ಎಂದು ಏನು ವಸೂಲು ಮಾಡುತ್ತಿದ್ದೇವೆ. ಅದನ್ನು ಸಂಪೂರ್ಣವಾಗಿ ಕೈ ಬಿಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್ ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನಗೆ ಈ ಬಜೆಟ್ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶ ಕೊಡಲಿಲ್ಲ. ಆದ್ದರಿಂದ ಒಂದೆರಡು ಪ್ರಶ್ನೆಗಳನ್ನು ಕೇಳಲಿಕ್ಕೆ ನಾನು ಬಯಸುತ್ತೇನೆ. ದ್ವಿಚಕ್ರ ವಾಹನಗಳ ಬಗ್ಗೆ ಕೆಲವೊಂದು ರಿಯಾಯಿತಿಗಳನ್ನು ತೋರಿಸಿದ್ದೀರಿ. ಇದನ್ನು ನೀವು ಮಾಡಿರತಕ್ಕಂಥದ್ದು ಸರಿ. ಯಾರು ಬೇಕಾದರೂ ಒಂದೇ ಕಂತಿನಲ್ಲಿ ಕಟ್ಟಬಹುದು ಎಂದು ಹೇಳಿದ್ದೀರಿ. ಹಿಂದೆ ಇದ್ದಂತಹ ರೀತಿಯಲ್ಲಿ ಕಟ್ಟಿಕೊಂಡು ಹೋಗುವ ಹಾಗೆ ಮಾಡಬೇಕೆಂದು ನನ್ನ ಸಲಹೆ. ಇನ್ನು ಮಾನ್ಯ ವೆಂಕಟರಾಮಯ್ಯನವರು ಕೆಲವು ವಿಚಾರಗಳನ್ನು ಎತ್ತಿದ್ದರು. ಅದಕ್ಕೆ ಉತ್ತರ ಬರಲಿಲ್ಲ. ಚರ್ಚೆ ಆಯಿತು. ನಿಜ. ಆದರೆ ನಮ್ಮ ಅನುಮಾನಗಳನ್ನು ಮಾತ್ರ ಮತ್ತೊಮ್ಮೆ ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ. ತೆಲುಗು ಗಂಗಾ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನಿಲುವಿಗೂ ಹಾಗೂ ನೀರಾವರಿ ಸಚಿವರ ನಿಲುವಿಗೂ ನಿಜವಾಗಿಯೂ ಬಹಳ ಮಹತ್ವವಾದಂಥ ಒಂದು ವ್ಯತ್ಯಾಸ ಆ ದಿವಸ ನಮಗೆ ಕಂಡು ಬಂದಿತ್ತು. ನೀರಾವರಿ ಸಚಿವರ ಈ ಹಿಂದಿನ ಹೇಳಿಕೆಯನ್ನು ತೆಗೆಸಿ, ಆ ಬಗ್ಗೆ ಇಂದಿನ ದಿವಸವೂ ಚರ್ಚೆ ಮಾಡಬೇಕೆಂದಿದ್ದರೆ ಅದಕ್ಕೆ ನಾವು ಸಿದ್ಧರಾಗಿದ್ದೇವೆ. ಏಕೆಂದರೆ ಅಪ್ಪರಾಗಿ ಕರೆದು ಆಲೋಚನೆ ಮಾಡುತ್ತೇವೆ ಎಂದು ಆ ಸಭೆಯಲ್ಲಿ ತೀರ್ಮಾನವಾಗಿರಬಹುದು. ಇದರಿಂದ ಅವರ ನಿಲುವುಗಳು ಆ ರೀತಿಯಾಗಿರಬಹುದು ಎಂದು ತಿಳಿದುಕೊಂಡಿದ್ದೆವು. ಒಂದೇ ಒಂದು ವಿಚಾರ ಎಂದರೆ, ಎರಡು ಸಾವಿರ ಇಸವಿಯ ನಂತರ ತೆಲುಗು ಗಂಗಾ ಯೋಜನೆಯನ್ನು ಮಾಡುವುದರಿಂದಾಗಿ ನಮ್ಮ ನೀರಿನ ಹಕ್ಕಿಗೆ ಧಕ್ಕೆ ಬರುವುದು ಸ್ಪಷ್ಟವಾದ ವಿಚಾರ. ಆದ್ದರಿಂದ ಇದನ್ನು ಮಾಡಕೂಡದು, ನಾವು ನಿಲ್ಲಿಸುವುದಕ್ಕಾಗುವುದಿಲ್ಲ. ಸತ್ಯಾಗ್ರಹ ಮಾಡಬೇಕು, ಇವೆಲ್ಲವುಗಳನ್ನು ನಾವು ಹೇಳುವುದಿಲ್ಲ. ಆದರೆ ಬಹಳ ನಿರ್ದಿಷ್ಟವಾದಂಥ ಖಚಿತವಾದಂಥ ರೀತಿಯಲ್ಲಿ ಯೋಜನೆಯನ್ನು ಎರಡು ಸಾವಿರ ಇಸವಿಯ ನಂತರವೂ ನಮ್ಮ ಕೈ ಕಟ್ಟಬೇಕು, ಕರ್ನಾಟಕದ ಕೈ ಕಟ್ಟಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ವಿಚಾರ ಮಾಡಕೂಡದು ಎಂದು ಸ್ಪಷ್ಟವಾದ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ಎನ್ನುವುದು ಅಭಿಲಾಷೆ ಇತ್ತು. ಅವರು ಈಗ ಏನು ಹೇಳುತ್ತಿದ್ದಾರೆಂದರೆ, ಬಹಳ ನಾಜೂಕಾಗಿ, ಬಹಳ ದುರ್ಬಲವಾಗಿ, ಇಲ್ಲೀಗಲಿಸ್ಟಿಕ್ ಆಗಿ ಮಾತನಾಡುವುದರಿಂದ ನಮ್ಮ ಅನುಮಾನವನ್ನು ಬಲಪಡಿಸುತ್ತದೆ. ಶ್ರೀ ರಾಮರಾಯರ ಸ್ನೇಹಕ್ಕೆ, ವಿಶ್ವಾಸಕ್ಕೆ ಇವರು ಎಲ್ಲಿ ಬಲಿಯಾಗುತ್ತಾರೋ ಏನೋ ಎಂಬ

ಅನುಮಾನಕ್ಕೆ ಅವಕಾಶವಾಗುತ್ತದೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಈಗ ತಾವು ಇಬ್ಬರೂ ಹೇಳಿದ್ದೀರಿ ? ನಿಮ್ಮ ನಿಲುವಿನಿಂದ ನೀರಾವರಿ ಸಚಿವರ ನಿಲುವನ್ನು ಹಾಳು ಮಾಡಿದಂತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ನಾನು ಅತ್ಯಂತ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಏನೆಂದರೆ ನನ್ನ ಹೇಳಿಕೆಯಲ್ಲಿ ನಾಜೂಕಾದ ಭಾಷೆ ಇಲ್ಲ. ಮತ್ತೊಂದು ಭಾಷೆ ಇಲ್ಲ. ನಮ್ಮ ನೀರಾವರಿ ಸಚಿವರೇ ಮತ್ತೊಮ್ಮೆ ಅದನ್ನು ಸ್ಪಷ್ಟೀಕರಿಸುತ್ತಾರೆ. ಎರಡು ಸಾವಿರ ಇಸವಿಯ ನಂತರವೂ ಕೂಡ ನಮ್ಮ ಹಕ್ಕಿಗೆ ಯಾವುದೇ ರೀತಿಯ ಚ್ಯುತಿ ಬಾರದಂತೆ ನಾವು ನೋಡಿಕೊಳ್ಳುತ್ತೇವೆ, ನಮ್ಮ ನಿಲುವನ್ನು ಕೇಂದ್ರಸರ್ಕಾರಕ್ಕೆ ಅತ್ಯಂತ ಸ್ಪಷ್ಟವಾದ ಭಾಷೆಯಲ್ಲಿ ನಾವು ಬರೆದು ತಿಳಿಸಿದ್ದೇವೆ. ಬಚಾವತ್ ಕಮೀಷನರ್‌ರವರು ಎರಡು ಸಾವಿರ ಇಸವಿಯ ನಂತರವೂ ಕೂಡ ಸರ್‌ಪ್ಲಸ್ ವಾಟರ್ ಏನು ಬರುತ್ತದೆ ಅದನ್ನು ಯಾವರೀತಿ ಹಂಚಬೇಕು ಎನ್ನುವುದನ್ನು ಹೇಳಿದ್ದಾರೆ. ಇನ್ನು ಸ್ಪಷ್ಟವಾಗಿ ನಿಮ್ಮ ಮನಸ್ಸಿಗೆ ಸಮಾಧಾನವಾಗುವ ಹಾಗೆ ಬೇಕಾದರೆ ಮಾನ್ಯ ದೇವೇಗೌಡರು ಹೇಳುತ್ತಾರೆ. ಇದೇ ನನ್ನ ನಿಲುವು. ಸರ್ಕಾರದ ನಿಲುವು ಕೂಡ.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನೇ ಮತ್ತೊಮ್ಮೆ ಸ್ಪಷ್ಟೀಕರಣ ಮಾಡಬೇಕಾದಂಥ ಅವಶ್ಯಕತೆ ಇಲ್ಲ. ಆದರೆ ನಮ್ಮ ಶ್ರೀನಿವಾಸ್ ಅವರು ಪದೇ ಪದೇ ಇದರಲ್ಲಿ ಏನಾದರೂ ವ್ಯತ್ಯಾಸ ಇದೆಯೋ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಈ ಮಾತನ್ನು ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಖಡಾಖಂಡಿತವಾಗಿ ಹೇಳಿದ್ದಾರೆ. ಏನು ೮೦೦ ಟಿ.ಎಂ.ಸಿ. ನೀರನ್ನು ಆಂಧ್ರಪ್ರದೇಶದವರಿಗೆ ಉಪಯೋಗ ಮಾಡಿಕೊಳ್ಳಲಿಕ್ಕೆ ಅವಕಾಶ ಇದೆಯೋ ಅದಕ್ಕೆ ಹೊರತಾಗಿ ಯಾವುದೇ ನೀರಿನ ಮೇಲೆ ಅವರಿಗೆ ಅಧಿಕಾರ ಬರುವುದಿಲ್ಲ. ಇದನ್ನು ಬಳಸಿಕೊಳ್ಳುವುದರ ಬಗ್ಗೆ ಕೇಂದ್ರಕ್ಕೂ ಹೇಳಿದ್ದೇವೆ. ಪಾರ್ಲಿಮೆಂಟರಿ ಸದಸ್ಯರಿಗೂ ಹೇಳಿದ್ದೇವೆ. ಎಲ್ಲರಿಗೂ ಹೇಳಿದ್ದೇವೆ. ಈಗ ಕ್ಲಾಸ್ ೩ ರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಬಚಾವತ್ ಅವಾರ್ಡ್‌ನಲ್ಲಿ ಕ್ಲಾಸ್ ೩ ರಲ್ಲಿ ೮೦೦,೭೩೪ ಮತ್ತು ೫೬೦ ಟಿ.ಎಂ.ಸಿ. ನೀರಿನ ಹಂಚಿಕೆ ಏನು ಇದೆ. ಇದಕ್ಕೆ ಹೊರತಾಗಿ ಬರತಕ್ಕಂಥ ಸರ್‌ಪ್ಲಸ್ ವಾಟರ್‌ನ್ನು ಯಾವ ರೀತಿ ಯೂಸ್ ಮಾಡಿಕೊಳ್ಳಬೇಕು ಎನ್ನುವುದನ್ನೂ ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯ. ಅವರು ೨೦೬೦ ಟಿ.ಎಂ.ಸಿ. ವರೆಗೆ ನೀರು ಇದ್ದರೆ ೩೫ ಪರ್ಸೆಂಟ್, ೫೦ ಪರ್ಸೆಂಟ್, ೧೫ ಪರ್ಸೆಂಟ್ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ ಎಂಬುದನ್ನು ಹೇಳಿದ್ದಾರೆ. ಅದರ ಮೇಲ್ಪಟ್ಟು ಕರ್ನಾಟಕ ೫೦ ಪರ್ಸೆಂಟ್, ಮಹಾರಾಷ್ಟ್ರ ೫೦ ಪರ್ಸೆಂಟ್, ಆಂಧ್ರ ೨೫ ಪರ್ಸೆಂಟ್ ಎಂದು ಇದರಲ್ಲಿ ಇದೆ. ಇದು ಪ್ರಾಮುಖ್ಯವಾದ ವಿಷಯ. ಈ ಕ್ಲಾಸ್ ೩ರಲ್ಲಿ ಹೇಳಿರತಕ್ಕಂಥ ನಿಬಂಧನೆಗೆ ಹೊರತಾಗಿ ಅವರು ಯಾವುದೇ ನೀರನ್ನು ಯಾವುದೇ ಕಾರಣದಿಂದ ಯೂಸ್ ಮಾಡಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಏನಾಗಿದೆ ಎಂದರೆ ತೆಲುಗು ಗಂಗಾದವರು ೩೦೦ ಟಿ. ಎಂ. ಸಿ. ಯಷ್ಟು ನೀರನ್ನು ಉಪಯೋಗ ಮಾಡತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದಾರೆ. ಸರ್‌ಪ್ಲಸ್ ವಾಟರ್‌ನಲ್ಲಿ ೨೫ ಪರ್ಸೆಂಟ್ ಮಾತ್ರ ಬಳಸಲು ಅವರಿಗೆ ಅಧಿಕಾರ ಬರುತ್ತದೆ ಎನ್ನತಕ್ಕಂಥ ಮಾತನ್ನು ಬಚಾವತ್ ಅವಾರ್ಡ್‌ನ ಕ್ಲಾಸ್ ೩ ರಲ್ಲಿ ಹೇಳಿದ್ದಾರೆ. ಈ ಕಾರಣದಿಂದ ಈ ೩೦೦ ಟಿ. ಎಂ. ಸಿ. ಗಾತ್ರದ ಯೋಜನೆಯನ್ನು ಮಾಡುವುದಕ್ಕೆ ಯಾವುದೇ ಕಾರಣದಿಂದ ಅವರಿಗೆ ಸಾಧ್ಯವಿಲ್ಲ ಎನ್ನುವುದನ್ನು ಕರ್ನಾಟಕದಲ್ಲಿರುವ ಮಾನ್ಯ ಮುಖ್ಯಮಂತ್ರಿಗಳು, ಕೇಂದ್ರದ ನೀರಾವರಿ ಸಚಿವರಿಗೆ, ಪ್ರಧಾನಮಂತ್ರಿಯವರಿಗೆ ಬರೆದಿರತಕ್ಕಂಥ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಹೇಳುವುದು ಏನೆಂದರೆ ಉಭಯ ರಾಜ್ಯಗಳು, ಹಾಗೂ ಸಂಬಂಧಪಟ್ಟಂತಹ ರಾಜ್ಯಗಳವರು ಕೂತುಕೊಂಡು ಸಮಾಲೋಚನೆ ಮಾಡಬಹುದು ಎಂಬ ಮಾತನ್ನು ಹೇಳಿದ್ದಾರೆ. ಅದು ಈ ಬಚಾವತ್ ಅವಾರ್ಡ್‌ನಲ್ಲಿ ಇದೆ. ಒಂದು ವೇಳೆ ಎರಡು ಸಾವಿರ ಇಸವಿಗಿಂತ ಮುಂಚೆ ಈ ಸರ್‌ಪ್ಲಸ್ ವಾಟರ್‌ನ್ನು ಹಂಚಿಕೊಂಡು ನಾವು ಈಗಾಗಲೇ ಹೊಂದಾಣಿಕೆಯಿಂದ ಯೂಸ್ ಮಾಡಿಕೊಳ್ಳುವುದಕ್ಕೆ ಒಪ್ಪಿಗೆ ಕೊಡುವುದಾದರೆ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರ, ಈ ಮೂರು ರಾಜ್ಯಗಳು ಕೂತು ಕ್ಲಾಸ್ ೧೭ ಎ ಪ್ರಕಾರ ನಾವು ನೆಗೋಷಿಯೇಟ್ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ.

"Nothing contained herein shall prevent alterations, amendment or modification of all or any of the foregoing clauses by agreement between parties or legislation by Parliament".

ಪಾರ್ಲಿಮೆಂಟ್ ಮುಂದೆ ಲೆಜಿಸ್ಲೇಷನ್ ಮುಖಾಂತರ ಬೇಕಾದರೆ ಮಾಡಿಕೊಳ್ಳಬಹುದು. ಆದರೆ ಇವತ್ತಿನ ದಿವಸ ತೆಲುಗು ಗಂಗಾ ಯೋಜನೆ ಮೂಲಕ ೩೦೦ ಟಿ. ಎಂ. ಸಿ. ಯುಷ್ಟು ನೀರನ್ನು ಉಪಯೋಗ ಮಾಡಿಕೊಳ್ಳತಕ್ಕಂಥ ಯೋಜನೆಗೆ ನಮ್ಮ ಅಡ್ಡಿ ಇದೆ, ಇದಕ್ಕೆ ಸಾಧ್ಯವೇ ಇಲ್ಲ. ಯಾವ ರಾಜ್ಯವೂ ಇದಕ್ಕಿಂತ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ಈ ತೆಲುಗು ಗಂಗಾ ಯೋಜನೆಗೆ ನಾವೇ ವಿರುದ್ಧ ಅಲ್ಲ, ಕೇಂದ್ರದಲ್ಲೂ ವಿರುದ್ಧ ಇದೆ. ಇರಿಗೇಷನ್ ಮಂತ್ರಿಗಳೂ ಕೂಡ ಸ್ಪಷ್ಟೀಕರಣ ಮಾಡಿದ್ದಾರೆ, ಇದಕ್ಕೆ ಅನುಮತಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಮತ್ತೊಮ್ಮೆ ಸ್ಪಷ್ಟೀಕರಣ ಈ ಕಾರಣದಿಂದ ಕೊಡಬೇಕಾಗಿತ್ತು. ಕೊಟ್ಟಿದ್ದೇನೆ.

ಅಧ್ಯಕ್ಷರು.—ಮುಗಿಯಿತಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇನ್ನೂ ಮುಗಿಯಲಿಲ್ಲ. ಬೇರೆ ಪಾಯಿಂಟ್ಸ್ ಇದೆ. ಬೇರೆ ವಿಷಯವನ್ನು ಕೇಳುವುದರೊಳಗೆ ಉತ್ತರ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಆಯವ್ಯಯ ಭಾಷಣವನ್ನು ಒಂದು ವರ್ಷದಿಂದ ಒಂದು ವರ್ಷಕ್ಕೆ ಒಂದೇ ಸರ್ಕಾರದ ಒಬ್ಬರೇ ಸಚಿವರು ಮಾಡಿದಾಗ ಏನಾದರೂ ಒಂದು ಕಂಟಿನ್ಯುಟಿ ಇರಬೇಕಾಗುತ್ತದೆ. ಇಲ್ಲಿ ಒಂದು ತೊಂದರೆ ಬಂದಿರುವುದು ಏನೆಂದರೆ ಬಜೆಟ್ ಭಾಷಣದಲ್ಲಿ ಬಹಳ ಗಂಭೀರವಾದ ವಿಚಾರಗಳನ್ನು ಬಹಳ ಸುಂದರವಾದ ಭಾಷೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾರೆ. ನಂತರ ಮುಂದೆ ಅದಕ್ಕೆ ತದ್ವಿರುದ್ಧವಾದ ನಿಲುವುಗಳಿಗೆ ಪೋಷಕವಾದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ. ಒಂದು ಬಜೆಟ್ಟಿನಿಂದ ಇನ್ನೊಂದು ಬಜೆಟ್ಟಿಗೆ ಹೋಲಿಸಿದಾಗ ಹಿಂದಿನ ವಿಚಾರಗಳನ್ನು ಸಂಪೂರ್ಣವಾಗಿ ಇವರು ಕೈಬಿಟ್ಟರೆ ಇವರ ಆಯವ್ಯಯವನ್ನು ಹೇಗೆ ನಾವು ಅರ್ಥಮಾಡಿಕೊಳ್ಳಬೇಕು? ಹೋದವರ್ಷದ ಬಜೆಟ್ ಭಾಷಣದಲ್ಲಿ ಅಧಿಕ ಅಭಿವೃದ್ಧಿಯ ಇಡೀ ವಿಧಾನದಲ್ಲಿ ಜನತಾ ವಲಯವನ್ನು ಮರೆತಿದ್ದೇವೆ ಎಂದು ಅದರ ಬಗ್ಗೆ ಒಂದು ಪ್ಯಾರಾಗ್ರಾಫ್ ಹೇಳಿದ್ದೀರಿ. ಈ ಬಗ್ಗೆ ಹೊಸ ಅಭಿಪ್ರಾಯವನ್ನು ಹೊಂದಿದ್ದೇವೆಂದು ಹೋದ ವರ್ಷ ಹೇಳಿದ್ದರಿಂದ ಬರುವಂಥ ಬಜೆಟ್‌ನಲ್ಲಾದರೂ ಖಚಿತವಾದ ರೂಪುರೇಷೆಯನ್ನು ಅದರ ಬಗ್ಗೆ ಕೊಡುತ್ತಾರೆಂದು ಅಂದುಕೊಂಡಿದ್ದರೆ ಈ ವರ್ಷ ಜನತಾ ವಲಯದ ಬಗ್ಗೆ ಹೇಳೇ ಇಲ್ಲ. ಈ ವರ್ಷ ಗ್ರಾಮೀಣ ಭಾರತ, ಔದ್ಯೋಗಿಕ ಭಾರತ ಇದೆ. ಅಥವಾ ಮಹಾರಾಷ್ಟ್ರದ ಶರದ್ ಜೋಶಿಯವರ ಭಾಷೆಯಲ್ಲಿ ಹೇಳುವುದಾದರೆ, ಇಂಡಿಯಾ ವರ್ಸಸ್ ಭಾರತ ಏನಿದೆ ಆ ಥೀಸಿಸ್‌ನ್ನು ಮುಂದೆ ಇಟ್ಟಿರಿ. ಅದಕ್ಕೆ ಪರಿಹಾರ ಏನು ? ಇರುವ ರಿಸೋರ್ಸಸ್‌ನಿಂದ ಖರ್ಚು ಮಾಡುವ ವಿಷಯ ಹೇಳಲಿಲ್ಲ. ವಾಟರ್ ರೇಟ್ ಮೇಲೆ ಸೆಸ್ ಹಾಕಿ ಅದನ್ನು ಉಪಯೋಗಿಸುತ್ತೇವೆ ಎಂದರೆ ಈವರೆಗೆ ಏನು ಥೀಸಿಸ್ ಹೇಳಿದ್ದೀರಿ ಅದರಂತೆ ನಡೆದುಕೊಂಡ ಹಾಗಾಗುವುದಿಲ್ಲ. ಅಭಿವೃದ್ಧಿ ಕಾರ್ಯದಲ್ಲಿ ಏನು ಹಣ ಖರ್ಚು ಮಾಡುತ್ತೀರಿ ಅದರಲ್ಲಿ ಒಂದು ಭಾಗವನ್ನು ಇದಕ್ಕೆ ಹಾಕಿದ್ದರೆ ಆ ತತ್ವ ಹೇಳುವುದಕ್ಕೆ ಪುರುಷಾರ್ಥ ಇರುತ್ತಿತ್ತು. ಆದರೆ ಈ ರೀತಿ ಬದಲಾವಣೆ ಮಾಡುವುದು It does not inspire confidence in these thesis which you are projecting......ನಾವು ಪ್ರಶ್ನೆ ಕೇಳಿದಾಗ ಅದರ ಹಳಿ ತಪ್ಪಿಸುವ ಜಾಣ್ಮೆ ಮುಖ್ಯಮಂತ್ರಿಗಳಿಗೆ ಇದೆ ಅದನ್ನು ಅವರು ಮಾಡುತ್ತಾರೆ. ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಎಲ್ಲರಿಗೂ ಗೌರವ ಇದೆ.

ಅಧ್ಯಕ್ಷರು —ಶ್ರೀನಿವಾಸ್ ಅವರೇ, ತಾವು ವಿವರಣೆ ಕೇಳುತ್ತೀರೋ ಅಥವಾ ಭಾಷಣ ಮಾಡುತ್ತೀರೋ ? ತಾವು ಕೂಡ್ರಿ. ಪ್ರತಿಯೊಂದಕ್ಕೂ ತಾವು ಹೀಗೇ ಮಾಡುತ್ತೀರಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಹೇಳಿದ ಹಾಗೆ ಇಲ್ಲಿ ಕೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು —ವಿವರಣೆ ಕೇಳುವುದನ್ನು ಬಿಟ್ಟು ಎಲ್ಲಾ ವಿಷಯ ಹೇಳಿದರೆ ಹೇಗೆ ? ತಾವು ಭಾಷಣ ಮಾಡಿಲ್ಲ ಎಂದು ಹೇಳಿದ್ದಕ್ಕೆ ತಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ನಮಗೆ ಯಾವುದೇ ರೀತಿಯ ಅಗೌರವ ಇಲ್ಲ. ನಾವು ರಸ್ತೆ ಮೇಲೆ ಹೋಗಿ ಬರಗಾಲಕ್ಕೆ ಹಣ ಕೊಡಿ ಎಂದು ಜನಗಳಿಗೆ ಕೇಳುವ ಹೊತ್ತಿನಲ್ಲಿ, ಇಂಥ ಕೊಡುಗೆಯನ್ನು ಕೊಟ್ಟರಲ್ಲ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಾವಲ್ಲ, ನೀವು ಕೊಡುವಷ್ಟು ಗೌರವವನ್ನು ಶ್ರೀ ಜಯಪ್ರಕಾಶ್ ನಾರಾಯಣ್ ಅವರಿಗೆ ಕೊಟ್ಟಿದ್ದಿದ್ದರೆ ಕೇಂದ್ರದಲ್ಲಿ ನಿಮ್ಮ ಪಕ್ಷದ ಸರ್ಕಾರ ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿತ್ತು. ಶ್ರೀ ಮುರಾರ್ಜಿ ದೇಸಾಯಿಯವರು ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ...

ಅಧ್ಯಕ್ಷರು.—ನೀವು ಅನಾವಶ್ಯಕವಾಗಿ ಟೈಂ ಏತಕ್ಕೆ ವೇಸ್ಟ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಈಗ ಹೇಳುವುದು ಬೇಡ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈಲ್ಡ್ ಆದರೆ......

SRI K. H. SRINIVASA.—I am on my legs. Let me complete.

SRI S. R. BOMMAI.—I request you to yield......

SRI K. H. SRINIVAS.—Let me complete my say......

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಬೇಡ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ತಿಳಿದುಕೊಂಡಿರುವುದನ್ನು ನಾನು ಹೇಳುವುದಿಲ್ಲ. ಏತಕ್ಕೆ ಗಾಬರಿ ಆಗುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜೆ.ಪಿ. ಯವರ ಬಗ್ಗೆ ಮುರಾರ್ಜಿಯವರ ಬಗ್ಗೆ ಇಲ್ಲಿ ಮಾತನಾಡುವುದು ಬೇಡ.

ಅಧ್ಯಕ್ಷರು.—ಕೂಡಿ ಸ್ವಾಮಿ ;

ಶ್ರೀ ಕೆ. ಎಚ್. ಶ್ರೀನಿವಾಸ್.—ಜಯಪ್ರಕಾಶ್ ಸ್ಮಾರಕ ನಿಧಿಗೆ ಹಣ ಕೊಡತಕ್ಕದ್ದು ಈ ಸಂದರ್ಭದಲ್ಲಿ ಸರಿಯಲ್ಲದಿದ್ದರೂ ಕಮಿಟ್ ಆಗಿದ್ದೆವು, ಕೊಟ್ಟೆವು, ಕೊಡಬೇಕಾಗಿತ್ತು. ಕೊಟ್ಟೆವು ಎಂದರೆ ಅದು ಬೇರೆ ವಿಚಾರ. ಆದರೆ ಅವರ ಬಗ್ಗೆ ಗೌರವ ಇಲ್ಲ ಎಂದು ನಮ್ಮನ್ನು ಏತಕ್ಕೆ ಟೀಕೆ ಮಾಡಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಗೌರವ ಇಲ್ಲ ಎಂದು ಹೇಳಿದೆನಾ ?

ಅಧ್ಯಕ್ಷರು,—ಇಬ್ಬರಿಗೂ ಅವರ ಬಗ್ಗೆ ಗೌರವ ಇದೆ. ಇಡೀ ದೇಶಕ್ಕೇ ಇದೆ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಹೇಳುತ್ತೇನೆ......

ಶ್ರೀ ರಾಮಕೃಷ್ಣ ಹೆಗಡೆ.—ಯಾರು ಯಾರ ಅಭಿಪ್ರಾಯ, ಯಾವ ವ್ಯಕ್ತಿ ವಿಚಾರದಲ್ಲಾಗಲೀ, ಸಂಸ್ಥೆ ವಿಚಾರದಲ್ಲಾಗಲೀ ಇದೆಯೋ ಅದರ ಬಗ್ಗೆ ಚರ್ಚೆ ಮಾಡತಕ್ಕ ಅಗತ್ಯ ಇಲ್ಲ. ಇಲ್ಲಿ ಅದನ್ನು ಪ್ರಸ್ತಾಪ ಮಾಡಿದ ಕಾರಣ ಇಷ್ಟೆ ; ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಸ್ಮಾರಕ ನಿಧಿಗೆ ಹಣ ಕೊಟ್ಟಿರುವುದರ ಬಗ್ಗೆ ಪುನಃ ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ನಾನು ಉತ್ತರ ಹೇಳಿದೆ. ಮೊದಲು ಕೇಳಿದಂಥ ಪ್ರಶ್ನೆ ಮಹತ್ವದ್ದು. ಅದಕ್ಕೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು.—ಶ್ರೀನಿವಾಸ್ ಅವರೇ ಕೂಡ್ರಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಹೇಳಬೇಕಾದ್ದು ಇನ್ನೊಂದು ಮಾತಿದೆ. ನಾನು ಮುಗಿಸಿ ಬಿಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಜನತಾ ವಲಯದ ವಿಚಾರ ಹೇಳಿದರು.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಮುಗಿಸುತ್ತೇನೆ. ಇದೂ ಮಹತ್ವದ್ದು. ೨೫ ಲಕ್ಷ ರೂಪಾಯಿ ಯಾವ ವ್ಯಕ್ತಿ ಬಗ್ಗೆ ಕೊಟ್ಟಿದ್ದಾರೋ ಅದಕ್ಕೆ ಇಡೀ ಸದನ ಮಾನ್ಯತೆ ಮಾಡುತ್ತದೆ. ಆದರೆ ಅವರ ಬಗ್ಗೆ ಏನು ಗೌರವ ಇದೆ ಅದನ್ನು ನಾವೂ ಕೂಡ ವ್ಯಕ್ತ ಮಾಡಬೇಕಾದ್ದು ನಮ್ಮ ಕರ್ತವ್ಯ ಇದೆ, ಶ್ರೀ ಮುರಾರ್ಜಿ ದೇಸಾಯಿ ಅವರು ಹೇಳಿದ ಮಾತನ್ನು ಏತಕ್ಕೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಶ್ರೀ ಜಯಪ್ರಕಾಶ್ ನಾರಾಯಣರ ಬಗ್ಗೆ ಏನು ಮಾತನಾಡಿದ್ದಾರೆ, ಅದರ ಬಗ್ಗೆ ಯಾರೂ ಕೂಡ ಖಂಡನೆ ಮಾಡಲಿಲ್ಲ. ಅವರು ಏನು ಹೇಳಿದ್ದಾರೆಂಬುದನ್ನು ಈ ಸದನದಲ್ಲಿ ಸ್ಪಷ್ಟ ಪಡಿಸಬೇಕಾಗುತ್ತದೆ.

SRI S. R. BOMMAI.—Sir, I may be permitted............

ಅಧ್ಯಕ್ಷರು.—ಶ್ರೀನಿವಾಸ್ ಅವರೇ ಅದು ಹೇಳುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕೂಡ್ರಿ ಸುಮ್ಮನೆ ಕಾಂಟ್ರವರ್ಸಿ ಮಾಡುತ್ತೀರಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಮಗೆ ಚಿಂತೆ ಬೇಡವೆ ? ಸದನಕ್ಕೆ ಮತ್ತು ನಮಗೆ ಗೌರವಿಸ ಬೇಕಾದ ಚಿಂತೆ ಬೇಡವೆ ? ಸುಮ್ಮನೆ ದುಡ್ಡು ಕೊಟ್ಟರೆ ಆಯಿತೇ ?

ಅಧ್ಯಕ್ಷರು.—ಕೂಡ್ರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್.........

ಶ್ರೀ ಕೆ. ಎಚ್. ಶ್ರೀನಿವಾಸ್.—ವಿಚಾರ ಇಲ್ಲದೆ ಪಾಯಿಂಟ್ ಆಫ್ ಆರ್ಡರ್ ಹೇಳಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಎಲ್ಲರಿಗೂ ಗೌರವ ಇದೆ. ಮುಖ್ಯಮಂತ್ರಿಗಳು.........

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುತ್ತೇನೆ ಕೇಳಿ. ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡುವಾಗ ಶ್ರೀ ಬಂಗಾರಪ್ಪ ನವರಿಗಾಗಲೀ, ವಿರೋಧಪಕ್ಷದವರಿಗಾಗಲೀ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಗೌರವ ಇಲ್ಲ ಎಂಬ ಮಾತನ್ನು ಹೇಳಿಲ್ಲ. ಅವರು ಏನು ಹೇಳಿದರೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ಸಮಾಜವಾದಿ ಪಕ್ಷದಿಂದ ಬಂದವರು, ಸಮಾಜವಾದಿ ಪಕ್ಷವನ್ನು ಸ್ಥಾಪನೆ ಮಾಡಿದ ಮಹಾನ್ ವ್ಯಕ್ತಿಗಳು ಜಯಪ್ರಕಾಶ್ ನಾರಾಯಣ್ ಅವರು ಎಂದು ಹೇಳಿದರು. ಶ್ರೀ ಬಂಗಾರಪ್ಪನವರಿಗೆ ಜೆ ಪಿ. ಯವರ ಬಗ್ಗೆ ಗೌರವ ಇಲ್ಲ ಎಂಬ ಮಾತನ್ನಾಗಲೀ, ವಿರೋಧ ಪಕ್ಷದವರಿಗೆ ಗೌರವ ಇಲ್ಲ ಎಂಬ ಮಾತನ್ನಾಗಲೀ ಎಲ್ಲೂ ಹೇಳಿಲ್ಲ. ಅಂಥ ಒಬ್ಬ ಮಹಾನ್ ವ್ಯಕ್ತಿ ಬಗ್ಗೆ ಮುರಾರ್ಜಿಯವರು ಏನು ಹೇಳಿದ್ದಾರೆ, ಮತ್ತೊಬ್ಬರು ಏನು ಹೇಳಿದ್ದಾರೆ ಎಂಬುದನ್ನು ಈ ಸಭೆಯಲ್ಲಿ ಓದಿ ಹೇಳುವುದಕ್ಕೆ ಅವಕಾಶ ಇಲ್ಲ.

(ಗೊಂದಲ)

ಅಧ್ಯಕ್ಷರು.—ಕೂಡ್ರಿ, ಮುಕ್ತಾಯ ಮಾಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುರಾರ್ಜಿಯವರು ಜೆ.ಪಿ. ಅವರ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಓದುವುದಕ್ಕೆ ಹೋದರೆ ಇಂದಿರಾಗಾಂಧಿಯವರ ಬಗ್ಗೆ ಮುರಾರ್ಜಿಯವರು ಏನು ಹೇಳಿದ್ದಾರೆ ಎಂಬುದನ್ನು ಹೇಳಬೇಕಾಗುತ್ತದೆ. ಆದ್ದರಿಂದ ಅದು ಅವಶ್ಯ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಏನು ಹೇಳುತ್ತಿದ್ದೇನೆಂದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಭೆಯ ಮುಂದೆ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಓದುವುದಕ್ಕೆ ಬರುವುದಿಲ್ಲ. ಆದ್ದರಿಂದ ಅದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ನಮಗೆ ಅದನ್ನು ಕೇಳಲು ಕುತೂಹಲ ಇದೆ.........

(ಗೊಂದಲ)

ಅಧ್ಯಕ್ಷರು.—ಕೂಡ್ರಿ, ನಾನು ಶ್ರೀ ಯಡಿಯೂರಪ್ಪನವರನ್ನು ಕರೆದಿದ್ದೇನೆ. ನೀವೇನಾದರೂ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂದು ನಾನು ಹೇಳ ಬೇಕಾಗುತ್ತದೆ. ಈ ಸದನದಲ್ಲಿ ೨೫ ಲಕ್ಷ ರೂಪಾಯಿ ಯಾರ ಹೆಸರಿನಲ್ಲಿ ಕೊಟ್ಟಿದ್ದಾರೆ, ಅವರ ಬಗ್ಗೆ ರಸ್ತೆ ಮೇಲೆ ಹೋಗುವವರು ಹೇಳಿದ್ದಲ್ಲ, ಯಾರು ಪ್ರಧಾನ ಮಂತ್ರಿಗಳಾಗಿದ್ದಾರೋ,

ಶ್ರೀ ಜಯಪ್ರಕಾಶ್ ನಾರಾಯಣರ ಚಳುವಳಿ ಕಾರಣದಿಂದ ಪ್ರಧಾನಿಯಾಗಿದ್ದರೋ, ಅಂಥವರು ಎಷ್ಟು ತುಚ್ಚವಾಗಿ ಶ್ರೀ ಜಯಪ್ರಕಾಶ್‌ನಾರಾಯಣರ ಬಗ್ಗೆ ಮಾತನಾಡಿದ್ದಾರೆ, ಅದು ಸರಿಯಲ್ಲ ಎಂದು ಮುಖ್ಯಮಂತ್ರಿಗಳು ಹೇಳದೇ ಹೋದರೆ 25 ಲಕ್ಷ ರೂಪಾಯಿ ಕೊಟ್ಟಿದ್ದಕ್ಕೆ ಏನು ಸಾರ್ಥಕತೆ ಬಂತು ? ಅಧ್ಯಕ್ಷರೇ, ಇದನ್ನು ನೀವು ಓದಿ ನೋಡಿದ್ದೀರಾ ?

(ಗೊಂದಲ)

ಶ್ರೀ ಕೆ.ಎಚ್. ಶ್ರೀನಿವಾಸ್.—ನನಗೂ ಕೂಡ ಇಲ್ಲಿ ಮಾತನಾಡಲು ಹಕ್ಕು ಇದೆ. 25 ಲಕ್ಷ ರೂಪಾಯಿಗಳನ್ನು ಕೊಟ್ಟಾಗ, ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಯಾರೇ ಲಘುವಾಗಿ ಮಾತನಾಡಿದರೂ ಅದನ್ನು ಖಂಡಿಸುವುದಕ್ಕೆ ಇಲ್ಲಿರುವ ಸದಸ್ಯರಿಗೆ ಹಕ್ಕು ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಜಯಪ್ರಕಾಶ್ ನಾರಾಯಣ್ ಅವರನ್ನು ಕೊಂದ ಜನರು ಇವರು.

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕೂಡಿ. Don't record. ಈಗ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

* * * *

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಕೆಲವು ವಿವರಗಳನ್ನು ಹಣಕಾಸಿನ ದೃಷ್ಟಿಯಿಂದ ಕೇಳತಕ್ಕದ್ದು ಸಹಜವಾಗಿರತಕ್ಕದ್ದು. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಗೌರವದ ಬಗ್ಗೆ ಚ್ಯುತಿ ತಂದಂತಹ ಅಭಿಪ್ರಾಯವನ್ನು ಖಂಡಿಸುತ್ತೇವೆಂದು ಸ್ಪಷ್ಟವಾಗಿ ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದಾರೆ. ಇದರಲ್ಲಿ ಯಾರ ಮನಸ್ಸಿಗೂ ನೋವು ಆಗುವುದಿಲ್ಲ. ಆದರೆ ಮಾನ್ಯ ಸಿಂಧ್ಯಾ ಅವರು ಜಯಪ್ರಕಾಶ್ ನಾರಾಯಣ್ ಅವರನ್ನು ಕೊಂದವರು ನೀವು ಎನ್ನತಕ್ಕದ್ದನ್ನು ಸ್ಪಷ್ಟವಾಗಿ ಹೇಳಿದರು ನೀವು ಎಂದರೆ, ನಮ್ಮ ಪಕ್ಷದವರ ಮೇಲೆ ಹೇಳಿದ್ದಾರೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ. ಇದು ನೂರಕ್ಕೆ ನೂರು ಸತ್ಯ. ಇದು ನೂರಕ್ಕೆ ನೂರು ಸತ್ಯ. ಇದು ನೂರಕ್ಕೆ ನೂರು ಸತ್ಯ. ಇದು ನೂರಕ್ಕೆನೂರು ಸತ್ಯ ಇದೆ. ಶ್ರೀ ಜಯಪ್ರಕಾಶ್ ನಾರಾಯಣ್ ಅವರನ್ನು ಕೊಂದವರೇ ಕಾಂಗ್ರೆಸ್ಸಿನವರು... .....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಈಗ ನೇರವಾಗಿ ಆಪಾದನೆಯನ್ನು... .. ...

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ. ಈ ಹಿಂದೆ ವಿರೋಧ ಪಕ್ಷದವರೆಲ್ಲಾ ಜೈಲಿಗೆ ಹೋದರು. ಆಗ ಮಾನ್ಯ ಬಂಗಾರಪ್ಪನವರು ಮಂತ್ರಿಗಳಾದರು. ಇಂತಹವರು ಈ ಸದನದಲ್ಲಿ ಸಮಾಜವಾದವನ್ನು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸುಮ್ಮನೆ ಇವರಿಗೆ ಎ ಬಿ ಸಿ ಡಿ ಗೊತ್ತಾಗುವುದಿಲ್ಲ ಇವರಿಗೆ ......

(ಗೊಂದಲ)

ಶ್ರೀ ಜಿ, ನಾರಾಯಣಕುಮಾರ್.—ದೇವರಾಜ ಅರಸ್ ಅವರಿಗೆ ಚೂರಿ ಹಾಕಿದವರು ಇವರು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸಮಾಜವಾದದ ಬಗ್ಗೆ ಅ, ಆ, ಇ, ಈ ಗೊತ್ತಿಲ್ಲ ಇವರಿಗೆ

(ಗೊಂದಲ)

ಶ್ರೀ ಜಿ ನಾರಾಯಣಕುಮಾರ್.—ಘನ ಪಂಡಿತರು ಇವರು,ಬಂಗಾರಪ್ಪನವರ ಬಗ್ಗೆ ನಮಗೇನೂ ಗೊತ್ತಿಲ್ಲವೇ ?

---

* Not recorded as ordered by the Chair

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ.........

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಬಂಗಾರಪ್ಪನವರೇ, ಗೋಪಾಲಗೌಡರನ್ನು ಏಕೆ ಸಾಯಿಸಿದಿರಿ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಿಮ್ಮ ಪಕ್ಕದಲ್ಲಿರುವ ರಮೇಶ್ ಕುಮಾರ್ ಅವರಿಗೆ ಕೇಳಿ. ನಾವು ಈಗ ವಿಷಯಕ್ಕೆ ಬರೋಣ. ಈಗ ನಮ್ಮ ಮುಂದೆ ಇರತಕ್ಕ ವಿಚಾರ, ಮಾನ್ಯ ಸಚಿವರು ನೇರವಾಗಿ ಮಾಡಿರತಕ್ಕ ಆಪಾದನೆ. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರನ್ನು ಕೊಂದಿರ ತಕ್ಕವರು ನೀವು ಎನ್ನುವ ರೀತಿ ಈ ಕಡೆ ಕೈ ತೋರಿಸಿ ನಮ್ಮ ಪಕ್ಷದ ಬಗ್ಗೆ ಹೇಳಿರತಕ್ಕ ಮಾತು. ಅವರು ಯಾವ ಅರ್ಥದಲ್ಲಿಯೇ ಹೇಳಿದ್ದರೂ ಸಹ ಅವರ ಅಭಿಪ್ರಾಯ ಆಗಿಲ್ಲ. ಇದು ನೇರವಾಗಿ ನಮಗೆ ಹೇಳಿರತಕ್ಕ ವಾಕ್ಯ ಈ ವಿಷಯವನ್ನು ನಮ್ಮ ಪಕ್ಷದ ಪರವಾಗಿ ನಾನು ಅಲ್ಲಗಳೆಯುತ್ತೇನೆ. ಇವತ್ತು ಜಯಪ್ರಕಾಶ್ ನಾರಾಯಣ್ ಅವರನ್ನು ಕೊಲ್ಲುವುದಕ್ಕೆ ನಾವೇ ಕಾರಣಕರ್ತರಾಗಿದ್ದರೆ ಅದು ಹೇಗೆ ಏನು ಎನ್ನುವುದರ ಬಗ್ಗೆ ವಿವರಣೆ ಕೊಟ್ಟರೆ ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಅದೂ ಕೂಡಾ ನನಗೆ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಅವರು ಜೈಲಿಗೆ ಹೋಗಿದ್ದರಿಂದ ಸತ್ತರು ಎನುವ ಹಾಗಿದ್ದರೆ, ನೀವೂ ಕೂಡಾ ಅಧಿಕಾರದಲ್ಲಿ ಇದ್ದಾಗ ಶ್ರೀಮತಿ ಇಂದಿರಾಗಾಂಧಿಯವರನ್ನು ಜೈಲಿಗೆ ಕಳುಹಿಸಿದ್ದೀರಿ. ಅಂದರೆ ನೀವೂ ಕೂಡಾ ಶ್ರೀಮತಿ ಇಂದಿರಾಗಾಂಧಿಯವರನ್ನು ಕೊಲ್ಲುವುದಕ್ಕೆ ಕಾರಣರಾಗಿದ್ದೀರೆಂಬ ಆಪಾದನೆಯನ್ನು ನಾನೂ ಕೂಡಾ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಆ ಮಾತನ್ನು ದಯವಿಟ್ಟು ಕಡತದಿಂದ ತೆಗೆಸಿಹಾಕದೇ ಇದ್ದರೆ ನಾಳೆ ಪತ್ರಿಕೆಗಳಲ್ಲಿ ಅದು ಬರುತ್ತದೆ. ಆದುದರಿಂದ ಸದನ ಮುಗಿಯುವುದರೊಳಗೆ ಅದನ್ನು ತರಿಸಿನೋಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ಜೆ.ಪಿ. ಅವರ ಬಗ್ಗೆ ಮೊರಾರ್ಜಿ ಅವರ ಅಭಿಪ್ರಾಯ ಏನು ಎಂಬುದನ್ನು ಬೇಕಾದರೆ ಓದಿ ಹೇಳುತ್ತೇನೆ.

ಅಧ್ಯಕ್ಷರು.—ಅದನ್ನು ಇಲ್ಲಿ ಓದುವುದೂ ಬೇಡ, ಹೇಳುವುದೂ ಬೇಡ.

(ಗೊಂದಲ)

ಶ್ರೀ ಎಂ. ರಘುಪತಿ.—ಅವರು ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಎಲ್ಲರಿಗೂ ಗೌರವ ಇದೆ. ಈ ಸದನ ಅವರ ಹೆಸರಿನಲ್ಲಿ ೨೫ ಲಕ್ಷ ರೂಪಾಯಿ ದತ್ತಿ ಕೊಡುವುದೇನೆಂದರೆ, ಈ ಸದನ ಅವರ ಬಗ್ಗೆ ಗೌರವ ವ್ಯಕ್ತಪಡಿಸಿದೆ ಎಂದು ಅರ್ಥ. ಅದಕ್ಕೆ ಅಡ್ಡಬರತಕ್ಕ ಪ್ರಶ್ನೆ ಇಲ್ಲ. ಆದರೆ ನಮ್ಮ ಪ್ರಶ್ನೆ ಏನೆಂದರೆ ಮತ್ತು ನಾವು ನಮ್ಮ ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ, ಬೀದಿಯಲ್ಲಿ ಹೋಗುವವರು ಮಾತನಾಡಿದರೆ ನಾವು ವಿವರಣೆಯನ್ನು ಕೇಳುತ್ತಾ ಇರಲಿಲ್ಲ. ಮುರಾರಜಿಯವರು ಪ್ರಧಾನಮಂತ್ರಿಗಳಾಗಿದ್ದರು. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಚಳುವಳಿಯ ಆಧಾರದ ಮೇಲೆ ಅಧಿಕಾರಕ್ಕೆ ಬಂದು ಒಂದು ಸರ್ಕಾರದ ಪ್ರಧಾನಮಂತ್ರಿಗಳಾದವರು ಅವರ ಬಗ್ಗೆ ಯಾವುದೇ ಒಂದು ಲೆವಲ್‌ನಲ್ಲಿ ಟೀಕೆ ಮಾಡಿದ್ದರೂ ಕೂಡಾ ನಾನು ಕೇಳುತ್ತಾ ಇರಲಿಲ್ಲ. ದಯವಿಟ್ಟು ತಾವು ಇದನ್ನು ಓದಿ. ನೀವು ನಿಮ್ಮ ಪ್ರಧಾನಮಂತ್ರಿಯಾಗಿದ್ದವರು ಈ ಮಾತನ್ನು ಹೇಳಿದ್ದರೂ ಅದನ್ನು ಒಬ್ಬರೂ ಖಂಡಿಸದೇ ಹೀಗೆ ಕೂತಿದ್ದರೆ ನಿಮಗೆ ಯಾವ ಭೂಷಣ ಇದೆ ಎಂದು ಕೇಳುತ್ತೇನೆ ? ಇದನ್ನು

ನಾನು ಮುಖ್ಯಮಂತ್ರಿಯವರಿಗೆ ಕೇಳುತ್ತೇನೆ. ಮಾನ್ಯ ಮುರಾರ್ಜಿ ದೇಸಾಯಿಯವರು ದೊಡ್ಡವರು. ಅವರ ಅಭಿಪ್ರಾಯ ಅವರಿಗೆ ಇದೆ. ಅದು ಬೇರೆ ವಿಚಾರ. ಆದರೆ ಈ ವಿಚಾರ ಸರಿಯಲ್ಲವೆಂದು ನೀವು ಅವರಿಗೆ ಹೇಳಬೇಕಾಗಿತ್ತು. ಈ ಸಭೆಯ ನಾಯಕರಾಗಿ, ನಮ್ಮ ರಾಜ್ಯದ ಮುಖ್ಯಮಂತ್ರಿಯವರಾಗಿ ಇದನ್ನು ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಎಂ. ರಘುಪತಿ.—ತಾವು ಬಹಳ ಬುದ್ಧಿವಂತರು ಸ್ವಾಮಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಇಲಸ್ಟ್ರೇಟೆಡ್ ವೀಕ್ಲಿಯಲ್ಲಿ ಬಂದಿರತಕ್ಕ ವಿಚಾರದ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ಅವರು ಹೇಳಿದ್ದು ಸರಿಯಾದ ರೀತಿಯಲ್ಲಿ ರಿಪೋರ್ಟ್ ಆಗಿದೆಯೋ ಅಥವಾ ವರದಿಯಲ್ಲಿ ದೋಷ ಇದೆಯೋ ಎಂದು ನನಗೆ ಗೊತ್ತಿಲ್ಲ. ಅದು ನಿಜವಾಗಿಯೂ ನೂರಕ್ಕೆ ನೂರು ಸರಿಯಾದ ರೀತಿಯಿಂದ ರಿಪೋರ್ಟ್ ಆಗಿದ್ದರೆ ಆ ಅಭಿಪ್ರಾಯ ಅವರ ವೈಯಕ್ತಿಕ ಅಭಿಪ್ರಾಯವೇ ಹೊರತು, ಅದು ನಮ್ಮ ಅಭಿಪ್ರಾಯ ಅಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದು ನಮ್ಮ ಪಕ್ಷದ್ದೂ ಅಲ್ಲ, ನಮ್ಮ ಸರ್ಕಾರದ್ದೂ ಅಲ್ಲ. ಆಮೇಲೆ ಯಾವುದೋ ಒಬ್ಬ ವ್ಯಕ್ತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಅಧಿಕಾರ ಪ್ರತಿಯೊಬ್ಬರಿಗೂ ಇದೆ. ಈ ಬಗ್ಗೆ ನಾನು ಮುರಾರಜಿ ದೇಸಾಯಿಯವರನ್ನು ಕೇಳದ ಹೊರತು ಇಲ್ಲಿ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಇವತ್ತೇ ಫೋನ್ ಮಾಡಿ ಅವರನ್ನು ಕೇಳುತ್ತೇನೆ. ಇನ್ನು ಎರಡನೆಯದಾಗಿ, ಜನತಾ ವಲಯ ಎಲ್ಲಿಗೆ ಹೋಯಿತು ಎಂದು ಕೇಳಿದ್ದಾರೆ. ಜನತಾ ವಲಯ ಎಲ್ಲೂ ಹೋಗಿಲ್ಲ. ಈ ಭಾಷಣದಲ್ಲಿ ಅದೇ ಶಬ್ದವನ್ನು ಉಪಯೋಗಿಸದೇ ಇದ್ದರೂ, ನಮ್ಮ ಪಂಚಾಯಿತಿ ರಾಜ್ಯದ ಹೊಸ ಸಂಸ್ಥೆಗಳು ಏನು ಬರುತ್ತವೆಯೋ ಅವುಗಳ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಜನತಾ ವಲಯ ಎಂದರೆ ಅದೇ. ಅದು ಬೇಗ ಅನುಷ್ಠಾನಕ್ಕೆ ಬರುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ ರೈತರಿಗೆ ಒಂದು ಅನುಕೂಲ ಆಗುವ ದೃಷ್ಟಿಯಿಂದ 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಸಿಗಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ, ಇದಕ್ಕೆ ನಬಾರ್ಡ್‌ನವರು ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಈ ಬಗ್ಗೆ ನಬಾರ್ಡ್‌ನವರ ಮನವೊಲಿಸುವ ಪ್ರಯತ್ನವನ್ನು ಮಾಡುತ್ತೀರಿ ಎನ್ನುವ ವಿಶ್ವಾಸ ನಮಗೆ ಇದೆ. ಈ ಒಂದು ಯೋಜನೆಯನ್ನು ಈ ವರ್ಷವೇ ಕಾರ್ಯರೂಪಕ್ಕೆ ತರಬೇಕೆಂದು ನಾನು ಹೇಳುತ್ತೇನೆ. ಇನ್ನು ಸುವೇಗ ಮತ್ತು ಮೋಟಾರ್ ಸೈಕಲ್‌ಗಳಿಗೆ ಕೆಲವು ಅನುಕೂಲಗಳನ್ನು ಮಾಡಿಕೊಟ್ಟಿರುವ ವಿಷಯ ನನಗೆ ತಿಳಿಯಿತು. ಇವತ್ತು ರೈತರು ಪವರ್ ಟಿಲ್ಲರ್‌ಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದು, ಎರಡು ಎತ್ತುಗಳು ಕೆಲಸ ಮಾಡುವಷ್ಟು ಕೆಲಸವನ್ನು ಇವು ಮಾಡುತ್ತವೆ. ಆದರೆ ಇವತ್ತು ಪವರ್ ಟಿಲ್ಲರ್ಸ್ ಬಗ್ಗೆ ಆರ್. ಟಿ. ಒ. ಕಛೇರಿಗಳಲ್ಲಿ ಇಲ್ಲದ ಸಲ್ಲದ ಕಿರುಕುಳಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಇವುಗಳ ಲೈಸೆನ್ಸ್ ನವೀಕರಣದ ಕಾಲದಲ್ಲಿ ಟ್ಯಾಕ್ಸ್ ಕಟ್ಟುವ ಕಾಲದಲ್ಲಿ ಬಹಳ ತೊಂದರೆಪಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಕಾನೂನಿನಲ್ಲಿಯೇ ತಿದ್ದುಪಡಿ ತಂದು ಇವುಗಳನ್ನು ಖರೀದಿ ಮಾಡುವ ಸಮಯದಲ್ಲೇ ಪೂರ್ತಿ ಟ್ಯಾಕ್ಸ್ ಪಡೆದುಕೊಳ್ಳುವ ಹಾಗೆ ವ್ಯವಸ್ಥೆ ಮಾಡಿದರೆ ರೈತ ಮತ್ತೆ ಮತ್ತೆ ಆರ್. ಟಿ. ಒ. ಕಛೇರಿಗಳಿಂದ ಕಿರುಕುಳ ಹೊಂದುವುದು ತಪ್ಪುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ ಈಗ ದ್ವಿಚಕ್ರ ವಾಹನದ ಬಗ್ಗೆ ಯಾವ ನೀತಿಯನ್ನು ಅನುಸರಿಸಿದ್ದೇವೆ ಅದೇ ನೀತಿಯನ್ನು ಈಗ......

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಪವರ್ ಟಿಲ್ಲರ್‌ಗೆ ನಮ್ಮ ರೈತನೇ ಚಾಲಕನಾಗಿರುತ್ತಾನೆ. ಬೇರೆ ಯಾವುದೇ ಸಹಾಯಕನನ್ನೂ ಆತ ತೆಗೆದುಕೊಳ್ಳುವುದಿಲ್ಲ. ಅವನು ತನ್ನ ಜಮೀನಿನಲ್ಲಿ ಬೆಳೆದಂಥ ಹುಲ್ಲು ಭತ್ತ, ಮುಂತಾದುವನ್ನು ಮನೆಗೆ ತರುವುದಕ್ಕೆ ಈ ಪವರ್ ಟಿಲ್ಲರನ್ನು ಉಪಯೋಗಿಸುತ್ತಾನೆ. ಆದ್ದರಿಂದ ಇದನ್ನು ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಸೇರಿಸುವುದು

ಬೇಡ. ಇದು ಆರ್. ಟಿ. ಒ.ಗೆ ಸಂಬಂಧ ಇರುವುದು ಬೇಡ. ಖರೀದಿ ಸಮಯದಲ್ಲಿ ಅದಕ್ಕೆ ಏನೇನು ಫೀ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ರೈತ ನೆಮ್ಮದಿಯಿಂದ, ಅದನ್ನು ಫ್ರೀ ಆಗಿ ಉಪಯೋಗಿಸುವಂತೆ ಮಾಡಬೇಕು.

ಇನ್ನು ಮೂರನೆಯದಾಗಿ ಮಾನ್ಯ ವಿರೋಧಪಕ್ಷದ ಕಡೆಯವರು ಒಂದು ವಿಚಾರವನ್ನು ಏತಕ್ಕೆ ಪ್ರಸ್ತಾಪ ಮಾಡಲಿಲ್ಲವೋ ಗೊತ್ತಿಲ್ಲ. ಕಳೆದ ಒಂದೆರಡು ವರ್ಷದಿಂದ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸುಸ್ತಿಬಡ್ಡಿಯನ್ನು ಮನ್ನಾ ಮಾಡುವ ಒಂದು ಐತಿಹಾಸಿಕ ನಿರ್ಣಯವನ್ನು ತಾವು ತೆಗೆದುಕೊಂಡಿರಿ. ರಾಜ್ಯದಲ್ಲಿ ಈಗ ವಿಚಿತ್ರ ಬರಗಾಲ ಕಾಡುತ್ತಿದೆ ಆ ಕಡೆಯವರು ಇದನ್ನು ಪ್ರಸ್ತಾಪ ಮಾಡುತ್ತಾರೆಂದು ನಾನು ಭಾವಿಸಿದ್ದೆ. ಬಹುಶಃ ನಮ್ಮ ಸರ್ಕಾರ ಇದಕ್ಕೆ......

ಶ್ರೀ ಕೆ. ಹೆಚ್. ಪಾಟೀಲ್.—ಅವರು ಉತ್ತರ ಕೊಡದಿದ್ದರೆ ನಾವು ಏನು ಮಾಡುವುದು ?

ಶ್ರೀ ಬಿ. ಎಸ್. ಯಡಿಯೂರಪ್ಪ —ಪ್ರಸ್ತಾಪ ಮಾಡಿದ್ದಾರಂತೆ. ಇರಲಿ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಈ ವರ್ಷದಿಂದಲೇ ರೈತರು ಕೊಡಬೇಕಾದ ಸುಸ್ತಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದ್ದರೆ ಈ ಬರಗಾಲ ಪರಿಸ್ಥಿತಿಯಲ್ಲಿ ಅವರು ಬದುಕುವುದಕ್ಕೆ ಸಾಧ್ಯವಾಗುತ್ತಿತ್ತು. ಇಷ್ಟೇ ಅಲ್ಲ. ನಾನು ಪವರ್ ಟಿಲ್ಲರ್ ಬಗ್ಗೆ ಕೂಡ ಸ್ಪಷ್ಟವಾಗಿ ಹೇಳತಕ್ಕದ್ದೇನೆಂದರೆ, ಅವನು ಅದನ್ನು ಉಪಯೋಗ ಮಾಡಿಕೊಳ್ಳಲಿ. ಆದರೆ ಅವನಿಗೆ ಇಲ್ಲಸಲ್ಲದ ಕಿರುಕುಳವನ್ನು ಆರ್. ಟಿ. ಒ. ಕಚೇರಿಯಲ್ಲಿ ಕೊಡುತ್ತಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ......

ಶ್ರೀ ರಾಮಕೃಷ್ಣ ಹೆಗಡೆ.– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪವರ್ ಟಿಲ್ಲರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳೋಣ.

ಇನ್ನು ಎರಡನೆಯದಾಗಿ, ಕಡಿಮೆ ಬಡ್ಡಿಯಲ್ಲಿ ರೈತರಿಗೆ ಸಾಲವನ್ನು ಕೊಡಬೇಕೆಂದು ನಾವು ಒಂದು ಹೊಸ ಯೋಜನೆಯನ್ನು ಮಾಡಿಕೊಂಡಿದ್ದೇವೆ. ಇದರ ಬಗ್ಗೆ ನಾನು ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಮತ್ತು ಕೇಂದ್ರದ ಮಾನ್ಯ ಹಣಕಾಸಿನ ಮಂತ್ರಿಗಳ ಹತ್ತಿರ ಮಾತನಾಡಿ ಅವರಿಗೆ ಒಂದು ಸೂಚನೆಯನ್ನು ಮಾಡಿದ್ದೇನೆ. ಅದೇನೆಂದರೆ, ಅಗ್ರಿಕಲ್ಚರಲ್ ಕ್ರೆಡಿಟ್ ವಿಚಾರದಲ್ಲಿ ಒಂದು ಪ್ರತ್ಯೇಕವಾದಂಥ ಸಭೆಯನ್ನು ಕರೆದು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳೂ ಸೇರಿದಂತೆ, ನಬಾರ್ಡ್ ಅಧ್ಯಕ್ಷರು, ರಿಸರ್ವ್ ಬ್ಯಾಂಕ್‌ನ ಅಧ್ಯಕ್ಷರು ಮತ್ತು ಸಂಬಂಧಪಟ್ಟ ಸಂಸ್ಥೆಗಳ ಅಧ್ಯಕ್ಷರ ಜೊತೆ ಸಮಾಲೋಚನೆ ಮಾಡಬೇಕೆಂದು ನಾನು ಸೂಚನೆ ಮಾಡಿದ್ದೇನೆ. ಅವರೂ ಕೂಡ ನಾವು ಕರೆಯುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅಲ್ಲಿಂದ ಇದರ ಬಗ್ಗೆ ಒಂದು ಉತ್ಸಾಹದಾಯಕ ಪ್ರತಿಕ್ರಿಯೆ ಬರುತ್ತದೆಂದು ನಾನು ನಂಬಿದ್ದೇನೆ.

ಇನ್ನು ಮೂರನೆಯದಾಗಿ, ಸುಸ್ತಿ ಸಾಲದ ಬಗ್ಗೆ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದು ಎಷ್ಟಾಗುತ್ತದೆಂದು ನನಗೆ ಗೊತ್ತಿಲ್ಲ. ಅದು ಗೊತ್ತಿಲ್ಲದೆ ಹೇಳುವುದು ಕಷ್ಟವಾಗುತ್ತದೆ. ಅದನ್ನು ಪರಿಶೀಲಿಸಿ ನೋಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸನ್ಮಾನ್ಯ ಅಧ್ಯಕ್ಷರೆ......

(ಗೊಂದಲ)

ಅಧ್ಯಕ್ಷರು. ತಾವು ದಯವಿಟ್ಟು ಕೂಡಿ. ಈ ರೀತಿ ವಿತರಣೆಯನ್ನು ಕೇಳುವುದಕ್ಕೆ ಆ ಕಡೆಯ ಸದಸ್ಯರೂ ಉತ್ಸುಕರಾಗಿದ್ದಾರೆ. ಈ ಕಡೆಯ ಸದಸ್ಯರೂ ಉತ್ಸುಕರಾಗಿದ್ದಾರೆ. ಆದರೆ ಈಗ ಕಾಲಾವಕಾಶ ಇಲ್ಲ. ಆದ್ದರಿಂದ ಮುಂದೆ ಡಿಮ್ಯಾಂಡ್ ಬಂದಾಗ ಅದರಮೇಲೆ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಸಾಕಷ್ಟು ಅವಕಾಶ ಇದೆ. ಇದುವರೆಗೆ ಏನು ಚರ್ಚೆ ನಡೆದಿದೆ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿಗೆ ಇದು ಮುಕ್ತಾಯವಾಯಿತು. ಇನ್ನು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ಈಗ ಮಾನ್ಯ ಸದಸ್ಯರಾದ ಮಾನೆಯವರು ಪ್ರಶ್ನೆಯನ್ನು ಕೇಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಹಿಂದೆ ತಾವು ಏನು ಹೇಳಿದ್ದೀರಿ ಎಂಬುದನ್ನು ರೆಕಾರ್ಡ್ ತೆಗೆದು ನೋಡಿ. ಯಾರಿಗೆ ಈ ಚರ್ಚೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಿಲ್ಲ ಅವರಿಗೆ ಮುಖ್ಯ ಮಂತ್ರಿಗಳ ಉತ್ತರದ ನಂತರ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆಂದು ತಾವೇ ಹೇಳಿದ್ದೀರಿ.

ಅಧ್ಯಕ್ಷರು.—ಯಾರಿಗೆ ಮಾತನಾಡುವುದಕ್ಕೆ ಅವಕಾಶ ಆಗುತ್ತದಿಲ್ಲ ಅವರಿಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ನೀತಿ ಒಳ್ಳೆಯದಲ್ಲ.

ಅಧ್ಯಕ್ಷರು.—ನಾವು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಏನು ಡಿಮ್ಯಾಂಡ್ ಮೇಲೆ ಅವಕಾಶ ಮಾಡಿಕೊಡುತ್ತೀರಾ ?

(ಗೊಂದಲ)

ಅಧ್ಯಕ್ಷರು.—ನಿಮ್ಮ ಪಕ್ಷದ ಸದಸ್ಯರಿಗೆ ಮ್ಯಾಕ್ಸಿಮಂ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ತಾವು ಸಮಾಧಾನ ಮಾಡಿಕೊಳ್ಳಿ. ಈಗ ಮಾನ್ಯ ಮಾನೆ ಅವರು ೯೦೪ನೇ ಪ್ರಶ್ನೆಯನ್ನು ಕೇಳ ಬಹುದು.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ನಾವು ಮಾತನಾಡಬೇಕೆಂದು ಕೇಳಿದಾಗ ತಾವು ಅವಕಾಶವನ್ನು ಕೊಡಲಿಲ್ಲ. ಆದ್ದರಿಂದ ಈಗ ಕ್ಲಾರಿಫಿಕೇಷನ್ ಆದರೂ ಕೇಳುವುದಕ್ಕೆ ತಾವು ಅವಕಾಶವನ್ನು ಕೊಡಲೇಬೇಕು.

(ಗೊಂದಲ)

ಅಧ್ಯಕ್ಷರು.—ಲಕ್ಷ್ಮೀಸಾಗರ'ರವರೇ, ಮಾನ್ಯ ಮಾನೆಯವರ ಪ್ರಶ್ನೆಗೆ ಉತ್ತರವನ್ನು ಕೊಡಿ...

(ಗೊಂದಲ)

ಅಧ್ಯಕ್ಷರು.—ಯಾವ ಸದಸ್ಯರು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈ ತರಹ ಗಲಾಟೆ ಮಾಡಿದರೆ ಆಗುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೆ, ನಮಗೆ ಸ್ವಲ್ಪ ತಾಳ್ಮೆ ಇದೆ......

ಅಧ್ಯಕ್ಷರು.—ನಾನು ಈಗಾಗಲೇ ಪ್ರಶ್ನೆಯನ್ನು ಕೇಳುವಂತೆ ಸದಸ್ಯರನ್ನು ಕರೆದಿದ್ದೇನೆ. ಈಗ ನಿಮಗೆ ಕ್ಲಾರಿಫಿಕೇಷನ್ ಕೇಳುವುದಕೆ ಅವಕಾಶ ಕೊಟ್ಟರೆ ಬೇರೆಯವರಿಗೂ ನಾನು ಅವಕಾಶವನ್ನು ಕೊಡಬೇಕಾಗುತ್ತದೆ. ಮುಂದೆ ಡಿಮ್ಯಾಂಡ್ ಬಂದಾಗ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗಾಗಲೇ ಮುಂದೆ ಹೋಗಿದ್ದೇವೆ. ಮತ್ತೆ ಹಿಂದಕ್ಕೆ ಹೋಗುವುದು ಬೇಡ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ನನ್ನ ಮಾತನ್ನು ಕೇಳಿ. ಎಲ್ಲರಿಗೂ ಅವಕಾಶ ಕೊಡುತ್ತೇನೆ ಅವರಿಗೂ ವಿವರಣೆ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ತಾಳ್ಮೆ ಎಂಬುದೇ ಇಲ್ಲ.

ಅಧ್ಯಕ್ಷರು.—ಬಂಗಾರಪ್ಪನವರೇ ನನಗೆ ತಾಳ್ಮೆ ಇದೆ. ತಮಗೂ ಇದೆ.

ಶ್ರೀ ಎಸ್. ಬಂಗಾರಪ್ಪ.—ಭಾಷಣ ಮಾಡಲು ಯಾರಿಗೆ ಅವಕಾಶ ಸಿಕ್ಕುವುದಿಲ್ಲ ಅವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ತಾವೇ ಹೇಳಿದ್ದೀರಿ. ಆದರೆ ಈಗ ಅವಕಾಶವನ್ನು ಕೊಡುತ್ತಿಲ್ಲ. ಅಂದರೆ ನಿಮ್ಮ ಮಾತಿಗೆ ನೀವೇ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರಿ.

ಅಧ್ಯಕ್ಷರು.—ನಾನು ಸಾಧ್ಯವಾದಷ್ಟೂ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಈಗ ಮಾನ್ಯ ದೇವೇಗೌಡರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪಕ್ಷದವರು ಮಾತನಾಡಲು ಎದ್ದುನಿಂತರೆ ನಿಮಗೆ ಆಗುವುದಿಲ್ಲ ಏಕೆ ?

(ಗೊಂದಲ)

ಅಧ್ಯಕ್ಷರು.—ನಾನು ನಿಮ್ಮ ಪಕ್ಷದವರಿಗೆ ಮ್ಯಾಕ್ಸಿಮಮ್ ಟೈಮ್ ಕೊಟ್ಟಿದ್ದೇನೆ. ಮಾನ್ಯ ಬಂಗಾರಪ್ಪನವರೇ ಈ ರೀತಿ ನೀವು ನನ್ನನ್ನು ಹೆದರಿಸುವುದನ್ನು ಬಿಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಒಂದು ಮಾತನ್ನು ತಮಗೆ ಸ್ಪಷ್ಟಪಡಿಸುತ್ತಿದ್ದೇನೆ.

ಅಧ್ಯಕ್ಷರು.—ತಾವು ಈ ರೀತಿ ನನ್ನನ್ನು ಹೆದರಿಸುವುದನ್ನು ಬಿಟ್ಟುಬಿಡಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ, ಎಲ್ಲರ ಮೇಲೂ ನೀವು ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಬಂಗಾರಪ್ಪನವರೇ, ತಾವು ಹೇಳುವುದನ್ನು ಸಾವಧಾನವಾಗಿ ಹೇಳಿ. ಆದರೆ ಈ ರೀತಿ ಏತಕ್ಕೆ ಸಿಟ್ಟಿಗೆ ಏಳುತ್ತೀರಿ ? ಮಾನ್ಯ ದೇವೇಗೌಡರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ಸಮಾಧಾನವಾಗಿ ಕುಳಿತುಕೊಳ್ಳುವುದಕ್ಕೆ ಆಗುವುದೇ ಇಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಸಮಾಧಾನವಾಗಿ ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕಾನಡೆಯವರೇ, ಮತ್ತು ಮಾನ್ಯ ರತ್ನಾಕರ್‌ರವರೇ ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಏನು ಹೇಳುತ್ತಾರೆ ಅದನ್ನು ಸಾವಧಾನದಿಂದ ಕೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆ ಕಡೆಯವರಿಗೂ ಹೇಳಿ, ಈ ಕಡೆಯವರಿಗೆ ನಾನು ಹೇಳುತ್ತೇನೆ. ನೀವು ಹೀಗೆ ರೂಲಿಂಗ್ ಕೊಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಹೌಸ್ ಅಭಿಪ್ರಾಯ ಎಂದಿರಿ. ಹೌಸ್ ಅಭಿಪ್ರಾಯ ಏನು ?

ಅಧ್ಯಕ್ಷರು.—ಹೌಸ್ ಅಭಿಪ್ರಾಯ............

(ಗೊಂದಲ)

ಹೌಸ್ ಅಭಿಪ್ರಾಯ ಕೇಳಿರಿ. ನಾನು ಹೇಳಿದ ತಕ್ಷಣ ಅವರೆಲ್ಲರೂ ಸುಮ್ಮನೆ ಆದರೂ......

ಶ್ರೀ ಎಸ್. ಬಂಗಾರಪ್ಪ.—ಏನು ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಸಭೆಯನ್ನು ನಡೆಸಿ ಬಿಡಿ. ಬೇರೆ ಯಾರನ್ನೂ ಕೇಳುವುದು ಬೇಡ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ವಿರೋಧಪಕ್ಷದ ಸಹಕಾರ ನಿಮಗೆ ಬೇಡವೇ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ ಎಂದು ಕೇಳಿದ್ದೀರಿ. ಅವಕಾಶ ಕೊಡುತ್ತೇನೆ.

(ಗೊಂದಲ)

ಮಾನ್ಯ ಬಂಗಾರಪ್ಪನವರೇ ಮತ್ತೆ ಅವಕಾಶ ಕೊಡಿ ಎಂದು ಕೇಳುವುದಕ್ಕೇ ಹತ್ತಿದ್ದೀರಿ ಹೌದ ಸ್ವಲ್ಪ ಕೇಳಿ. ನನ್ನ ರೂಲಿಂಗ್‌ನ್ನು ರಿವೈಸ್ ಮಾಡಬೇಕೆಂದರೆ ಮಾಡುತ್ತೇನೆ. ಈಗ ಮಾನ್ಯ ಲಕ್ಷ್ಮೀಸಾಗರ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಏನು ಹೇಳುತ್ತಾರೆಂಬುದನ್ನು ಕೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವೇನು ಹತ್ತು ಜನರಿಗೆ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಕೇಳಲಿಲ್ಲ. ಯಾರು ಭಾಷಣ ಮಾಡಲಿಲ್ಲ ಅವರಿಗೆ ಅವಕಾಶವನ್ನು ಕೊಡಿ ಎಂದು ಕೇಳಿದೆವು. ನಮಗಿರತಕ್ಕಂಥ ಹಕ್ಕನ್ನು ಇಲ್ಲಿ ಚಲಾಯಿಸಲು ನಮಗೆ ಹಕ್ಕಿಲ್ಲವೇ ?

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ಈ ರೀತಿ ಮಾಡಿದರೆ ಸಭೆಯನ್ನು ನಡೆಸಲು ಕಷ್ಟವಾಗುತ್ತದೆ. ಈಗ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಏನು ಹೇಳುತ್ತಾರೋ ಅದನ್ನು ದಯವಿಟ್ಟು ಕೇಳಿ. ಬೇರೆ ದಿವಸ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆಂದು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ನನ್ನದೊಂದು ಕ್ರಿಯಾಲೋಪ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಈ ರೀತಿ ಸಭೆಯನ್ನು ನಡೆಸಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. I am very sorry. ನೀವು ಹೀಗೆ ಮಾಡಿದರೆ ಸದನವನ್ನು ಹೇಗೆ ನಡೆಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಕ್ರಿಯಾಲೋಪವೆತ್ತಿದ್ದಾರೆ. ನಾನು ಅದಕ್ಕೆ ಅಲೋ ಮಾಡಿದ್ದೇನೆ.

(ಗೊಂದಲ)

MR. SPEAKER.—Nothing will go on record.

SRI S. BANGARAPPA.—We care two hoots for this record.

(*Interruption*)

(As directed by the Chair nothing was recorded at this Stage.)

(ಗೊಂದಲ)

ಅಧ್ಯಕ್ಷರು.—ನಾವು ಅವರು ಹೇಳುವುದನ್ನು ಕೇಳಿಸಿಕೊಳ್ಳಬಾರದು ಎಂದು ಬಂಗಾರಪ್ಪನವರೇ, ತಾವು ಈ ರೀತಿಯಾಗಿ ಮಾತನಾಡತಕ್ಕಂಥದ್ದು ಸರಿಯಲ್ಲ. ನಿಮಗೆ ನಾನು ವಾರ್ನಿಂಗ್ ಕೊಡುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು ನಾನು ನಿಮಗೆಲ್ಲರಿಗೂ ಹೇಳುತ್ತಿದ್ದೇನೆ ಅಧ್ಯಕ್ಷರು ಎದ್ದುನಿಂತಾಗ ತಾವು ಎಲ್ಲರೂ ಕುಳಿತುಕೊಳ್ಳಬೇಕು. ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ ತಾವು ಕುಳಿತುಕೊಳ್ಳಲಿಲ್ಲ ಎಂದರೆ ನೋಡಿ I have to.........

SRI. S. BANGARAPPA.— ಏನು I have to ಎಂದರೆ ಏನು ?

MR. SPEAKER.—I have to advice you once again ಎಂದು ಅದರ ಅರ್ಥ, ತಾವು ಕೇಳಿರಿ, ಅವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದನ್ನು ಕೇಳಿರಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ. ಅದೇನೆಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಈ ಬಗ್ಗೆ ತೀರ್ಮಾನವಾಗಿರುತ್ತದೆ ಯಾರು ಯಾರು ಎಷ್ಟೆಷ್ಟು ಕ್ಲಾರಿಫಿಕೇಷನ್ ಕೇಳಬೇಕೆಂದಿರುತ್ತಾರೋ ಅದನ್ನು ಕೇಳಲು ಅವರಿಗೆ ಹಕ್ಕಿರುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ಅವರ ಬಡ್ಜೆಟ್ ಭಾಷಣದ ಮೇಲೆ ಉತ್ತರವನ್ನು ಕೊಟ್ಟಿರುತ್ತಾರೆ. ತಾವು ಎರಡು ಮೂರು ದಿವಸಗಳ ಹಿಂದೆಯೂ ಕೂಡ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ ಯಾರಿಗೆ ಮಾತನಾಡಲು ಅವಕಾಶ ಸಿಗಲಿಲ್ಲ ಅಂಥವರಿಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ಸಚಿವರ ಉತ್ತರವಾದ ಮೇಲೆ ಕ್ಲಾರಿಫಿಕೇಷನ್ ಕೇಳತಕ್ಕಂಥದ್ದು ಒಂದು ಸತ್‌ಸಂಪ್ರದಾಯ ಅದಕ್ಕೆ ಯಾವ ಮಿತಿಯೂ ಕೂಡ ಇರುವುದಿಲ್ಲ ಅದು ಒಂದುಗಂಟೆಯಾದರೂ ಆಗಬಹುದು, ಅಥವಾ ಅರ್ಧಗಂಟೆಯಲ್ಲಾದರೂ ಮುಗಿಯಬಹುದು, ಮಾನ್ಯ ಮುಖ್ಯಮಂತ್ರಿಗಳೂ ಸಹ ಅನೇಕ ಗಹನವಾದ ವಿಷಯಗಳನ್ನು ಹೇಳಿದ್ದಾರೆ. ಆದರೂ ಅನೇಕರಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶವಾಗಲಿಲ್ಲ ಆ ಕಡೆ ಕುಳಿತವರಿಗೂ ಆಗಲಿಲ್ಲ. ಈ ಕಡೆ ಕುಳಿತವರಿಗೂ ಅವಕಾಶವಾಗಲಿಲ್ಲ, ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತಿರುವಾಗಲೇ ಮಾನ್ಯ ಸದಸ್ಯರಾದ ಮಾನೆಯವರನ್ನು ಪ್ರಶ್ನೆ ಕೇಳಲು ಕರೆದು ಬಿಟ್ಟಿರಿ, ಅವರು ಎದ್ದು ನಿಂತರು ಇದರಿಂದ ಈ ಒಂದು ಪರಿಸ್ಥಿತಿ ಬಂದಿತು. ಬೇರೆ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆಂದರೆ ಆದರಿಂದ ಏನು ಪ್ರಯೋಜನವಾಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಬೇರೆಯವರು ಅಂದರೆ ಮಾನ್ಯ ಲಕ್ಷ್ಮೀಸಾಗರ್‌ರವರಾಗಲಿ, ಮಾನ್ಯ ದೇವೇಗೌಡರಾಗಲಿ ಉತ್ತರವನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ ಅದ್ದರಿಂದ ಈವತ್ತು ಮಧ್ಯಾಹ್ನಕ್ಕೋ ಅಥವಾ ನಾಳೆಗೋ ಪ್ರಶ್ನೆಗಳನ್ನು ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ.........

(ಗೊಂದಲ)

ಅಧ್ಯಕ್ಷರು.—ನಾನು ಮಂತ್ರಿಯವರನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಕೇಳೋಣ. ಈ ರೀತಿ ಎಲ್ಲರೂ ಮಾತನಾಡುವುದು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕಂಥ ಜವಾಬ್ದಾರಿ ಮತ್ತು ಹಕ್ಕು ತಮಗೆ ಸೇರಿರತಕ್ಕದ್ದು.

ಒಬ್ಬರು ಮಾನ್ಯ ಸದಸ್ಯರು.—ನಮಗೂ ಹಕ್ಕಿದೆ. ಹಕ್ಕಿಲ್ಲದೆ ನಾವು ಇಲ್ಲಿ ಬಂದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕ ಸಮಯದಲ್ಲಿ ತಮ್ಮ ನಿರ್ದೇಶನದಂತೆ ಈ ಸಭೆಯ ಕಾರ್ಯಕಲಾಪಗಳು ನಡೆಯುತ್ತವೆ. ಇದು ಅನೂಚಾನವಾಗಿ ನಡೆದುಕೊಂಡು ಬಂದಿರತಕ್ಕಂಥ ವಿಚಾರ ಸಭೆಯ ಕಾರ್ಯಕಲಾಪಗಳು ಯಾವ ಹಂತದಲ್ಲಿ ಹೇಗೆ ನಡೆಯಬೇಕು, ಎಷ್ಟರ ಮಟ್ಟಿಗೆ ಸದಸ್ಯರಿಗೆ ಅವಕಾಶ ಕೊಡಬೇಕು ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು...... ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ತಾವು ತೀರ್ಮಾನ ಕೊಟ್ಟಮೇಲೆ ತಮ್ಮದೇ ಅಂತಿಮ ತೀರ್ಮಾನ. ಅದರ ಮೇಲೆ ಅಪೀಲ್ ಇಲ್ಲ, ರಿವಿಜನ್ ಇಲ್ಲ. ಆದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ಕಾರಣದಿಂದ ತಮ್ಮನ್ನು ಡಿಸ್‌ಒಬೇ ಮಾಡತಕ್ಕಂಥ ರೀತಿಯಲ್ಲಿ ಅವಾಚ್ಯ ಶಬ್ದಗಳನ್ನು ಹೇಳಿರತಕ್ಕದು.........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅವಾಚ್ಯ ಶಬ್ಧಗಳೆಂದು ಯಾವ ಅರ್ಥದಲ್ಲಿ ಹೇಳುತ್ತೀರಿ ? ಹೇಳದೇ ಇದ್ದುದನ್ನು ತೋರಿಸುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಾನು, ಶ್ರೀ ಬೊಮ್ಮಾಯಿ ಮತ್ತು ಶ್ರೀ ದೇವೇಗೌಡರೂ ಕೂಡ ಅದೇ ಸ್ಥಾನದಲ್ಲಿ ಕೂತು ಕೆಲಸ ಮಾಡಿದ್ದೇವೆ ಅನೇಕ ಕಷ್ಟಯುತವಾದಂಥ ಸನ್ನಿವೇಶಗಳಲ್ಲಿ ಪ್ರಶ್ನೆಗಳನ್ನು ಇಲ್ಲಿ ಹಾಕಿದ್ದೇವೆ ಅನೇಕ ವಿಷಯಗಳ ಮೇಲೆ ಚರ್ಚೆ ಮಾಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಕೂಡ ವಿರೋಧ ಪಕ್ಷದ ನಾಯಕರು ಸರ್ಕಾರದ ನೀತಿ ಎಷ್ಟೇ ಕಠಿಣ್ಯವಾಗಿರಲಿ, ಅಥವಾ ವಿರೋಧವಾಗಿ ನಮಗೆ ಕಂಡುಬಂದಂಥ ಸಮಯದಲ್ಲೂ, ಮಾನ್ಯ ವಿರೋಧ ಪಕ್ಷದ ಇಂದಿನ ನಾಯಕರು ಹೇಗೆ ನಡೆದುಕೊಂಡಿದ್ದಾರೆ, ಆ ರೀತಿ ನಾವು ಯಾವತ್ತೂ ನಡೆದುಕೊಂಡಿರಲಿಲ್ಲ ಆ ಜಾಗಕ್ಕೆ ಅವರು ಅವಮಾನ ಮಾಡಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಮತ್ತು ಸಭಾಧ್ಯಕ್ಷರ ಮೇಲೆ ಅವಾಚ್ಯ ಶಬ್ದಗಳನ್ನು, ಅಸಭ್ಯ ಶಬ್ಧಗಳನ್ನು ಪುಂಖಾನು ಪುಂಖವಾಗಿ ಉಪಯೋಗಿಸಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಆದ್ದರಿಂದ ಅವರು ಹೇಳಿರತಕ್ಕಂಥ ಎಲ್ಲಾ ಶಬ್ದಗಳನ್ನು ಕಡತದಿಂದ ತೆಗೆದು ಹಾಕಬೇಕು. ತತ್‌ಕ್ಷಣ ಈ ಬಗ್ಗೆ ತಾವು ಕ್ರಮತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ತಮಗೂ ಕೂಡ ಸಹನೆಗೆ ಒಂದು ಮಿತಿ ಇದೆ. ತಾವು ಕೂಡ ಬಹಳ ಸಂಯಮದಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರನ್ನು ಪ್ರತಿಯೊಂದು ಹಂತದಲ್ಲೂ ಕೂಡ ಅವರ ಸಹಕಾರ ತೆಗೆದುಕೊಂಡು ಹೋಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುತ್ತಿದ್ದೀರಿ. ಒಂದೊಂದು ಸಲ ನಮಗೂ ಕೂಡ ಕಸಿವಿಸಿ ಆದರೂ ಸಹಿತ ....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ತಾವು ಸಹನೆಯಿಂದ ನಡೆದುಕೊಂಡು ಹೋಗುತ್ತೀರೆಂದು ನಾವೂ ಸಹ ಅನೇಕ ಸಲ ನಮ್ಮ ಮೆಚ್ಚುಗೆಯನ್ನು ನಿಮ್ಮ ವಿಚಾರದಲ್ಲಿ ವ್ಯಕ್ತಪಡಿಸಿದ್ದೇವೆ. ಆದರೆ ಈ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ನಡೆದುಕೊಂಡ ರೀತಿ ಮತ್ತು ಅವರ ಸ್ನೇಹಿತರು ಕೆಲವರು ಹೇಳಿದಂಥ ಮಾತುಗಳು ಸಭೆಗೆ ಶೋಭೆಯನ್ನು ತರತಕ್ಕದ್ದಲ್ಲ. ಅವರು ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನಕ್ಕೆ ಸಂಪೂರ್ಣವಾಗಿ ಅವಮಾನ ಮಾಡಿದ್ದಾರೆ. ಆ ಸ್ಥಾನಕ್ಕೆ ಮಸಿಬಳಿದಿದ್ದಾರೆ ಎಂದು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಅವರು ಕೂಡ ವಿರೋಧ ಪಕ್ಷದಲ್ಲಿ ಕೆಲವು ಕಾಲ ಇದ್ದು ಕೆಲಸ ಮಾಡಿದವರು ಬಹುಕಾಲ ಅವರು ವಿರೋಧಪಕ್ಷದಲ್ಲಿದವರು. ಅವರು ಸಮಾಜವಾದಿ ಪಕ್ಷದ ಸದಸ್ಯರಾಗಿ ಈ ಸಭೆಗೆ ಬಂದಲಾಗಾಯ್ತು ವಿರೋಧ ಪಕ್ಷದಲ್ಲೇ ಹೆಚ್ಚು ಕಾಲ ಇದ್ದವರು ವಿರೋಧ ಪಕ್ಷ ಯಾವರೀತಿ ನಡೆಯಬೇಕು. ನಿಯಮಾವಳಿಗಳ ಪ್ರಕಾರ ವಿರೋಧ ಪಕ್ಷದ ನಾಯಕರ ಒಂದು ಸ್ಥಾನಮಾನ ಏನು, ಅವರ ಗೌರವ ಏನು ಎಂಬುದನ್ನು ಈ ದಿನ ಮರೆತು.........

ಶ್ರೀ ಬಿ. ಸ್ವಾಮಿರಾವ್.— ಅಧ್ಯಕ್ಷರೇ, ನನ್ನದೂ ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.........

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಅವರು ಇವತ್ತು ಗಾಳಿಗೆ ತೂರಿಬಿಟ್ಟಿದ್ದಾರೆ. ಅವರಿಗೆ ಸಂಸದೀಯ ವ್ಯವಹಾರಗಳಲ್ಲಿ ನಂಬಿಕೆ ಇಲ್ಲ, ಅಧ್ಯಕ್ಷರ ಬಗ್ಗೆ ನಂಬಿಕೆ ಇಲ್ಲ. ಈ ಸಭೆಯ ಕಾರ್ಯಕಲಾಪಗಳಲ್ಲಿ ನಂಬಿಕೆ ಇಲ್ಲ. ಸಭೆಯಲ್ಲಿ ಗೊಂದಲ ಉಂಟುಮಾಡಬೇಕು ಮತ್ತು ಸಣ್ಣ ಸಣ್ಣ ವಿಷಯಗಳನ್ನು ಅವರು ಬೃಹದಾಕಾರ ಮಾಡಿ ಈ ಸಭೆಯ ಕಾರ್ಯಕಲಾಪಗಳು ಮುಂದೆ ಹೋಗದಂತೆ ಮಾಡುವ ನಿಶ್ಚಯ ಮಾಡಿಕೊಂಡು ಬಂದಿರತಕ್ಕಂಥ ಒಂದು ವರ್ತನೆಯನ್ನು ಈ ದಿನವಂತೂ ಇಲ್ಲಿ ಚೆನ್ನಾಗಿ ತೋರಿಸಿಕೊಟ್ಟಿದ್ದಾರೆ. ಇದಕ್ಕೆ ಈ ಸಭೆಯಲ್ಲಿ ಅವಕಾಶ ಇಲ್ಲ. ಆಳತಕ್ಕಂಥ ಪಕ್ಷದವರು, ನಾವು, ಇಲ್ಲಿ ನಾವು ಹೇಳಿದಂಥ ಮಾತಿಗೆ ಗೌರವ ಸಿಗಬೇಕಾಗುತ್ತದೆ, ಅದನ್ನು ಅವರು ಮರೆಯುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ ಆದ್ದರಿಂದ ನಾನು ಅವರಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಅವರ ನಾಟಕ, ದೊಂಬರಾಟ ಇಲ್ಲಿ ನಡೆಯುವುದಿಲ್ಲ, ಈ ದೊಂಬರಾಟ ನಡೆಯುವುದಿಲ್ಲ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ಸಂಸದೀಯ ವ್ಯವಹಾರಗಳ ಈ ಒಂದು ಕೆಲಸಕ್ಕೆ ಸಂಪೂರ್ಣವಾಗಿ ಚ್ಯುತಿಗೊಳಿಸತಕ್ಕಂಥ ರೀತಿಯಲ್ಲಿ, ಇದನ್ನು ಮೂಲೆಗೊತ್ತತಕ್ಕಂಥ ರೀತಿಯಲ್ಲಿ, ಇದನ್ನು ದಮನ ಮಾಡತಕ್ಕಂಥ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ, ಇದಕ್ಕೆ ಅವಕಾಶವನ್ನು ನಾವು ಕೊಡುವುದಿಲ್ಲವೆಂದು ನಾನು ಸರ್ಕಾರದ ಪರವಾಗಿ ಅವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ ಹಾಗೂ ನಮ್ಮ ಪಕ್ಷದ ಪರವಾಗಿ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಬಂಗಾರಪ್ಪನವರ ಆಟ ಬಹಳ ದಿವಸ ನಡೆಯುವುದಿಲ್ಲ. ಅವರು ಏನು ಮಾಡುತ್ತಾರೋ ನೋಡೋಣ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅವರು ಹೇಳಿದ ಅವಾಚ್ಯ ಶಬ್ದಗಳನ್ನು ಕಡತದಿಂದ ತೆಗೆದುಹಾಕಬೇಕು. ಸಂಸದೀಯ ವ್ಯವಹಾರಗಳ ರೀತ್ಯಾ ತಾವು ತಮ್ಮ ಕೆಲಸ ನಿರ್ವಹಿಸಬೇಕು. ಮತ್ತು ಸ್ಪೀಕರ್ ಹೇಳಿದ ತೀರ್ಮಾನಕ್ಕೆ ಬದ್ಧವಾಗಿ ಇಲ್ಲಿ ಕೆಲಸ ಮಾಡಲೇ ಬೇಕಾಗುತ್ತದೆ. ಅದು ಬಿಟ್ಟು ಬೇರೆ ದಾರಿ ಇಲ್ಲವೇ ಇಲ್ಲ.........
He said "who cares for you". Is he a dictator here ? Is he going to direct ? We have the mandate of the people with us. It has been renewed.

SRI S. BANGARAPPA.—Sir, what is his point of order ?

(Interruption)

SRI A. LAKSHMISAGAR.—We have the mandate of the people. Let him remember this. He shall not be allowed to misbehave.

(Interruption)

Leader of the House (Leader of the Opposition) may be a tall man, may be an important man but he shall not be allowed to dictate terms so far as your decisions are concerned. Your words are final. Your d cisions are final. I want you to protect the interest of this House and interest of the members rights and your authority to be prevailed and nothing should be done to sully the honour and the prestige of this House. This is my point of order.

ಅಧ್ಯಕ್ಷರು.—ಅವರು ಹೇಳಿದ್ದಾರೆ, ಇವರೂ ಹೇಳಿದ್ದಾರೆ. ಪಾಯಿಂಟ್ ಆಫ್ ಆರ್ಡರ್‌ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎರಡು-ಮೂರು ವಿಷಯಗಳ ಮೇಲೆ ತಮ್ಮ ಕ್ರಿಯಾಲೋಪವನ್ನು ಎತ್ತಿದ್ದಾರೆ. ಒಂದು ತಮಗೆ ಇರತಕ್ಕಂಥ ..

ಶ್ರೀ ಕೆ ಎಚ್. ಪಾಟೀಲ್.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಏನೆಂದರೆ, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ತಮ್ಮ ಸ್ಥಳದಲ್ಲಿ ಇಲ್ಲದೇ ಇರುವಾಗ...

ಅಧ್ಯಕ್ಷರು.—ಅವರು ತಮ್ಮ ಜಾಗವನ್ನು ಬದಲಾಯಿಸಲು ನನ್ನ ಅನುಮತಿ ಕೇಳಿದ್ದಾರೆ. ನಾನು ಅನುಮತಿಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಸ್ವಲ್ಪ ಸ್ಥಾನಪಲ್ಲಟ ಆಗಿದೆ ಅಷ್ಟೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಕೆಲವು ಕಾರಣಗಳ ಮೇಲೆ ಕ್ರಿಯಾಲೋಪ ಎತ್ತಿದ್ದಾರೆ ಅದಕ್ಕೆ ತಾವು ರೂಲಿಂಗ್ ಕೊಡಬೇಕಾಗಿದೆ. ತಮಗಿರುವಂತಹ ಅಧಿಕಾರಗಳ ಬಗ್ಗೆ ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ. ತಾವು ಇಲ್ಲಿ ಒಂದು ಸಲ ತೀರ್ಪನ್ನು ಕೊಟ್ಟರೆ ಅದನ್ನು ಮಾರ್ಪಾಡು

ಮಾಡಲು ಇಲ್ಲಿ ಯಾರಿಗೂ ಅಧಿಕಾರ ಇಲ್ಲ. ಆದ್ದರಿಂದ ಇಲ್ಲಿ ತಮಗೆ ಪರಮೋಚ್ಚವಾದಂಥ ಅಧಿಕಾರ ಇದೆ. ಈ ಸಭೆಯನ್ನು ನಡೆಸಲು ನಾವು ಏನು ಕೆಲವು ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ, ಅವು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗುತ್ತವೆ. ಅದರ ಪ್ರಕಾರ ಇಲ್ಲಿ ಮಾನ್ಯ ಸದಸ್ಯ ರಾದಂಥ ಶ್ರೀ ಕೃಷ್ಣನ್ ಅವರು ಎತ್ತಿರುವಂತಹ ವಿಚಾರದ ಬಗ್ಗೆ ನಾನು ಪ್ರತಿಪಾದನೆ ಮಾಡುವುದಾದರೆ ಈ ಆಯವ್ಯಯ ಪತ್ರದ ಮೇಲೆ ಸಾಮಾನ್ಯ ಚರ್ಚೆ ನಡೆದ ಸಂದರ್ಭದಲ್ಲಿ ಎಲ್ಲ ಮಾನ್ಯ ಸದಸ್ಯರು ಆ ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಾಗ, ತಾವು ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ವಿವರಣೆ ಕೇಳಲು ಅವಕಾಶ ಮಾಡಿಕೊಡುವುದಾಗಿ ತಾವು ಹೇಳಿದ್ದರ ಹಿನ್ನೆಲೆಯಲ್ಲಿ ಕೆಲವು ಮಾನ್ಯ ಸದಸ್ಯರು ವಿವರಣೆ ಕೇಳಲು ಅವಕಾಶ ಕೇಳಿದಾಗ, ತಾವು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದಾಗಿ ಹೇಳಿದಿರಿ. ಆದರೆ ಬೇಡಿಕೆಗಳ ಮೇಲಿನ ಚರ್ಚೆ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅದೇ ಆಯವ್ಯಯ ಪತ್ರದ ಮೇಲಿನ ಚರ್ಚೆಯಾದರೆ ಎಲ್ಲ ಇಲಾಖೆ ಗಳಿಗೂ ಸಂಬಂಧಪಟ್ಟಂತೆ ಮಾತನಾಡತಕ್ಕಂಥ ಒಂದು ಅವಕಾಶ ಇರುತ್ತದೆ. ಆದ್ದರಿಂದ ಇದರ ಒಂದು ವ್ಯಾಪ್ತಿ ಮತ್ತು ಪ್ರಶ್ನೆ ಮಾಡುವ ಅವಕಾಶ ದೊಡ್ಡದಾಗಿರುತ್ತದೆ. ಆದರೆ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಎಲ್ಲ ಅಂಶಗಳನ್ನು ಪ್ರಸ್ತಾಪ ಮಾಡುವುದಕ್ಕೆ ಯಾವುದೇ ಪಕ್ಷದ ಸದಸ್ಯರಿಗೂ ಅವಕಾಶ ಇರುವುದಿಲ್ಲ. ಆಯವ್ಯಯಪತ್ರದ ಸಾಮಾನ್ಯ ಚರ್ಚೆಯಲ್ಲಿ ಸಹ ಎಲ್ಲರಿಗೂ ಭಾಗವಹಿಸು ವುದಕ್ಕಾಗುವುದಿಲ್ಲ. ಈ ರೀತಿ ಭಾಗವಹಿಸಲು ಸಾಧ್ಯವಾಗದ ನಾಲ್ಕಾರು ಜನ ಮಾನ್ಯ ಸದಸ್ಯರುಗಳು ಕೆಲವೊಂದು ವಿವರಣೆ ಕೇಳಲು ಪ್ರಯತ್ನ ಮಾಡಿದಾಗ...

ಶ್ರೀ ಡಿ.ಟಿ. ಜಯಕುಮಾರ್.—ಎಲ್ಲರಿಗೂ ಅವಕಾಶ ಸಿಗದಿರುವುದಕ್ಕೆ ಅವರೇ ಕಾರಣ. ನಿನ್ನೆ ದಿವಸ ನಿಲುವಳಿ ಸೂಚನೆಯನ್ನು ತಂದು ಹೆಚ್ಚಿನ ಸಮಯವನ್ನು ಅದಕ್ಕಾಗಿ ವ್ಯರ್ಥ ಮಾಡಿದರು. ಇಲ್ಲದಿದ್ದರೆ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತಿತ್ತು.

ಶ್ರೀ ಜಿ. ನಾರಾಯಣಕುಮಾರ್.—ವಿರೋಧ ಪಕ್ಷದ ನಾಯಕರಿಗೆ ಗೌರವ ಇಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶ್ರೀ ನಾರಾಯಣಕುಮಾರ್ ಅವರು ಎಂತಹ ಸದಸ್ಯರು ಎಂಬ ಬಗ್ಗೆ ಮಾನ್ಯ ಅಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿರುವುದರಿಂದ ನಾವುಗಳು ಯಾರೂ ಅವರ ಮಾತಿಗೆ ಬೆಲೆ ಕೊಡಬೇಕಾದ ಅವಶ್ಯಕತೆ ಇಲ್ಲ. ಇಲ್ಲಿ ಕೆಲವು ಮಾನ್ಯ ಸದಸ್ಯರಿಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೇಲೆ ನಾವು ಒತ್ತಡ ತಂದ ಸಂದರ್ಭದಲ್ಲಿ, ನಾವು ಹೇಳಿದ ಯಾವ ಮಾತುಗಳೂ ದಾಖಲೆಗೆ ಹೋಗುವುದಿಲ್ಲವೆಂಬ ಮಾತನ್ನು ತಾವು ಹೇಳಿದಿರಿ. ಆಗ ನಾನು ಹೇಳಿದ್ದು ದಾಖಲೆಗಳಿಗೆ ಹೋಗದಿದ್ದರೆ "I care two hoots for you" ಎಂದು. ನಮಗೆ ಮಾತನಾಡಲು ಸಾಕಷ್ಟು ಕಾಲಾವಕಾಶ ಕೊಡಬೇಕೆಂದು ನಿಮ್ಮ ಮೇಲೆ ಸಾಕಷ್ಟು ಒತ್ತಡವನ್ನು ತರುತ್ತೇವೆ ಈ ರೀತಿ ತಮ್ಮ ಮೇಲೆ ಒತ್ತಡ ತಂದಾಗ ನೀವು ಮಾತನಾಡಲು ಅವಕಾಶ ಮಾಡಿಕೊಟ್ಟಿ ದ್ದೀರಿ. ಇಲ್ಲಿ ನಮ್ಮ ಹಕ್ಕುಗಳನ್ನು ಚಲಾವಣೆ ಮಾಡುವಂತಹ ಸಂದರ್ಭದಲ್ಲಿ ನಾನು ಕೆಲವು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದೆ ಎಂದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಮತ್ತು ಅಂತಹ ಶಬ್ದಗಳನ್ನು ನಾನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ಆದರೆ ನಾನು ಹಿಂದಕ್ಕೆ ತೆಗೆದುಕೊಳ್ಳುವಂತಹ ಯಾವ ಅವಾಚ್ಯ ಶಬ್ದಗಳನ್ನೂ ಇಲ್ಲಿ ಆಡಿಲ್ಲ. ಈ ಹಿಂದೆಯೂ ಸಹ ನಾನು ಅಂತಹ ಶಬ್ದಗಳನ್ನು ಬಳಸಿಲ್ಲ. ತಮ್ಮ ಮೇಲೆ ಒತ್ತಡ ತರುವಂತಹ ಕಾಲದಲ್ಲಿ ನನ್ನ ಧ್ವನಿಯಲ್ಲಿ ವ್ಯತ್ಯಾಸವಾಗಿರಬಹುದೇ ಹೊರತು ನಾನು ಬಳಸುವಂತಹ ಶಬ್ದಗಳ ಮೇಲೆ ನನಗೆ ಹತೋಟಿ ಇದ್ದೇ ಇರುತ್ತದೆ. ಇಲ್ಲದಿದ್ದರೆ ನಾನು ಇಷ್ಟರಹೊತ್ತಿಗೆ ಬಹಳ ಹಿಂದಕ್ಕೆ ಹೋಗಬೇಕಾಗಿತ್ತು. ನಾನು ಇಲ್ಲಿ ಮಾತನಾಡಿದಂಥ ದಾಟಿಯ ಏರಿಳಿತದ ಆಧಾರದ ಮೇಲೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನನ್ನ ಈ ಹಿಂದಿನ ಪೂರ್ವ ಚರಿತ್ರೆಯನ್ನು ಸಹ ಸ್ವಲ್ಪಮಟ್ಟಿಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಇಲ್ಲಿ ಸರ್ವಾಧಿಕಾರಿ ತರಹ ಇದ್ದೇನೆಂದು ಅವರು ಹೇಳಿದ್ದಾರೆ ಆದರೆ ಸರ್ವಾಧಿಕಾರಿ ತರಹದಲ್ಲಿ ಇಲ್ಲಿ ಮಾತುಗಳನ್ನು ಆಡತಕ್ಕಂಥ...

ಶ್ರೀ ಎಂ. ಎಸ್ ಕೃಷ್ಣನ್. – ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈಗತಾನೆ ಮಾತನಾಡುವಾಗ '.The leader of the House cannot become the dictator of the House'' ಎಂದು ಹೇಳಿದರು. ಅವರು ಆ ರೀತಿ ಏತಕ್ಕೆ ಹೇಳಿದರೋ ನನಗೆ ಗೊತ್ತಿಲ್ಲ. ಅವರು ಆ ರೀತಿ ಹೇಳಿರುವುದರಿಂದ ತಾವು ಅದಕ್ಕೆ ಏತಕ್ಕೆ ಉತ್ತರ ಕೊಡುತ್ತೀರಿ ?

ಶ್ರೀ ಎಸ್ ಬಂಗಾರಪ್ಪ. – ಅವರು ಆ ರೀತಿ ಹೇಳಿದ್ದರೆ ಅದನ್ನು ಮಾನ್ಯತೆ ಮಾಡಬೇಕಾಗುತ್ತದೆ ಒಂದು ವೇಳೆ ಅವರು ನನ್ನ ವಿಚಾರದಲ್ಲಿ ಆ ರೀತಿ ಹೇಳಿದ್ದರೆ ನಾನು ಇಲ್ಲಿ ಸರ್ವಾಧಿಕಾರ ಮಾಡುವುದಕ್ಕೆ ಬಂದಿಲ್ಲ ಎಂದು ನಾನು ಅವರಿಗೆ ಹೇಳಬಯಸುತ್ತೇನೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಒಂದು ಮಾತನ್ನು ಹೇಳಿದರು, ಏನೆಂದರೆ, ತಮಗೆ ಬಹುಮತವಿರುವುದರಿಂದ ತಾವು ಸರ್ಕಾರ ನಡೆಸುತ್ತಿದ್ದೇವೆ, ಈ ಕಾರಣದಿಂದ ಅವರು ಹೇಳಿದಂತೆ ನಾವುಗಳು ಕೇಳಬೇಕು ಎಂದು, ಆ ರೀತಿ ಅವರು ಹೇಳುವುದಾದರೆ You cannot become the dictator of this House ಎಂದು ನಾನು ಅವರಿಗೆ ಹೇಳಬೇಕಾಗುತ್ತದೆ. ಇಲ್ಲಿ ಯಾವುದೇ ಪದಪ್ರಯೋಗ ಮಾಡುವಾಗ ಅವರಿಗೆ ಪದ ಪ್ರಯೋಗದ ಪ್ರಾಥಮಿಕ ಪ್ರಜ್ಞೆ ಇರಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಪ್ರಜ್ಞೆ ಇದೆಯೇ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇದೆಲ್ಲಾ ಇಲ್ಲಿ ನಡೆಯುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್. – ವಿರೋಧಪಕ್ಷದ ನಾಯಕರು ರಾಜಕೀಯ ಪ್ರಜ್ಞೆ ಇಲ್ಲದೆ ಬೇಜವಾಬ್ದಾರಿಯಿಂದ ಇಲ್ಲಿ ಮಾತನಾಡುತ್ತಿದ್ದಾರೆ. ಅಧ್ಯಕ್ಷರು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಸಭೆಯಿಂದ ಹೊರಗಡೆ ಹಾಕಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಗೌರವ ಕೊಟ್ಟು ಇಲ್ಲಿ ಮಾತನಾಡುತ್ತಿದ್ದೇನೆ. ಆದ್ದರಿಂದ...

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ. ಇಲ್ಲಿ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ, ಮಾನ್ಯ ನಾರಾಯಣಕುಮಾರ್ ಅವರು ಇಲ್ಲಿ ಪದೇ ಪದೇ ಎದ್ದು ನಿಂತು ಬಹಳ ಅಸಭ್ಯ ರೀತಿಯಲ್ಲಿ ಮಾತನಾಡುತ್ತಾರೆ. ಅವರು ಆ ರೀತಿ ಮಾತನಾಡಲು ಅವಕಾಶ ಕೊಡಬಾರದೆಂದು ನಾನು ತಮ್ಮಲ್ಲಿ ಕೈ ಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡಿದ ಬಗ್ಗೆ ನಮ್ಮ ವಿರೋಧ ಏನಿಲ್ಲ. ಅವರು ಮಾತನಾಡುವಾಗ ಅಲ್ಪಸ್ವಲ್ಪ ಶಬ್ದಗಳ ವ್ಯತ್ಯಾಸ ಬಂತು, ಅದನ್ನು ಬಿಟ್ಟರೆ ಅವರು ಬೇರೆ ಏನನ್ನೂ ಹೇಳಲಿಲ್ಲ. ಆದರೆ ಮಾನ್ಯ ನಾರಾಯಣಕುಮಾರ್ ಅವರು ವಿರೋಧ ಪಕ್ಷದ ನಾಯಕರಿಗೆ *** ಹತ್ತಿದೆ ಎಂದು ಹೇಳುವುದು ಸರಿಯೇ ? ಈ ರೀತಿಯೆಲ್ಲಾ ಅವರು ಇಲ್ಲಿ ಮಾತನಾಡುವುದು ಸರಿಯಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಹಾಗಿದ್ದರೆ ಅವರು ಈ ಸದನದಲ್ಲಿ ಈ ರೀತಿಯೆಲ್ಲಾ ಪುಂಡಾಟಿಕೆ ಮಾಡುವುದು ಸರಿಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂಥ ಕೆಲವು ಮಾತುಗಳನ್ನು ರೆಕಾರ್ಡಿನಿಂದ ತೆಗೆಸಿ ಹಾಕಬೇಕು.

ಅಧ್ಯಕ್ಷರು.—ಅವರು ಅಂತಹ ಮಾತುಗಳನ್ನು ಏನಾದರು ಆಡಿದ್ದರೆ, ನಾನು ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ. ಮೊನ್ನೆ ದಿವಸ ಕೂಡ ಇಲ್ಲಿ ಕೆಲವರು ಹೇಳಿದಂಥ ಕೆಲವು ಮಾತುಗಳನ್ನು ಎಕ್ಸ್‌ಪಂಜ್ ಮಾಡಿಸಿದ್ದೇನೆ,

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಕೆಲವರು ಮಾತನಾಡುವಾಗ ಒಬ್ಬರಿಗೊಬ್ಬರು 'ನೀನು' 'ತಾನು' ಎಂದೆಲ್ಲಾ ಮಾತನಾಡುತ್ತಾರೆ. ಆ ರೀತಿ ಏಕವಚನದಲ್ಲಿ ಇಲ್ಲಿ ಯಾರಿಗೂ ಮಾತನಾಡಲು

*** Expunged as ordered by the chair.

ತಾವು ಅವಕಾಶ ಕೊಡಬಾರದು ಮತ್ತು ಅಂತಹ ಪದಗಳು ಏನಾದರು ರೆಕಾರ್ಡಿನಲ್ಲಿದ್ದರೆ, ಅದನ್ನು ಸಹ ತಾವು ಎಕ್ಸ್‌ಪಂಜ್ ಮಾಡಿಸಬೇಕು.

ಅಧ್ಯಕ್ಷರು.—ಆಗಲಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ವಿರೋಧ ಪಕ್ಷವು ಘನತೆ ಗೌರವದಿಂದ ಕೆಲಸ ಮಾಡಬೇಕೆಂದು ಹೇಳುವ ವಿಚಾರವನ್ನು ಯಾರೂ ನಮಗೆ ಹೇಳಿ ಕೊಡಬೇಕಾಗಿಲ್ಲವೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮೊದಲು ಆಡಳಿತ ಪಕ್ಷದವರು ಘನತೆ ಗೌರವದಿಂದ ಉತ್ತರ ಕೊಡುವುದನ್ನು ಕಲಿತು ಕೊಳ್ಳಲಿ. ಇವರು ಆಡಳಿತಕ್ಕೆ ಬಂದ ಮೇಲೆ ಸದನದ ಘನತೆ ಗೌರವ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಹೈ ಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟ ಮೇಲೆ ಈ ಸರ್ಕಾರದ ಪರಿಸ್ಥಿತಿ ಏನಾಯಿತೆಂದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ತಾವು ನೈತಿಕವಾಗಿ ತಮ್ಮ ಹೊಣೆಗಾರಿಕೆಯನ್ನು ಮೊದಲು ಅರಿಯಬೇಕು,

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಮಾತನಾಡಿ, ಆಮೇಲೆ ನಾನು ರೂಲಿಂಗ್ ಕೊಡ ತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ಕೃಷ್ಣನ್‌ರವರು ಒಂದು ಅಭಿಪ್ರಾಯವನ್ನು ಕೊಟ್ಟರು. ಮಾನ್ಯ ಮುಖ್ಯ ಮಂತ್ರಿಯವರು ಸದನದಿಂದ ಹೊರಟುಹೋಗಿದ್ದಾರೆ. ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಅವರಲ್ಲಿ ವಿವರಣೆಗಳನ್ನು ಕೇಳ ಬೇಕಾಗಿತ್ತು. ಆದರೆ ಅವರೇ ಸದನದಲ್ಲಿ ಇಲ್ಲ, ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರಗಳ ಸಮಸ್ಯೆ ಗಳ ಬಗ್ಗೆ ವಿವರಣೆಗಳನ್ನು ಕೇಳಬೇಕಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ಸದನದಲ್ಲಿ ಇಲ್ಲ ಎಂದರೆ ಅವರು ಯಾರನ್ನು ಕೇಳುವುದು ? ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರನ್ನು ತಾವು ಈಗ ಕರೆಸಿ ಮಾನ್ಯ ಸದಸ್ಯರುಗಳಿಗೆ ಉತ್ತರವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡಿದರೆ ಬಹಳ ಒಳ್ಳೆಯದು.

ಶ್ರೀ ಜಿ. ನಾರಾಯಣಕುಮಾರ್.—ನೀವು ಹೇಳಿದ ಹಾಗೆ ಕೇಳುವುದಕ್ಕಲ್ಲ ಈ ಸದನ ಇರುವುದು.

(ಗೊಂದಲ)

ಅಧ್ಯಕ್ಷರು.—ನಾರಾಯಣಕುಮಾರ್‌ರವರೇ, ನಿಮಗೆ ಎಷ್ಟು ಸಾರಿ ಹೇಳುವುದು. ನೀವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ. – ಮಾನ್ಯ ಕೃಷ್ಣನ್‌ರವರು ಹೇಳಿದಹಾಗೆ, ಮತ್ತೊಂದು ದಿವಸವನ್ನು ವಿವರಣೆ ಕೇಳುವುದಕ್ಕೆ ಇಟ್ಟರೆ ಒಳ್ಳೆಯದು. ಇದನ್ನು ನಮಗೇ ಬಿಟ್ಟಿದ್ದೇವೆ ತಾವು ತೀರ್ಮಾನವನ್ನು ಮಾಡಬೇಕು.

ಅಧ್ಯಕ್ಷರು.—ವಿವರಣೆಯನ್ನು ಕೇಳುವುದಕ್ಕೆ ಎಲ್ಲಾ ಮಾನ್ಯ ಸದಸ್ಯರಿಗೂ ಅವಕಾಶ ಮಾಡಿಕೊಡ ಬೇಕು ಎನ್ನುವುದೇ ನನ್ನ ಉದ್ದೇಶ. ನಾನು ಸಹ ಶಾಸಕನಾಗಿದ್ದಾಗ, ನನಗೂ ಅವಕಾಶ ಕೊಡಿ, ನನಗೂ ಅವಕಾಶ ಕೊಡಿ ಎಂದು ಕೇಳುತ್ತಿದ್ದದ್ದು ನನಗೂ ಗೊತ್ತಿದೆ. ಈ ಕಡೆಯ ೧೦–೧೫ ಜನ ಶಾಸಕರು ವಿವರಣೆಯನ್ನು ಕೇಳುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದರು. ಆ ಕಡೆಯ ೧೦–೧೫ ಜನ ಶಾಸಕರು ಸಹ ವಿವರಣೆಯನ್ನು ಕೇಳುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದರು. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂಬುದು ನನ್ನ ಆಸೆ. ಆದರೆ ಸಮಯ ಸಾಕಷ್ಟು ಇಲ್ಲದೇ ಇರುವುದರಿಂದ ಎಲ್ಲರಿಗೂ ಅವಕಾಶ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದಂಥ ಘಟನೆ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ಮಾನ್ಯ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಜೆಟ್ ಮೇಲಾಗಲೀ, ಗೌರ್ನರ ಭಾಷಣದ ಮೇಲಾಗಲೀ ಎಲ್ಲಾ ಮಾನ್ಯ ಸದಸ್ಯರುಗಳೂ ಭಾಷಣ ಮಾಡುವುದಕ್ಕಾಗುವುದಿಲ್ಲ. ಡಿಮ್ಯಾಂಡ್ ಮೇಲೂ ಸಹ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ. ಸದನದ ಇತಿಹಾಸವನ್ನು ನೋಡಿದರೆ ಯಾವ ವಿಷಯದ ಮೇಲೂ ಎಲ್ಲಾ ೨೨೪ ಸದಸ್ಯರು ಮಾತನಾಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದು ಗೊತ್ತಾಗುತ್ತದೆ. ಒಂದು ವಿಷಯದ ಮೇಲೆ ಸುಮಾರು ೧೦ ರಿಂದ ೨೦ ಸದಸ್ಯರವರೆಗೆ ಮಾತನಾಡಬಹುದು. ನೀವು ಉಳಿದಂಥ ಎಲ್ಲರಿಗೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಸಮಯ ಕೊಡುತ್ತೇನೆಂದರೆ ಅದಕ್ಕಾಗಿ ೨ ದಿನಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಶ್ರೀಮಾನ್ ಕೃಷ್ಣನ್‌ರವರು ಹೇಳಿದ ಹಾಗೆ ಯಾವುದಾದರು ಒಂದು ವಿಷಯದ ಬಗ್ಗೆ ಸಂಬಂಧಪಟ್ಟ ಸದಸ್ಯರುಗಳು ಸ್ಪಷ್ಟೀಕರಣ ಕೇಳುವಾಗಲೂ ಸಹ ಅದಕ್ಕೂ ಕೂಡ ನೀವು ಕಾಲ ಮಿತಿಯನ್ನು ಹಾಕುವ ಅಧಿಕಾರ ತಮಗೆ ಇದೆ. ಶ್ರೀಮಾನ್ ಬಂಗಾರಪ್ಪನವರು, ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಹಾಗು ಇನ್ನೂ ೪-೬ ಜನ ಸದಸ್ಯರುಗಳಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನೂ ಕೆಲವಾರು ಸದಸ್ಯರುಗಳು ಕ್ಲಾರಿಫಿಕೇಷನ್ ಕೇಳಬೇಕೆಂದು ಪ್ರಯತ್ನ ಪಟ್ಟಾಗ ತಾವು ಮುಂದಿನ ಕಾರ್ಯಕಲಾಪಕ್ಕೆ ಹೋಗಿದ್ದರಿಂದ ಈ ಗೊಂದಲ ಪ್ರಾರಂಭವಾಯಿತು. ಈ ಸದನದ ಗೌರವವನ್ನು ಎತ್ತಿ ಹಿಡಿಯುವುದು ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳೆರಡೂ ಒಂದುಗೂಡಿದಾಗ ಮಾತ್ರ ಸಾಧ್ಯವಾಗುತ್ತದೆ. ಅವರ ಸಹಕಾರ ಅಥವಾ ನಮ್ಮ ಸಹಕಾರ ಇಲ್ಲದಿದ್ದರೆ ಸದನದ ಗೌರವವನ್ನು ಎತ್ತಿ ಹಿಡಿಯುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ತಾವು ಕೂಡ್ರಿ

ಶ್ರೀ ಹೆಚ್. ಡಿ. ದೇವೇಗೌಡ.—ಇವತ್ತು ಆದಂತ ಎಲ್ಲಾ ಘಟನೆಯನ್ನು ನಾನು ಕುಳಿತು ನೋಡುತ್ತಿದ್ದೇನೆ, ನನಗಂತೂ ಇದರಿಂದ ಬಹಳ ವ್ಯಥೆಯಾಗುತ್ತದೆ. ನಾವುಗಳು ಸದನದಲ್ಲಿ ಕುಳಿತುಕೊಳ್ಳುವುದಕ್ಕೇ ನಾಲಾಯಕ್, ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯತೆಯೇ ಇಲ್ಲವೇನೋ ಎಂದೆನಿಸುತ್ತದೆ. ಇದರಿಂದ ಯಾರು ಬೇಸರ ಮಾಡಿಕೊಳ್ಳುವುದು ಬೇಡ. ವಿರೋಧ ಪಕ್ಷದ ನಾಯಕರು ಎದ್ದು ನಿಂತು ಮಾತನಾಡುವುದಕ್ಕೆ ಪ್ರಯತ್ನ ಮಾಡಿದಾಗ ಈ ಸದನದಲ್ಲಿ ಯಾರೂ ಚಕಾರ ಎತ್ತದಂತಹ ಸಂಪ್ರದಾಯವನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಹಾಗೆಯೇ ಸಭಾ ನಾಯಕರು ಮಾತನಾಡುವಾಗಲೂ ಅಷ್ಟೇ ಗೌರವವನ್ನು ಈ ಸದನದ ಸದಸ್ಯರು ಕೊಡಬೇಕಾಗುತ್ತದೆ ಒಂದು ಮಾತನ್ನು ನಾನು ದುಃಖದಿಂದ ಹೇಳಬೇಕಾಗುತ್ತದೆ. ಏನೆಂದರೆ ವಿರೋಧ ಪಕ್ಷದ ನಾಯಕರು ಕೂಡ ತುಟಿ ಮೀರಿ ಮಾತನಾಡುವುದಾದರೆ, ಅದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಅಷ್ಟೇ.

ಶ್ರೀ ಹೆಚ್. ಡಿ. ದೇವೇಗೌಡ.—ಯಾರೇ ಆಗಲೀ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರವೂ ಕೂಡ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇಷ್ಟೇ ಕೇಳಿಕೊಳ್ಳುತ್ತೇನೆ ಅದು ನಮ್ಮ ಕಡೆ ಇರಬಹುದು, ಅಥವಾ ನಿಮ್ಮ ಕಡೆ ಇರಬಹುದು, ಒಂದು ವೇಳೆ ಸರ್ಕಾರ ಕೂಡ ತುಟಿ ಮೀರಿ ಮಾತನಾಡುವುದಾದರೆ ಅದನ್ನು ಖಂಡನೆ ಮಾಡುವುದಕ್ಕೆ ಅವಕಾಶ ಇದೆ. ಆ ಅವಕಾಶವನ್ನು ಯಾರು ಮೊಟಕು ಮಾಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಕಡೆಯ ಮಾನ್ಯ ಸದಸ್ಯರುಗಳು ಎದ್ದು ನಿಂತು ಕೂಗಿದಾಗ ತಾವುಗಳೂ ಸಹ ಎದ್ದು ನಿಂತು ಕೂಗುವುದಾದರೆ ಅದರಿಂದ ಪ್ರಯೋಜನ ಇಲ್ಲ. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಮ್ಮ ಸ್ಥಾನ ಬಹಳ ಎತ್ತರವಾದ ಸ್ಥಾನ ನಿಮ್ಮ ಮನಸ್ಸಿನಲ್ಲಿ ಆಕ್ರೋಶ ಇದ್ದರೂ, ಎಷ್ಟೇ ನಿಮ್ಮ ಮನಸ್ಸಿನಲ್ಲಿ ಕಿಡಿ ಹಾರತಕ್ಕ ಸನ್ನಿವೇಶ ಇದ್ದರೂ ಅದನ್ನು ತಡೆದುಕೊಂಡು ಮಾತನಾಡಬೇಕು. ನೀವು ಮಾತನಾಡುವಾಗ, ಬೇರೆ ಎಲ್ಲ ಮಾನ್ಯ ಸದಸ್ಯರು ಎದ್ದು ಕೂಗಾಡಿದರೆ ಅದರಿಂದ ಸದನಕ್ಕೆ ಗೌರವ ಬರುವುದಿಲ್ಲ.

ಶ್ರೀ ಎಂ. ರಾಮಪ್ಪ.—ದೇವೇಗೌಡರೇ, ನಿಮ್ಮಿಂದ ಬುದ್ಧಿವಾದ ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇಷ್ಟು ಹೇಳುತ್ತೇನೆ. ನೀವು ಎಷ್ಟೇ ಟೀಕೆ ಟಿಪ್ಪಣಿಗಳನ್ನು ಮಾಡಿದರು ಅದನ್ನು ನಾನು ತೆಗೆದುಕೊಳ್ಳುತ್ತೇವೆ. ಎಷ್ಟೇ ಕಾಠಿಣ್ಯವಾದ ಟೀಕೆಗಳನ್ನು ಮಾಡಿದರೂ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ಸದನದ ಗೌರವ ಮತ್ತು ಸ್ಥಾನವನ್ನು ಕಾಪಾಡುವುದರಲ್ಲಿ ನಾವು ಹಿಂದೆ ಬೀಳುವುದಿಲ್ಲ. ನಿಯಮಾವಳಿಗಳ ಪ್ರಕಾರ ಯಾವ ವಿಷಯವನ್ನೂ ಬೇಕಾದರೂ ತಾವು ಕೇಳಿ. ೨೨೪ ಜನ ಸದಸ್ಯರುಗಳೂ ಸಹ ಒಂದಲ್ಲ ಒಂದು ರೂಪದಲ್ಲಿ ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶ ಇದೆ. ಪ್ರಶ್ನೋತ್ತರ ಕಾಲ ಇದೆ, ಡಿಮ್ಯಾಂಡ್‌ಗಳ ಮೇಲೆ ಮಾತನಾಡುವಾಗ ಸ್ಪಷ್ಟೀಕರಣ ವನ್ನು ಕೇಳಬಹುದು. ಅಪ್ರೊಪ್ರಿಯೇಷನ್ ಬಿಲ್‌ಗಳನ್ನು ಸಭೆಯ ಮುಂದೆ ಇಟ್ಟಾಗ ಕೇಳಬಹುದು. ೩೩೪ರ ನಿಯಮಾವಳಿಗಳ ಮೇಲೆ ಕೇಳಬಹುದು ಇನ್ನೂ ನಾನಾ ನಿಯಮಗಳು ಇವೆ. ಅದು ಬಿಟ್ಟು ಈ ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ ? ಅಷ್ಟು ದೂರ ನೀವು ಹೋಗುವುದಕ್ಕೆ ಸಾಧ್ಯವಿಲ್ಲ. ಸಭೆ ನಡೆಸುವ ಮಾರ್ಗ ನಮಗೆ ಗೊತ್ತಿದೆ. ಜನ ನಮಗೆ ಓಟು ಕೊಟ್ಟಿದ್ದಾರೆ, ನಾವು ಏನೂ ಓಡಿ ಹೋಗುವುದಿಲ್ಲ. ನಾನು ಥ್ರೆಟನ್ ಮಾಡುವುದಿಲ್ಲ.

ಶ್ರೀ ರಾಮಪ್ಪ.—ಥ್ರೆಟನ್ ಬೈದಿ ಲಕ್ಷ್ಮೀಸಾಗರ್

ಒಬ್ಬ ಮಾನ್ಯ ಸದಸ್ಯರು.—ರಾಮಪ್ಪನವರೇ ಕುಳಿತುಕೊಳ್ಳಿ ನಿಮಗೆ ಕನ್ನಡವೇ ಬರುವುದಿಲ್ಲ. ಇನ್ನೂ ಇಂಗ್ಲೀಷನಲ್ಲಿ ಬೇರೆ ಹೇಳುತ್ತೀದ್ದೀರಿ

ಶ್ರೀ ಎಚ್. ಡಿ. ದೇವೇಗೌಡ.—"ಥ್ರೆಟ್" ಎನ್ನುವ ಮಾತನ್ನು ನಾನು ಇಲ್ಲಿ ಉಪಯೋಗ ಮಾಡುವುದಿಲ್ಲ.

SRI M. RAMAPPA —Threat by Sri Lakshmisagar . ...

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.—ನಾನು ಮತ್ತೊಮ್ಮೆ ಮಾನ್ಯ ವಿರೋಧಪಕ್ಷದ ನಾಯಕರವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಏನೆಂದರೆ ಅಧ್ಯಕ್ಷರು ಒಂದು ವೇಳೆ ಅವಶ್ಯ ಬಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು, ಹಿರಿಯ ಸದಸ್ಯರನ್ನು, ಮಾಜಿ ನಾಯಕರನ್ನು, ಮುಂತಾಗಿ ಸಂಬಂಧಪಟ್ಟ ವರೆಲ್ಲರನ್ನು, ತಮ್ಮ ಕೋಣೆಗೆ ಕರೆಯಲಿ, ಅಲ್ಲಿ ಕುಳಿತುಕೊಂಡು ಸಮಾಧಾನದಿಂದ ನಾವೆಲ್ಲರೂ ಈ ಸದನವನ್ನು ಹೇಗೆ ಗೌರವಪೂರ್ಣವಾಗಿ ನಡೆಸಿಕೊಂಡು ಹೋಗ ಬೇಕು, ಈ ಸಭೆಯ ಘನತೆ ಗೌರವ ಗಳನ್ನು ಹೇಗೆ ಕಾಪಾಡಿಕೊಂಡು ಹೋಗ ಬೇಕೆಂದು ಚರ್ಚೆ ಮಾಡೋಣ ಸದನದಲ್ಲಿ ಯಾರೇ ಆಗಲಿ ತನ್ನ ಚೌಕಟ್ಟಿನಲ್ಲಿ ಇದ್ದು ವರ್ತಿಸ ಬೇಕಾಗುತ್ತದೆ. ಅಲ್ಲಿ ಅವರು, ಇವರು ಎಂದು ಬರುವುದಿಲ್ಲ. ಸದನಕ್ಕೆ ತನ್ನದೇ ಆದ ನೀತಿನಿಯಮಗಳು ಇವೆ ಮಾನ್ಯ ನಾರಾಯಣ ಕುಮಾರ್‌ರವರ ವರ್ತನೆ ಕೂಡಾ ಸರಿಯಾಗಿದೆ ಎಂದು ನಾನು ಸಮರ್ಥಿಸಿಕೊಳ್ಳ ಬಯಸುವುದಿಲ್ಲ. ಅದೇ ರೀತಿಯಲ್ಲಿ ಇತರರ ಬಗ್ಗೆ ಕೂಡಾ. ಯಾರೇ ಆಗಲಿ ನಿಯಮಗಳ ಚೌಕಟ್ಟಿನಲ್ಲಿ ಗೌರವಯುತವಾಗಿ ಇರಬೇಕು. ನಮ್ಮ ಕರ್ನಾಟಕ ರಾಜ್ಯದ ಉಭಯ ಸದನಗಳ ಇತಿಹಾಸವು ಹಿಂದೂಸ್ಥಾನದಲ್ಲಿಯೇ ಮೇಲ್ಮಟ್ಟದಲ್ಲಿದೆ. ಅದನ್ನು ಯಾವುದೇ ಕಾರಣಗಳಿಗಾಗಿ, ಯಾವುದೇ ಸಂದರ್ಭಗಳಲ್ಲಿ ಕೆಳ ಮಟ್ಟಕ್ಕೆ ಇಳಿಯುವುದಕ್ಕೆ ನಾವು ಯಾರೂ ಕೂಡಾ ಅವಕಾಶವನ್ನು ಕೊಡಬಾರದೆಂದು ನಾನು ತಮ್ಮೆಲ್ಲರಲ್ಲಿ ಕೇಳಿಕೊಳ್ಳುತ್ತೇನೆ. ಅದಕ್ಕಾಗಿ ಈ ಒಂದು ಒಳ್ಳೆಯ ಸತ್ ಸಂಪ್ರದಾಯವನ್ನು ಕಾಪಾಡಿಕೊಂಡು ಮುಂದುವರಿಯುವ ವಿಚಾರದಲ್ಲಿ ನಿಮ್ಮ ಕೋಣೆಯಲ್ಲಿ ಒಂದು ದಿನ ಸಂಬಂಧಪಟ್ಟವರೆಲ್ಲರನ್ನು ಕರೆಯಿಸಿ, ಅಲ್ಲಿ ಕುಳಿತು, ವಿಚಾರ ವಿಮರ್ಶೆ ಮಾಡಿ ಒಂದು ನಿರ್ಣಯವನ್ನು ಮಾಡೋಣ. ನಮ್ಮ ಸದನದ ಸತ್ ಸಂಪ್ರಾದಾಯವನ್ನು ಒಳ್ಳೆಯ ರೀತಿ ಯಲ್ಲಿ ಮುಂದುವರಿಸಿಕೊಂಡು ಹೋಗೋಣ, ಈ ದಿಶೆಯಲ್ಲಿ ಎಲ್ಲರೂ ಒಂದೇ ಮತಕ್ಕೆ ಬರೋಣ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಮ್ಮ ಮುಂದಿನ ಕಲಾಪಗಳಿಗೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಲೋಕೋಪಯೋಗಿ ಸಚಿವರಾದ ದೇವೇಗೌಡರು ಕೆಲವು ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಪುನಃ ಹೇಳತಕ್ಕಂತಹ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತೇನೆ. ಈ ಸದನದ ಕಾರ್ಯಕಲಾಪಗಳು

ಸುಮವಾಗಿ ನಡೆಯುವುದಕ್ಕೆ ಸದನದ ಗೌರವವನ್ನು ಕಾಪಾಡುವುದಕ್ಕೆ, ತಾವುಗಳು, ಸಭಾನಾಯಕರು, ನಾನು, ಹಾಗೂ ಹಿರಿಯ ನಾಯಕರುಗಳು ಆ ಕಡೆಯ ಮತ್ತು ಈ ಕಡೆಯ ಸದಸ್ಯರು ಸೇರಿ ಚರ್ಚೆ ಮಾಡಿದರೆ ಒಳ್ಳೆಯದು ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ನನಗೂ ಕೂಡಾ ಆ ಸಂದರ್ಭ ಬಂದಿದೆ ಎಂದು ಅನಿಸುತ್ತದೆ, ಆ ಸೂಚನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಅಂದರೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದಾಗ ಆಗಲಿ, ಸಭಾ ನಾಯಕರು ಮಾತನಾಡಬೇಕಾದಾಗ ಆಗಲಿ, ಸದನದ ಮಾನ್ಯ ಬೇರೆ ಸದಸ್ಯರು ಅವರಿಗೆ ಪೂರ್ಣ ಅವಕಾಶವನ್ನು ಮಾಡಿಕೊಡಬೇಕಾದುದು ಅತ್ಯಂತ ಅವಶ್ಯ ಎಂದು ಮತ್ತು ಸೂಕ್ತ ಎಂದು ಹೇಳಿದ್ದಾರೆ. ಈ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದಂತಹ ವಿಚಾರ. ಹಾಗೆಯೇ ನಾನೇ ಇರಬಹುದು, ಅವರೇ ಇರಬಹುದು, ಈಗಿನ ಸಭಾನಾಯಕರನ್ನು ನೋಡಿದ್ದೇವೆ ಹಾಗೂ ಈ ಹಿಂದೆ ಇದ್ದವರನ್ನು ಕಂಡಿದ್ದೇವೆ. ಮಾನ್ಯ ದೇವೇಗೌಡರು ನಾನು ಎದ್ದು ನಿಂತು ಮಾತನಾಡುವಾಗ ನಿಮ್ಮ ಪಕ್ಷದ ಸದಸ್ಯರು ಎದ್ದು ನಿಂತು ಮಾತನಾಡುವುದು ಒಳ್ಳೆಯದಲ್ಲ ಎಂದು ಸೂಚಿಸಿದರು. ಅದು ಎಲ್ಲರಿಗೂ ಅನ್ವಯವಾಗುತ್ತದೆ. ಇದು ಒಂದು ಒಳ್ಳೆಯ ನೀತಿ ಹಾಗೂ ಸೂಚನೆ ಎಂದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದೇ ಕಾಲದಲ್ಲಿ ಈ ಮಾತನ್ನು ಎರಡು ಕಡೆಯವರಿಗೂ ಅನ್ವಯ ಮಾಡಬೇಕು. ನಮ್ಮ ಕಡೆಯ ಸದಸ್ಯರು ಕೂಡ ಅದನ್ನು ಅನುಸರಿಸಬೇಕು. ಮತ್ತು ಸದನದ ಕಾರ್ಯಕಲಾಪಗಳು ನಡೆಯುವಲ್ಲಿ ವಿರೋಧಪಕ್ಷದ ವತಿಯಿಂದ ಯಾವ ರೀತಿಯ ಸಹಕಾರ ಮತ್ತು ಸೌಹಾರ್ದಯುತ ನಡವಳಿಕೆ ಇರಬೇಕು, ಘನಗೌರವಗಳನ್ನು ಹೇಗೆ ಮೇಲ್ಮಟ್ಟದಲ್ಲಿ ಕಾಪಾಡಿಕೊಂಡು ಬರಬೇಕು ಎಂಬ ಬಗ್ಗೆ ಅವರಿಗೆ ಇರುವಷ್ಟು ಕಳಕಳಿ ನಮಗೂ ಇದೆ. ವಿರೋಧ ಪಕ್ಷದ ನಾಯಕರಾಗಿ ಕುಳಿತುಕೊಳ್ಳ ತಕ್ಕಂತಹ ಸದಸ್ಯರು ಯಾರೇ ಇರಬಹುದು, ಆ ಜವಾಬ್ದಾರಿಯನ್ನು ನಾವು ಇವೊತ್ತು ಬದಿಗೊತ್ತಿ ಇಲ್ಲಿ ಕೆಲಸ ಮಾಡುತ್ತಾ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇಲ್ಲಿ ಸದನದ ನಿಯಮಾವಳಿಗಳ ಮೇರೆಗೆ, ಕಾನೂನಿನ ಚೌಕಟ್ಟಿನಲ್ಲಿ. ನಮ್ಮ ಇತಿಮಿತಿಗಳನ್ನು ಅರಿತು, ನಮ್ಮ ಜವಾಬ್ದಾರಿಯನ್ನು ಅರಿತು ಅದರ ಚೌಕಟ್ಟಿನಲ್ಲಿ ನಾವುಗಳು ಕೆಲಸ ಮಾಡುತ್ತಾ ಇದ್ದೇವೆ. ಹಾಗೆಯೇ ಇದೇ ನೀತಿಯನ್ನುಗಳನ್ನು ಆಕಡೆಯವರು ಅನುಸರಿಸುತ್ತಾರೆ ಎಂದು ನಾವು ನಂಬಿದ್ದೇವೆ. ಸಹಕಾರ ಕೊಡುವ ಸಂಬಂಧವಾಗಿ ಮಾತನಾಡುವಾಗ ಮಾನ್ಯ ಸಚಿವರು ಹೇಳಿದರು. ನಮಗೆ ಸದನವನ್ನು ಹೇಗೆ ನಡೆಸಬೇಕೆಂದು ಗೊತ್ತಿದೆ ಕಲಾಪಗಳನ್ನು ಸೂಕ್ತವಾದ ರೀತಿಯಲ್ಲಿ ನಡೆಸಬೇಕಾಗುತ್ತದೆ ಎಂದು ಹೇಳಿದ್ದಾರೆ. ನಮಗೆ ತಾವು ಸಾಕಷ್ಟು ಅವಕಾಶವನ್ನು ಮಾಡಿಕೊಡುತ್ತೀರಿ ಎಂಬ ನಂಬಿಕೆ ಇದೆ, ಈ ಬಗ್ಗೆ ಹೆಚ್ಚಿಗೆ ಒತ್ತಾಯ ಮಾಡಲಿಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ದೇವೇಗೌಡರಿಗೆ ಗೊತ್ತಿಲ್ಲ, ಆ ದೃಷ್ಟಿಯಿಂದ ಒತ್ತಾಯ ಮಾಡಿದ್ದೇನೆ, ಬೇರೆ ಉದ್ದೇಶ ಇಲ್ಲ. ಹಾಗೆಯೇ ಸದನವನ್ನು ಹೇಗೆ ನಡೆಸ ಬೇಕೆಂದು ಗೊತ್ತಿದೆ ಎಂದು ದೇವೇಗೌಡರು ಹೇಳಿದ್ದಾರೆ, ಅವರಿಗೆ ಗೊತ್ತಿದ್ದರೆ ನಮ್ಮ ಅಭಿಪ್ರಾಯವನ್ನು ಸಹ ಮಾನ್ಯ ದೇವೇಗೌಡರು ಆಲಿಸ ಬೇಕು.

ಶ್ರೀ ಜೆ. ಎಚ್. ಪಟೇಲ್.—ಹಾಗಾದರೆ ತಿಂಗಳುಗಟ್ಟಲೆ ಇದನ್ನೇ ಮಾತನಾಡೋಣ ಅಲ್ಲವೆ? ಇಷ್ಟರ ತನಕ ನೀವು ಮಾತನಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಮೊದಲಿನಿಂದಲೂ ನೀವು ಇಲ್ಲವಲ್ಲ?

ಶ್ರೀ ಜೆ. ಎಚ್. ಪಟೇಲ್.—೯೦ ನಿಮಿಷಗಳನ್ನು ನೀವು ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ರಿಪ್ಲೈ ಸರಿಯೇ?

ಶ್ರೀ ಜೆ. ಎಚ್. ಪಟೇಲ್.—ಇದರ ಸಾರ್ಥಕ ಏನು ಹೇಳಿ?

ಶ್ರೀ ಎಸ್. ಬಂಗಾರಪ್ಪ.—ಪೂರ್ತಿಯಾಗಿ ಕೇಳಿ, ಹೇಳುತ್ತೇನೆ. ಮಾನ್ಯ ದೇವೇಗೌಡರು ನೀತಿಯ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಹೇಳಬೇಕಾಗುತ್ತದೆ. ನಿಮ್ಮ ಭಾಷಣವನ್ನು ನಾವು ಕೇಳಿದ್ದೇವೆ, ನಮ್ಮ ಭಾಷಣವನ್ನು ನೀವು ಕೇಳುವುದು ಬೇಡವೇ? ನಮ್ಮ ಜವಾಬ್ದಾರಿ ಏನು ಎಂದು ನಮಗೆ ಗೊತ್ತಿದೆ. ನಮ್ಮ ಸಹಕಾರವನ್ನು ಈ ಸಭೆಯ ವಿಷಯದಲ್ಲಿ ಸೂಕ್ತವಾಗಿ ಮುಂದುರಿಸಿಕೊಂಡು ಹೋಗುತ್ತೇವೆ.

ಅಧ್ಯಕ್ಷರು.—ಈಗ ಸಭೆಯಲ್ಲಿ ಈ ಕಡೆಯೂ ಹತ್ತು ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದೀರಿ, ಆ ಕಡೆಯೂ ಮಾತನಾಡುವವರಿದ್ದಾರೆ. ಅವರಿಗೆಲ್ಲಾ ನಾನು ಮುಂದೆ ಡಿಮಾಂಡ್ಸ್‌ನ

ವಿಚಾರದಲ್ಲಿ ಚರ್ಚೆ ಬಂದಾಗ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಈಗ ಚರ್ಚೆ ಮುಗಿದಿದೆ, ವಿವರಣೆ ಮುಗಿದಿದೆ, ಡಿಮಾಂಡ್ಸ್ ಮೇಲೆ ಮತ್ತೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಾಗಿದೆ. ಮುಖ್ಯ ಮಂತ್ರಿಗಳು ನಾನು ಹೇಳಿದ ಮೇಲೆ ಹೋಗಿದ್ದಾರೆ. ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಇನ್ನೂ ಬೇಕಾದಷ್ಟು ಅವಕಾಶಗಳು ಇದೆ. ಯಾರ‍್ಯಾರು ಮಾತನಾಡಿಲ್ಲ ಅವರು ಯಾರೇ ಇರಲಿ, ಅವರಿಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಜನರಲ್ ಡಿಸ್‌ಕಷನ್ ಇದ್ದಾಗ ಅವರಿಗೆ ಸಮಯ ಮಾಡಿ ಕೊಟ್ಟಂತೆ ಡಿಮಾಂಡ್ಸ್ ಮೇಲೆಯೂ ಕೂಡಾ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಆ ಪ್ರಕಾರ ಅವಕಾಶ ಮಾಡಿಕೊಡುತ್ತೇನೆ. ನೀವು ಕೊಟ್ಟಂತಹ ಅಧಿಕಾರದ ಪ್ರಕಾರ ನಾನು ತೀರ್ಮಾನ ಕೊಟ್ಟಿದ್ದೇನೆ. ಇಲ್ಲಿಗೆ ಈ ವಿಷಯ ಮುಗಿಸಿ ಮುಂದಿನ ಕಲಾಪ ಪ್ರಾರಂಭ ಮಾಡೋಣ, ಈಗ ಪ್ರಶ್ನೋತ್ತರಗಳು.

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಆರು ತಿಂಗಳಿಗಿಂತ ಹೆಚ್ಚು ಅವಧಿಯವರೆಗೆ ಅಮಾನತ್ತಿನಲ್ಲಿ ಇಡಲಾದ ಮಹಾನಗರ ಸಭೆಯ ನೌಕರರ ಮಾಹಿತಿ

೯೦೪. ಶ್ರೀ ಆರ್. ಎಸ್. ಮಾನೆ (ಬೆಳಗಾವಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಆರು ತಿಂಗಳಿಗಿಂತ ಹೆಚ್ಚಿಗೆ ಅಮಾನತ್ತಿನಲ್ಲಿ ಇಟ್ಟಿರುವ ಪರೀಕ್ಷಕರು ಮತ್ತು ಗುಮಾಸ್ತರುಗಳ ಸಂಖ್ಯೆ.

(ಆ) ಅಮಾನತ್ತಿನಲ್ಲಿ ಇಟ್ಟು ಆದೇಶ ಹೊರಡಿಸುವ ಅಧಿಕಾರಿಯಾವರಾರು

(ಇ) ಸಂಬಂಧಪಟ್ಟ ನೌಕರರ ಮೇಲೆ ಯಾವಾಗ ವಿಚಾರಣೆ ಪ್ರಾರಂಭಿಸಿದೆ

(ಈ) ವಿಚಾರಣೆ ಆಗದಿರುವ ಬಗ್ಗೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ೩ ಪರೀಕ್ಷಕರು
೩ ದ್ವಿತೀಯ ದರ್ಜೆ ಗುಮಾಸ್ತರು

(ಆ) ಆಯುಕ್ತರು, ಮಹಾನಗರಸಭೆ, ಬೆಳಗಾವಿ

(ಇ)

ಕ್ರಮ ಸಂಖ್ಯೆ	ಅಮಾನತ್ತಿನಲ್ಲಿ ಇಟ್ಟಿರುವವರ ಹೆಸರು	ವಿಚಾರಣೆ ಪ್ರಾರಂಭಿಸಿದ ದಿನಾಂಕ
೧	೨	೩
೧	ಶ್ರೀ ಡಿ. ಎಚ್. ಸದೇಕರ, ದ್ವಿತೀಯ ದರ್ಜೆ ಗುಮಾಸ್ತರು	೨೭ನೇ ಜೂನ್ ೧೯೭೪
೨	ಶ್ರೀ ಜಿ. ಸಿ. ಬಾಳಗಿ, ಆರೋಗ್ಯ ಪರೀಕ್ಷಕರು	೧೭ನೇ ಏಪ್ರಿಲ್ ೧೯೭೫
೩	ಶ್ರೀ ಸಿ. ಬಿ. ಹೊಸಮನಿ, ಆರೋಗ್ಯ ಪರೀಕ್ಷಕರು (ತಿರುಗಿ ಸೇವೆಯಲ್ಲಿ ತೆಗೆದುಕೊಳ್ಳಲಾಗಿದೆ)	೧೭ನೇ ಏಪ್ರಿಲ್ ೧೯೭೫
೪	ಶ್ರೀ ಯು. ಎನ್. ಕುಲಕರ್ಣಿ, ದ್ವಿತೀಯ ದರ್ಜೆ ಗುಮಾಸ್ತರು	೯ನೇ ಸೆಪ್ಟೆಂಬರ್ ೧೯೭೪
೫	ಶ್ರೀ ಎನ್. ವೈ ಮರಡಿಮನಿ, ದ್ವಿತೀಯ ದರ್ಜೆ ಗುಮಾಸ್ತರು	೧೦ನೇ ಡಿಸೆಂಬರ್ ೧೯೭೪
೬	ಶ್ರೀ ಐ. ಆರ್. ನರಗಟ್ಟಿ, ಕಾಮಗಾರಿ ಪರೀಕ್ಷಕರು	೨೩ನೇ ಜುಲೈ ೧೯೭೫